ಗುರುವಾರ, ಆಗಸ್ಟ್ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 215 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,350 ▲	17,388 ▲	₹53,100 (ಬೆಂಗಳೂರು) ▼	₹58,800 (ಬೆಂಗಳೂರು) ▼	79.15 ▼

ಬೆಣ್ಣೆನಗರಿಯಲ್ಲಿ ಜನಸಾಗರ: ಸಿದ್ದರಾಮಯ್ಯ 75ನೇ ಜನ್ಮದಿನದ ಅಮೃತ ಮಹೋತ್ಸವ

‘ಕೈ’ ನಗಾರಿ: ಒಗ್ಗಟ್ಟಿನ ಸವಾರಿ

• ಸಿದ್ದಯ್ಯ ಹಿರೇಮಠ

ದಾವಣಗೆರೆ: ನಾಡಿನ ಎಲ್ಲ ದಾರಿಗಳು ಬೆಣ್ಣೆನಗರಿ ಕಡೆಗೆ ಹರಿದು ಬಂದಂತೆ ಸಮಾವೇಶಗೊಂಡ ಜನಸಾಗರ, ಕಾಂಗ್ರೆಸ್– ಸಿದ್ದರಾಮಯ್ಯನವರಿಗೆ ಜಯ ಘೋಷ, ನಾಯಕರು–ಕಾರ್ಯಕರ್ತರ ಉತ್ಸಾಹದ ಹೊನಲಿನ ಮಧ್ಯೆ ಇಲ್ಲಿ ನಡೆದ ಸಿದ್ದರಾಮಯ್ಯನವರ 75ನೇ ಜನ್ಮದಿನದ ‘ಅಮೃತ ಮಹೋತ್ಸವ’ವು ವಿಧಾನಸಭೆ ಚುನಾವಣೆಗೆ ‘ಕೈ’ ಪಡೆಯನ್ನು ಅಣಿಗೊಳಿಸಲು ಬಡಿದೆಬ್ಬಿಸಿದ ನಗಾರಿ ಸದ್ದಿನಂತೆ ಮಾರ್ದನಿಸಿತು.

ಮಧ್ಯಕರ್ನಾಟಕದ ವಾಣಿಜ್ಯ ನಗರಿಯಾಗಿರುವ ದಾವಣಗೆರೆಯಲ್ಲಿ ಶಕ್ತಿ ಪ್ರದರ್ಶಿಸುವ ಮೂಲಕ ಮುಂದಿನ ಚುನಾವಣೆಗೆ ಇಡೀ ರಾಜ್ಯಕ್ಕೆ ಸಂದೇಶ ರವಾನಿಸಬೇಕೆಂಬ ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯ ಅವರ ಅಭಿಮಾನಿಗಳು ಹಮ್ಮಿಕೊಂಡ, ಅಮೃತಮಹೋತ್ಸವ ತಮ್ಮ ನಾಯಕನ ವೈಭವೀಕರಣಕ್ಕೆ ಸೀಮಿತವಾಗಲಿಲ್ಲ. ಅಧಿಕಾರ ಕಳೆದುಕೊಂಡ ಕಾಂಗ್ರೆಸ್ ನಾಯಕರು–ಕಾರ್ಯಕರ್ತರಲ್ಲಿ ಅಮೃತ ಸಿಂಚನ ಮಾಡಿಸುವ ಸಂಜೀವಿನಿಯಂತೆ ಹುರುಪು ತುಂಬಿಸುವಲ್ಲಿ ಯಶಸ್ವಿ ಆಯಿತು. ಇದಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಾಕ್ಷಿಯಾದರು.


ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖಂಡ ಅಶೋಕ ಪಟ್ಟಣ ಇದ್ದಾರೆ – ಪ್ರಜಾವಾಣಿ ಚಿತ್ರ/ಸತೀಶ ಬಡಿಗೇರ್

ನಾಯಕತ್ವಕ್ಕಾಗಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಧ್ಯೆ ಪೈಪೋಟಿ ಇದೆ ಎಂಬ ವರ್ತಮಾನವನ್ನು ಹುಸಿಗೊಳಿಸುವಂತೆ ನಡೆದುಕೊಂಡ ನಾಯಕರು, ಆಡಳಿತಾರೂಢ ಬಿಜೆಪಿಯನ್ನು ಮಣಿಸಿ ಅಧಿಕಾರ ಹಿಡಿಯಲು ಒಗ್ಗಟ್ಟು ತೋರುವುದಾಗಿ ಘೋಷಿಸಿದರಲ್ಲದೇ, ಅದನ್ನು ಪ್ರದರ್ಶಿಸಿದರು. ‘ನಮ್ಮಿಬ್ಬರ ಮಧ್ಯೆ ಯಾವುದೇ ಒಡಕಿಲ್ಲ. ಅದು ಬಿಜೆಪಿ ಹಾಗೂ ಕೆಲವು ಮಾಧ್ಯಮಗಳ ಸೃಷ್ಟಿ. ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಪಕ್ಷವನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತರಲು ಸಾಮೂಹಿಕ ನಾಯಕತ್ವದಲ್ಲಿ ಶ್ರಮಿಸುತ್ತೇವೆ’ ಎಂದು ಸಿದ್ದರಾಮಯ್ಯ ಘೋಷಿಸಿದರು. ‘ಅದಕ್ಕೆ ನಿಮ್ಮ ಆಶೀರ್ವಾದ ಬೇಕು’ ಎಂದು ಜನರನ್ನು ಉದ್ದೇಶಿಸಿ ಮೂರು ದಿಕ್ಕುಗಳಿಗೆ ಬೊಟ್ಟು ಮಾಡಿ ಕೋರಿದರು.

ಇದೇ ನಡಾವಳಿ ಪ್ರದರ್ಶಿಸಿದ ಡಿ.ಕೆ. ಶಿವಕುಮಾರ್, ‘ಇಂದಿರಾಗಾಂಧಿಯವರ ಆಯ್ದ ನುಡಿಮುತ್ತುಗಳು’ ಪುಸ್ತಕವನ್ನು ಸಿದ್ದರಾಮಯ್ಯನವರ ಕೈಗಿಟ್ಟು, ಅವರ ಬಲಗೈಯನ್ನು ಹಿಡಿದು ಮೇಲೆತ್ತಿ ಒಗ್ಗಟ್ಟಿನ ಬೆಸುಗೆ ಹಾಕಿದರು. ವೇದಿಕೆಯಲ್ಲಿ ಸಿದ್ದರಾಮಯ್ಯನವರನ್ನು ಆಲಂಗಿಸಿ ಒಮ್ಮತ ತೋರಿದರು.

6ನೇ ಪುಟ ನೋಡಿ

ಸಿದ್ದರಾಮಯ್ಯ ಸರ್ವಜನಾಂಗದ ನಾಯಕ: ಡಿ.ಕೆ. ಶಿವಕುಮಾರ್


‘ಸಿದ್ದರಾಮಯ್ಯ ಕೇವಲ ಹಿಂದುಳಿದ ವರ್ಗದ ನಾಯಕನಲ್ಲ. ಅವರು ಸರ್ವ ಜನಾಂಗದ, ಸರ್ವ ಧರ್ಮದ ನಾಯಕ’ ಎಂದು ಡಿ.ಕೆ. ಶಿವಕುಮಾರ್ ಬಣ್ಣಿಸಿದರು. ವಿರೋಧ ಪಕ್ಷಗಳನ್ನು ಟೀಕಿಸುವ ಗೋಜಿಗೆ ಹೋಗದ ಅವರು, ಮುಂಬರುವ ಚುನಾವಣೆಯಲ್ಲಿ ಹೈಕಮಾಂಡ್ ಸಾಮೂಹಿಕ ನಾಯಕತ್ವವನ್ನೇ ಬೆಂಬಲಿಸಿದೆ. ನಾನು ಅಥವಾ ಸಿದ್ದರಾಮಯ್ಯ ಮಾತ್ರ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯವಿಲ್ಲ. ಬದಲಿಗೆ, ನೀವೇ ಸರ್ಕಾರ ರಚನೆಯ ಸೂತ್ರಧಾರರು’ ಎಂದರು.

‘ರಾಜಕಾರಣದಲ್ಲಿ ಮುಂದುವರಿಯುವೆ’

‘ನಾನು ದೈಹಿಕವಾಗಿ, ಮಾನಸಿಕವಾಗಿ ಸದೃಢವಾಗಿ ಇರುವವರೆಗೂ ರಾಜಕಾರಣದಲ್ಲಿದ್ದು, ಜನಸೇವೆ ಮಾಡುತ್ತೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಿ ಹೇಳಿದರು.

‘ಸಾಮಾನ್ಯವಾಗಿ ನಾನು ಹುಟ್ಟುಹಬ್ಬ ಆಚರಿಸಿಕೊಳ್ಳುವುದಿಲ್ಲ. ಅದೇ ರೀತಿ, ಜನ್ಮದಿನ ಸಮಾರಂಭಗಳಿಗೆ ಹಾಜರಾಗದ ರಾಹುಲ್ ಗಾಂಧಿ ಅವರೂ ಇಲ್ಲಿಗೆ ಬಂದಿದ್ದಾರೆ. ಅವರು ದೇಶದ ಆಶಾಕಿರಣ’ ಎಂದು ಕೊಂಡಾಡಿದರು.

6ನೇ ಪುಟ ನೋಡಿ



ರಾಜ್ಯದಲ್ಲಿ ಮುಂದುವರಿದ ಮಳೆ ಅಬ್ಬರ

ಸಿಡಿಲು ಬಡಿದು ಮಹಿಳೆ ಸಾವು • ಪ್ರವಾಹದಲ್ಲಿ ಕೊಚ್ಚಿ ಹೋದ ಟ್ರಕ್ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಂಗಳವಾರ ರಾತ್ರಿ ಧಾರಾಕಾರ ಮಳೆಯಾಗಿದ್ದು, ಬುಧವಾರವೂ ಮುಂದುವರಿದಿದೆ. ಕೆಲವೆಡೆ ಸೇತುವೆಗಳ ಮೇಲೆ ನೀರು ಹರಿದ ಪರಿಣಾಮ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು. ಹಲವು ಗ್ರಾಮಗಳು ಜಲಾವೃತವಾಗಿವೆ.

ವಿಜಯಪುರ ಜಿಲ್ಲೆಯ ಹುಣಶ್ಯಾಳ ಗ್ರಾಮದಲ್ಲಿ ರೈತ ಮಹಿಳೆ ಜೈನಾಬಿ ನಜೀರ್ ಅಹ್ಮದ್ ಸಿಪಾಯಿ (55) ಎಂಬುವವರು ಹೊಲದಲ್ಲಿ ಮರದ ಕೆಳಗೆ ನಿಂತಿದ್ದಾಗ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

6ನೇ ಪುಟ ನೋಡಿ

‘ನೆರೆ ಪರಿಹಾರಕ್ಕೆ ₹500 ಕೋಟಿ’

ಮುಟ್ಟಳ್ಳಿ (ಕಾರವಾರ): ‘ರಾಜ್ಯದಾದ್ಯಂತ ಅತಿವೃಷ್ಟಿಯಿಂದ ಹಾನಿಗೀಡಾದ ಪ್ರದೇಶಗಳಲ್ಲಿ ತುರ್ತು ಪರಿಹಾರ ಕಾರ್ಯಗಳಿಗೆ ತಕ್ಷಣವೇ ₹500 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

6ನೇ ಪುಟ ನೋಡಿ

ಕಬ್ಬಿಗೆ ಎಫ್‌ಆರ್‌ಪಿ ಹೆಚ್ಚಳ



ನವದೆಹಲಿ (ಪಿಟಿಐ): ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪ್ರತಿ ಕ್ವಿಂಟಲ್‌ಗೆ ಪಾವತಿಸಬೇಕಿರುವ ಮೊತ್ತವನ್ನು ಕೇಂದ್ರ ಸರ್ಕಾರವು ₹15ರಷ್ಟು ಹೆಚ್ಚಿಸಿದೆ. ಈ ವರ್ಷದ ಅಕ್ಟೋಬರ್‌ನಿಂದ ಅನ್ವಯವಾಗುವಂತೆ ಕಾರ್ಖಾನೆಗಳು ಪ್ರತಿ ಕ್ವಿಂಟಲ್‌ಗೆ ₹ 305ರಷ್ಟು ಪಾವತಿಸಬೇಕಿದೆ.

2022–23ನೇ ಮಾರುಕಟ್ಟೆ ವರ್ಷಕ್ಕೆ ಅನ್ವಯ ಆಗುವಂತೆ ‘ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರ’ (ಎಫ್‌ಆರ್‌ಪಿ) ಹೆಚ್ಚಿಸಲು ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯ ಸಭೆಯು ಬುಧವಾರ ಒಪ್ಪಿಗೆ ನೀಡಿದೆ.

2021–22ರಲ್ಲಿ ನೀಡಿದ್ದ ಎಫ್‌ಆರ್‌ಪಿಗೆ ಹೋಲಿಸಿದರೆ 2022–23ರಲ್ಲಿ ಶೇ 2.6ರಷ್ಟು ಹೆಚ್ಚು ನಿಗದಿಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



75 ನೇ ಜನ್ಮದಿನದ ಅಮೃತ ಮಹೋತ್ಸವದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕರೆ

ಜನರೇ ಕೋಮುವಾದಿ ಸರ್ಕಾರ ಕಿತ್ತೆಸೆಯುವ ಶಪಥ ಮಾಡಲಿ

ದಾವಣಗೆರೆ: ಬಿಜೆಪಿಯ ಭ್ರಷ್ಟ ಮತ್ತು ಕೋಮುವಾದಿ ಆಡಳಿತವನ್ನು ಕೊನೆಗಾಣಿಸಲು ರಾಜ್ಯದ ಜನತೆ ಪಣ ತೊಡಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಜ್ಯದ ಜನರನ್ನು ಕೋರಿದರು.

ಬುಧವಾರ 75ನೇ ವಸಂತಕ್ಕೆ ಕಾಲಿರಿಸಿದ ಅವರು, ಅಭಿಮಾನಿಗಳು ಹಾಗೂ ಪಕ್ಷದ ವತಿಯಿಂದ ಇಲ್ಲಿ ನಡೆದ ಜನ್ಮದಿನದ 'ಅಮೃತ ಮಹೋತ್ಸವ' ಕಾರ್ಯಕ್ರಮದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿದರು.

'ಸತತ 44 ವರ್ಷಗಳ ಸಕ್ರಿಯ ರಾಜಕೀಯ ಜೀವನದಲ್ಲಿ ಇಂಥ ಭ್ರಷ್ಟ ಸರ್ಕಾರವನ್ನು ನೋಡಿರಲಿಲ್ಲ. ರಾಜ್ಯದಲ್ಲಿ ಬಡವರು, ರೈತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ದಲಿತರು ನೆಮ್ಮದಿಯಿಂದ ಜೀವನ ನಡೆಸಬೇಕೆಂದರೆ ಜಾತಿ, ಧರ್ಮಗಳ ಆಧಾರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರವನ್ನು ಕಿತ್ತೆಸೆಯಬೇಕು. ಜನ್ಮದಿನದ ಅಮೃತ ಮಹೋತ್ಸವ ಸಮಾರಂಭಕ್ಕೆ ಬಂದಿರುವ ಅಭಿಮಾನಿಗಳು ಈ ಕುರಿತ ಶಪಥ ಮಾಡುವ ಮೂಲಕ ನನಗೆ ಶುಭಾಶಯ ಕೋರಬೇಕು' ಎಂದು ಅವರು ಮನವಿ ಮಾಡಿದರು.

ನರೇಂದ್ರ ಮೋದಿ ಪ್ರಧಾನಿ ಆದ ನಂತರ ದೇಶದಲ್ಲಿ ದುರ್ಬಲರು ಆತಂಕ ಎದುರಿಸುವಂತಾಗಿದೆ. ಪ್ರಜಾಪ್ರಭುತ್ವ ಸಂಕಷ್ಟದಲ್ಲಿದೆ. ಸಂವಿಧಾನಕ್ಕೇ ರಕ್ಷಣೆ ಇಲ್ಲದಂತಾಗಿದೆ. ಹಿಂದೂ ರಾಷ್ಟ್ರ ನಿರ್ಮಾಣ ಮಾಡಿ ಜನರನ್ನು ಲೂಟಿ ಹೊಡೆಯುವ ಉದ್ದೇಶ ಬಿಜೆಪಿಯದ್ದಾಗಿದೆ. ಅಂತೆಯೇ ಅವರು 'ಕಾಂಗ್ರೆಸ್‌ಮುಕ್ತ' ಭಾರತ ನಿರ್ಮಾಣ ಮಾಡುವುದಾಗಿ ಘೋಷಿಸಿದ್ದರು. ಜನರು ಕಾಂಗ್ರೆಸ್ ಜೊತೆಗೆ ಇರುವವರೆಗೂ ಅವರ ಬಯಕೆ ಈಡೇರುವುದಿಲ್ಲ. ಸಂವಿಧಾನವನ್ನು ಬದಲಿಸಬೇಕೆಂಬ ಉದ್ದೇಶವೂ ಈಡೇರುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಎಂಟು ವರ್ಷಗಳ ಮೋದಿ ಆಡಳಿತದಲ್ಲಿ ದೇಶದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. 2014ರಲ್ಲಿ ₹ 53.11 ಲಕ್ಷ ಕೋಟಿಯಷ್ಟಿದ್ದ ಸಾಲ ಈಗ ₹ 155 ಲಕ್ಷ ಕೋಟಿಯಷ್ಟಾಗಿದೆ. 2018ರಲ್ಲಿ ₹ 2.42 ಲಕ್ಷ ಕೋಟಿಯಷ್ಟಿದ್ದ ರಾಜ್ಯದ ಸಾಲ ಬಿಜೆಪಿ ಆಡಳಿತದ ಅವಧಿಯಲ್ಲಿ ₹ 5.40 ಲಕ್ಷ ಕೋಟಿಯಾಗಿದೆ. ದೇಶದಲ್ಲಿ ದಲಿತರು, ಅಲ್ಪಸಂಖ್ಯಾತರನ್ನು ವಿಶೇಷವಾಗಿ ಯುವಕರನ್ನು ಹಾಳು ಮಾಡಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಕರ್ನಾಟಕದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಹಾಗೂ 'ಸಬ್‌ಕಾ ವಿಶ್ವಾಸ್' ಎಂದು ಹೇಳುತ್ತ ಅಧಿಕಾರಕ್ಕೆ ಬಂದ ಮೋದಿ ಭ್ರಷ್ಟಾಚಾರದ ವಿರುದ್ಧ ಗುತ್ತಿಗೆದಾರರು ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಕೊಟ್ಟ ಮಾತಿನಂತೆ ನಡೆಯಲಿಲ್ಲ ಎಂದು ಅವರು ದೂರಿದರು.

ಜನ ಬದಲಾವಣೆ ಬಯಸಿದ್ದಾರೆ. 2023ರಲ್ಲಿ ರಾಜ್ಯದಲ್ಲಿ, 2024ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಡಿಕೆಶಿ–ಸಿದ್ದರಾಮಯ್ಯ ನಾಯಕತ್ವ: 'ಸಿದ್ದರಾಮಯ್ಯ ಅವರ ವ್ಯಕ್ತಿತ್ವವನ್ನು ನಾನು ವೈಯಕ್ತಿಕವಾಗಿ ಇಷ್ಟಪಡುತ್ತೇನೆ. ಬಡವರ ಬಗೆಗಿನ ಅವರ ಕಳಕಳಿ, ಬದ್ಧತೆ, ವಿಚಾರಧಾರೆಗಳ ಬಗ್ಗೆ ಹೆಮ್ಮೆ ಇದೆ. ಅವರ ಆದರ್ಶಗಳನ್ನು ನಾನು ಸ್ವಾಗತಿಸುತ್ತೇನೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ರಾಜ್ಯದಲ್ಲಿನ ಸಾಮರಸ್ಯವನ್ನು ಬಿಜೆಪಿ ಹದಗೆಡಿಸುತ್ತಿದೆ ಎಂದು ದೂರಿದ ಅವರು, ಬಿಜೆಪಿ ಭ್ರಷ್ಟಾಚಾರ ಜಗಜ್ಜಾಹೀರಾಗಿದೆ. ಕರ್ನಾಟಕದ ದುರ್ಬಲರನ್ನು ಸಬಲಗೊಳಿಸಲು ಕಾಂಗ್ರೆಸ್ ಆಡಳಿತದ ಅಗತ್ಯವಿದೆ. ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಇಂದಿರಾ ಕ್ಯಾಂಟೀನ್ ಹಾಗೂ 'ಭಾಗ್ಯ' ಯೋಜನೆಗಳನ್ನು ಮುಂದುವರಿಸಲಾಗುತ್ತದೆ ಎಂದು ವಾಗ್ದಾನ ನೀಡಿದರು.

'ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಪಕ್ಷ ಉತ್ತಮವಾಗಿ ಮುನ್ನಡೆಯುತ್ತಿದೆ. ಕೆಪಿಸಿಸಿ ಅಧ್ಯಕ್ಷರಾಗಿ ಅವರು ಸಮರ್ಪಕ ಕೆಲಸ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿ ವೇದಿಕೆ ಮೇಲೆ ತಬ್ಬಿಕೊಂಡಿರುವುದು ನನಗೆ ಖುಷಿ ನೀಡಿದೆ. ಕಾಂಗ್ರೆಸ್ ಪಕ್ಷ ಒಗ್ಗಟ್ಟಿನೊಂದಿಗೆ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ' ಎಂದು ಅವರು ಸಂತಸ ವ್ಯಕ್ತಪಡಿಸಿದರು.

ನೋಟು ರದ್ದತಿ, ಜಿಎಸ್‌ಟಿ ರಾಷ್ಟ್ರೀಯ ದುರಂತ: ರಾಹುಲ್

ದಾವಣಗೆರೆ: ಪ್ರಧಾನಿ ಮೋದಿ ಅವರು 2016ರಲ್ಲಿ ಕೈಗೊಂಡ ನೋಟು ರದ್ದತಿ ನಿರ್ಧಾರ ಹಾಗೂ ತರಾತುರಿಯ ಸರಕು ಸೇವಾ ತೆರಿಗೆ (ಜಿಎಸ್‌ಟಿ) ಕಾಯ್ದೆ ಜಾರಿಯು ರಾಷ್ಟ್ರೀಯ ದುರಂತ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು.

ಪ್ರಧಾನಿಗೆ ಆಪ್ತರಾಗಿರುವ ಮೂರ್ನಾಲ್ಕು ಜನ ಉದ್ಯಮಿಗಳಿಗೆ ದೇಶದ ಸಂಪತ್ತನ್ನು ವರ್ಗಾಯಿಸಲು ಜಿಎಸ್‌ಟಿ ಕಾಯ್ದೆ ಜಾರಿ ಹಾಗೂ ನೋಟು ರದ್ದತಿಯಿಂದ ಸಾಕಷ್ಟು ನೆರವಾಗಿದೆ ಎಂದು ದೂರಿದ ಅವರು, ರೈತರ ಸಂಪತ್ತನ್ನು ಅಂಥ ಕೆಲವು ಉದ್ಯಮಿಗಳಿಗೇ ವರ್ಗಾಯಿಸಲು ನೆರವಾಗುವ ಉದ್ದೇಶದಿಂದಲೇ ಕೇಂದ್ರವು ಮೂರು ಕೃಷಿ ಕಾಯ್ದೆಗಳನ್ನು ಜಾರಿಗೊಳಿಸುವ ವಿಫಲಯತ್ನ ನಡೆಸಿತ್ತು ಎಂದರು.

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್



ದಾವಣಗೆರೆಯಲ್ಲಿ ಬುಧವಾರ ನಡೆದ ಸಿದ್ದರಾಮಯ್ಯ ಅವರ ಜನ್ಮ ದಿನದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕರಾದ ಡಿ.ಕೆ ಶಿವಕುಮಾರ್, ಕೆ.ಸಿ. ವೇಣುಗೋಪಾಲ್, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಜಮೀರ್ ಅಹಮ್ಮದ್, ಸಲೀಂ ಅಹಮ್ಮದ್, ಬಿ.ವಿ. ಶ್ರೀನಿವಾಸ್ ಮತ್ತಿತರರು ಭಾಗವಹಿಸಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ತರುವುದೇ ಗುರಿ: ಕೆ.ಸಿ.ವೇಣುಗೋಪಾಲ್

ದಾವಣಗೆರೆ: 'ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷದವನ್ನು ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ತರುವುದೇ ನಮ್ಮೆಲ್ಲರ ಗುರಿಯಾಗಿದೆ. ಮತ್ತೆ ಅಧಿಕಾರ ಹಿಡಿಯಲು ಅಗತ್ಯವಿರುವ ಎಲ್ಲಾ ರೀತಿಯ ಸಹಕಾರವನ್ನು ರಾಹುಲ್ ಗಾಂಧಿ ಹಾಗೂ ಎಐಸಿಸಿ ತಂಡವು ನೀಡಲಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದರು.

ಸಿದ್ದರಾಮಯ್ಯ ಅಮೃತ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ನಾಯಕತ್ವದಲ್ಲಿ 2013ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಚುನಾವಣಾ ಪ್ರಮಾಣಿಕೆಯಲ್ಲಿ ಘೋಷಿಸಿದ್ದ 165 ಭರವಸೆಗಳ ಪೈಕಿ ಎಲ್ಲವನ್ನೂ ಈಡೇರಿಸಲಾಗಿತ್ತು. ಬಿಜೆಪಿಯ ಈಗಿನ 40 ಪರ್ಸೆಂಟೇಜ್ ಸರ್ಕಾರದೊಂದಿಗೆ ಕಾಂಗ್ರೆಸ್ ಅವಧಿಯ ಆಡಳಿತವನ್ನು ಜನ ಹೋಲಿಸಿ ನೋಡಬೇಕು. ಈಗಿನ ಬಿಜೆಪಿ ಸರ್ಕಾರದ ಸಚಿವರು ಹಣ ಮಾಡುವುದರಲ್ಲೇ ತೊಡಗಿಕೊಂಡಿದ್ದಾರೆ. ಕೇಂದ್ರದ ಬಿಜೆಪಿ ಸರ್ಕಾರವು ಜಾರಿ ನಿರ್ದೇಶನಾಲಯ, ಸಿಬಿಐ ದುರ್ಬಳಕೆ ಮಾಡಿಕೊಂಡು ನಮ್ಮ ಪಕ್ಷದ ನಾಯಕರಿಗೆ ತೊಂದರೆ ಕೊಡುತ್ತಿದೆ. ರಾಜಕೀಯ ಷಡ್ಯಂತ್ರ ನಡೆಸಲಾಗುತ್ತಿದೆ. ಹೀಗಿದ್ದರೂ ರಾಹುಲ್ ಗಾಂಧಿ ಎದೆಗುಂದದೋ ಹೋರಾಟ ನಡೆಸುತ್ತಿದ್ದಾರೆ' ಎಂದರು.

'2023ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕವು ಕಾಂಗ್ರೆಸ್ ಪಕ್ಷಕ್ಕೆ ಜೀವ ನೀಡಲಿದೆ ಎಂಬ ವಿಶ್ವಾಸ ಇದೆ. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಉಳಿದ ನಾಯಕರು ಬಲ ನಮಗಿದೆ. ಸಿದ್ದರಾಮಯ್ಯ ಅವರು ಉತ್ತಮ ಸಿದ್ಧಾಂತವುಳ್ಳ ನಾಯಕರಾಗಿದ್ದು, ಅವರ ನಾಯಕತ್ವ ಗುಣವನ್ನು ಎಐಸಿಸಿ ಅರ್ಥ ಮಾಡಿಕೊಂಡಿದೆ' ಎಂದು ಹೇಳಿದರು.

'ಈ ಹಿಂದೆ ಕೆಟ್ಟ ಪಕ್ಷದಲ್ಲಿ ಒಳ್ಳೆಯ ವ್ಯಕ್ತಿ ಇದ್ದರು. ಒಳ್ಳೆಯ ಪಕ್ಷಕ್ಕೆ ಬಂದರೆ ಉತ್ತಮ ಅವಕಾಶ ಸಿಗುತ್ತದೆ ಎಂಬುದಕ್ಕೆ ಸಿದ್ದರಾಮಯ್ಯ ಅವರೇ ಉತ್ತಮ ನಿದರ್ಶನ' ಎಂದು ಹೇಳಿದರು.

ರಾಜಕೀಯ ದಾರಿದೀಪ: ಕೃಷ್ಣ ಬೈರೇಗೌಡ

ದಾವಣಗೆರೆ: 'ಸಿದ್ದರಾಮಯ್ಯ ಅವರ ಜೀವನವು ಸಾಮಾಜಿಕ ಬದಲಾವಣೆ ಹಾಗೂ ಏಕತೆಗೆ ಮಾದರಿಯಾಗಿದೆ. ಸಿದ್ದರಾಮಯ್ಯ ಅವರ ರಾಜಕೀಯವೇ ನಮ್ಮೆಲ್ಲರಿಗೂ ದಾರಿದೀಪವಾಗಿದೆ' ಎಂದು ಕಾಂಗ್ರೆಸ್ ಮುಖಂಡ ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಅಮೃತ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಬುದ್ಧ–ಬಸವ, ಗಾಂಧಿ ಅವರು ಸಮಾಜ ಸುಧಾರಣೆ ಮಾಡುವ ಮೂಲಕ ಸಮಾನತೆ ತರಲು ಯತ್ನಿಸಿದ್ದರು. ಅವರೆಲ್ಲರ ಗುರಿ ಐಕ್ಯತೆಯೂ ಆಗಿತ್ತು. ಕಾಂಗ್ರೆಸ್ ಪಕ್ಷವು ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡಲು, ಸಮಾಜದಲ್ಲಿ ಸಮಾನತೆ, ಐಕ್ಯತೆಯನ್ನು ತರಲು ಪ್ರಯತ್ನಿಸಿದೆ. ಆದರೆ, ಬಿಜೆಪಿಯು ಜನರನ್ನು ಒಡೆದು ಆಳುತ್ತಿದ್ದು, ಜಾತಿ–ಧರ್ಮಗಳ ನಡುವೆ ಅಸಮಾನತೆ ಹುಟ್ಟುಹಾಕುತ್ತಿದೆ' ಎಂದು ದೂರಿದರು.

'ಸಿದ್ದರಾಮಯ್ಯ ಅವರ ಜೀವನ ನಮ್ಮೆಲ್ಲರಿಗೂ ಮಾದರಿ ಹಾಗೂ ಸ್ಫೂರ್ತಿಯಾಗಿದೆ. ಇಂತಹ ನೂರಾರು ಸಿದ್ದರಾಮಯ್ಯ ಹುಟ್ಟಿ ಬರುವ ಮೂಲಕ ಸಮಾನತೆ ಜಯಿಸುವಂತಾಗಲಿ' ಎಂದರು. 'ಇಂದು ಕಾವೇರಿ, ಕೃಷ್ಣಾ, ನೇತ್ರಾವತಿ, ತುಂಗಭದ್ರಾ, ಕಾಳಿ ಸೇರಿದಂತೆ ರಾಜ್ಯದ ಎಲ್ಲಾ ನದಿಗಳೂ ದಿಕ್ಕನ್ನು ಬದಲಿಸಿ ದಾವಣಗೆರೆ ಕಡೆಗೆ ಹರಿದು ಬಂದಿದೆ. ಇದರಿಂದಾಗಿ ಜನ ಸಮೂಹದ ಸಮುದ್ರವೇ ದಾವಣಗೆರೆಯಲ್ಲಿ ನಿರ್ಮಾಣಗೊಂಡಿದೆ. ಜನರನ್ನು ಸೇರಿಸುವ ಇಂತಹ ಒಂದು ಶಕ್ತಿ ಇರುವುದು ಸಿದ್ದರಾಮಯ್ಯ ಅವರಿಗೆ ಮಾತ್ರ' ಎಂದು ಬಣ್ಣಿಸಿದರು.

ಭ್ರಷ್ಟ ಸರ್ಕಾರ ಕಿತ್ತೊಗೆದಾಗಲೇ ರಾಜ್ಯಕ್ಕೆ ನೆಮ್ಮದಿ: ಡಿ.ಕೆ. ಶಿವಕುಮಾರ್

'ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆಗೆ ಸಜ್ಜು'

ದಾವಣಗೆರೆ: 'ನಾವೆಲ್ಲ ಸಿದ್ದರಾಮಯ್ಯ ಅವರ ಮುಂದಾಳತ್ವದಲ್ಲಿ ಒಟ್ಟಿಗೆ ಸೇರಿ 2023ರ ವಿಧಾನಸಭೆ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಎದುರಿಸಬೇಕು ಎಂಬ ತೀರ್ಮಾನವನ್ನು ಮಾಡಿದ್ದೇವೆ. ಎಲ್ಲರೂ ಒಗ್ಗಟ್ಟಿನಿಂದ ದುಡಿಯೋಣ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕೈ ಬಲಪಡಿಸೋಣ. ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನಿಯನ್ನಾಗಿ ಮಾಡೋಣ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಅಮೃತ ಮಹೋತ್ಸವದಲ್ಲಿ ಮಾತನಾಡಿದ ಅವರು, 'ವಿಧಾನಸೌಧದ ಮೂರನೇ ಮೆಟ್ಟಿಲ ಮೇಲೆ ನಡೆದುಕೊಂಡು ಓಡಾಡಬೇಕು ಎಂಬ ನಮ್ಮ ಕಾರ್ಯಕರ್ತರ ಆಸೆ ಈಡೇರಬೇಕಾದರೆ ನಾವು–ನೀವೆಲ್ಲ ಸೇರಿಕೊಂಡು ಭಷ್ಟ ಸರ್ಕಾರವನ್ನು ಕಿತ್ತುಹಾಕುವ ಸಂಕಲ್ಪ ಮಾಡಬೇಕು. ಈ ಸರ್ಕಾರವನ್ನು ತೆಗೆಯುತ್ತೇವೆ ಎಂದು ಎಲ್ಲರೂ ಪ್ರತಿಜ್ಞೆ ಮಾಡಿ' ಎಂದು ಕಾರ್ಯಕರ್ತರ ಕೈಗಳನ್ನು ಮೇಲಕ್ಕೆ ಎತ್ತಿಸಿದರು.

'ಅವಕಾಶ ನಿಮ್ಮ ಮನೆ ಬಾಗಿಲಿಗೇ ಬಂದಿದೆ. ಹೊಸ ಬೆಳಕು ಬರುತ್ತಿದೆ. ಅಧಿಕಾರದ ಲಕ್ಷ್ಮಿ ಮನೆ ಬಾಗಿಲಿಗೇ ಬರುತ್ತಿದೆ. ಹಳ್ಳಿಗಳಲ್ಲಿ ಎಲ್ಲರನ್ನೂ ಸೇರಿಸಿಕೊಂಡು ಇತಿಹಾಸ ಸೃಷ್ಟಿಸಬೇಕು. ಈ ಕೆಟ್ಟ ಸರ್ಕಾರದಿಂದ ಯುವಕರು, ರೈತರು, ಬಡವರಿಗೆ ಆಗಿರುವ ಅನ್ಯಾಯವನ್ನು ಕೊನೆಗಾಣಿಸಬೇಕಾದರೆ ಬಿಜೆಪಿ ಸರ್ಕಾರವನ್ನು ಮೊದಲು ಕಿತ್ತು ಹಾಕಬೇಕು. ಆಗಲೇ ಇಡೀ ರಾಜ್ಯಕ್ಕೆ ನೆಮ್ಮದಿ ಸಿಗಲಿದೆ' ಎಂದು ಅಭಿಪ್ರಾಯಪಟ್ಟರು.

'ನನ್ನ ಮತ್ತು ಸಿದ್ದರಾಮಯ್ಯ ಅವರಿಂದ ಮಾತ್ರ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲು ಸಾಧ್ಯವಿಲ್ಲ. ಕಾರ್ಯಕರ್ತರು ಮನೆ–ಮನೆಗೆ ಹೋಗಿ ಭ್ರಷ್ಟ ಸರ್ಕಾರವನ್ನು ಕಿತ್ತು ಹಾಕಬೇಕು ಎಂಬ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಬೇಕು' ಎಂದು ಕರೆ ನೀಡಿದರು.

'ದೇಶಕ್ಕೆ ಸ್ವಾತಂತ್ರ್ಯ ಬಂದು 75ನೇ ವರ್ಷ ಆಚರಿಸುತ್ತಿದ್ದ ಸಂದರ್ಭದಲ್ಲೇ ಸಿದ್ದರಾಮಯ್ಯ ಅವರ ಅಮೃತ ಮಹೋತ್ಸವವನ್ನೂ ಆಚರಿಸುತ್ತಿದ್ದೇವೆ. ದೇಶಕ್ಕೂ ಸಂಭ್ರಮ, ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ಅವರಿಗೂ ಸಂಭ್ರಮ, ನಿಮಗೂ ಸಂಭ್ರಮ–ನಮಗೂ ಸಂಭ್ರಮ. ನಮ್ಮ ಉದ್ದೇಶ ಈ ರಾಜ್ಯಕ್ಕೆ ನ್ಯಾಯವನ್ನು ಒದಗಿಸಿಕೊಡುವುದಾಗಿದೆ. ಕಾಂಗ್ರೆಸ್ ಶಕ್ತಿಯೇ ಈ ದೇಶದ ಶಕ್ತಿ. ಕಾಂಗ್ರೆಸ್ ಇತಿಹಾಸವೇ ದೇಶದ ಇತಿಹಾಸ. ಬಸವಣ್ಣನವರ ತತ್ವವೇ ಕಾಂಗ್ರೆಸ್ ತತ್ವವೂ ಆಗಿದೆ. ಸಿದ್ದರಾಮಯ್ಯ ನೇತೃತ್ವದಲ್ಲಿ ನಮ್ಮ ಸರ್ಕಾರ ರಾಜ್ಯಕ್ಕೆ ಕೊಟ್ಟ ಕಾರ್ಮಕ್ರಮಗಳನ್ನು ಮೆಲುಕು ಹಾಕಲು ನಾವು ಇಲ್ಲಿ ಸೇರಿದ್ದೇವೆ' ಎಂದು ಹೇಳಿದರು.

'ಸೋನಿಯಾ ಗಾಂಧಿ ಆಶಯದಂತೆ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವ ಆಚರಿಸುತ್ತಿದ್ದೇವೆ. ಅಂದು ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ಸರ್ಕಲ್‌ನಿಂದ ನ್ಯಾಷನಲ್ ಕಾಲೇಜು ಮೈದಾನದವರೆಗೆ ಕಾಂಗ್ರೆಸ್ ವತಿಯಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ರಾಷ್ಟ್ರಧ್ವಜ ಹಿಡಿದು ಹೆಜ್ಜೆ ಹಾಕಲು ನೀವೆಲ್ಲ ಬರಬೇಕು' ಎಂದು ಮನವಿ ಮಾಡಿದರು.



ಸಿದ್ದರಾಮಯ್ಯ ಅವರ ಜನ್ಮ ದಿನದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ಸನ್ಮಾನಿಸಿದರು

ಸಿದ್ದರಾಮಯ್ಯಗೆ ಡಿಕೆಶಿ ಅಪ್ಪುಗೆ

ಡಿ.ಕೆ. ಶಿವಕುಮಾರ್ ಅವರು ಸಿದ್ದರಾಮ್ಮಯ ಅವರಿಗೆ ರಾಮನಗರದ ರೇಷ್ಮೆ ಶಾಲು ಹೊದೆಸಿ, ಇಂದಿರಾ ಗಾಂಧಿ ಕುರಿತ ಕೃತಿಯನ್ನು ನೀಡಿ ಸನ್ಮಾನಿಸಿದರು. ಈ ವೇಳೆ ಬೇರೆ ಯಾವ ಮುಖಂಡರಿಗೂ ಅಕ್ಕ–ಪಕ್ಕಕ್ಕೆ ಬರಲು ಅವಕಾಶ ನೀಡದೇ ಇಬ್ಬರು ಮಾತ್ರ ಕ್ಯಾಮೆರಾಕ್ಕೆ ಪೋಸು ನೀಡಿದರು. ಸಿದ್ದರಾಮಯ್ಯ ಅವರ ಕೈಯನ್ನು ಹಿಡಿದು ಮೇಲೆಕ್ಕೆ ಎತ್ತುವ ಮೂಲಕ 'ತಮ್ಮಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ' ಎಂಬ ಸಂದೇಶವನ್ನು ಸಾರಲು ಯತ್ನಿಸಿದರು. ಬಳಿಕ ಸಿದ್ದರಾಮಯ್ಯ ಅವರನ್ನು ಅಪ್ಪಿಕೊಂಡು ಜನ್ಮದಿನದ ಶುಭಾಶಯವನ್ನು ಕೋರಿದರು. ಈ ದೃಶ್ಯವನ್ನು ಕಣ್ತುಂಬಿಕೊಂಡ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು.

ಶಿವಕುಮಾರ್ ಅವರು ಭಾಷಣ ಆರಂಭಿಸುವ ಮುನ್ನ 'ಸಿದ್ದರಾಮಯ್ಯಗೆ ಜೈ' ಎಂದು ಘೋಷಣೆ ಕೂಗಿದಾಗ ಕಾರ್ಯಕರ್ತರು ಸುಮಾರು ಅರ್ಧ ನಿಮಿಷ ಕಾಲ ಕೇಕೆ ಹಾಕಿ ಸಂಭ್ರಮಿಸಿದರು. ಶಿವಕುಮಾರ್ ಅವರು ಭಾಷಣದ ನಡುವೆ ಸಿದ್ದರಾಮಯ್ಯ ಹೆಸರು ಉಲ್ಲೇಖಿಸಿದಾಗಲೆಲ್ಲ ಕೇಕೇ ಹಾಕುತ್ತಿದ್ದರು.

200 ಕೌಂಟರ್‌ಗಳಲ್ಲಿ ವ್ಯವಸ್ಥೆ ; ಊಟ ಸವಿದ ಲಕ್ಷಾಂತರ ಜನ

ಪಲಾವ್, ಬಿಸಿಬೇಳೆ ಬಾತ್, ಮೈಸೂರು ಪಾಕ್.

ದಾವಣಗೆರೆ: ಸಿದ್ದರಾಮಯ್ಯ–75 ಅಮೃತ ಮಹೋತ್ಸವಕ್ಕೆ ರಾಜ್ಯದ ವಿವಿಧಡೆಯಿಂದ ಬಂದಿದ್ದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಊಟದ ಸವಿದರು.

ಬುಧವಾರ ಬೆಳಿಗ್ಗೆಯಿಂದಲೇ ಬಂದ ಜನರಿಗೆ ಇಲ್ಲಿನ ಶಾಮನೂರು ಪ್ಯಾಲೇಸ್ ಮೈದಾನದಲ್ಲಿ ಶುಚಿ ರುಚಿಯಾದ ಭೋಜನ ತಯಾರಿಸಿದ್ದು, ಲಕ್ಷಾಂತರ ಮಂದಿ ಊಟ ಮಾಡಿದರು.

ಪಲಾವ್, ಮೊಸರನ್ನ, ಬಿಸಿಬೇಳೆ ಬಾತ್ ಹಾಗೂ ಮೈಸೂರು ಪಾಕ್ ಅನ್ನು ಸವಿದು ಖುಷಿಪಟ್ಟರು. ಕುಡಿಯುವ ನೀರಿನ ವ್ಯವಸ್ಥೆಯನ್ನೂ ಮಾಡಲಾಗಿತ್ತು. 6 ಲಕ್ಷಕ್ಕೂ ಹೆಚ್ಚು ಮೈಸೂರು ಪಾಕ್ ಸಿದ್ಧಪಡಿಸಿದ್ದು ವಿಶೇಷ.

ವೇದಿಕೆಯ ಎಡಭಾಗದಲ್ಲೇ 200ಕ್ಕೂ ಕೌಂಟರ್‌ಗಳಲ್ಲಿ ಊಟ ಬಡಿಸಿದರು. ಅಡಿಕೆ ಎಲೆಯಲ್ಲಿ ಊಟದ ವ್ಯವಸ್ಥೆ ಮಾಡಿದ್ದು, ಜನರು ಸರತಿ ಸಾಲಿನಲ್ಲಿ ನಿಂತು ಊಟ ಸವಿದರು. ರಾಜ್ಯವಲ್ಲದೇ ತಮಿಳುನಾಡು ಹಾಗೂ ಕೇರಳದಿಂದಲೂ ಬಾಣಸಿಗರನ್ನು ಕರೆತರಲಾಗಿತ್ತು. ಬೆಳಿಗ್ಗೆಯಿಂದಲೇ ಶುರುವಾದ ಊಟ ಮಧ್ಯಾಹ್ನ 3 ಗಂಟೆಯವರೆಗೂ ನಿರಂತರವಾಗಿ ಮುಂದುವರಿಯಿತು. ನಿರೀಕ್ಷೆಗೂ ಮೀರಿ ಜನರು ಬಂದಿದ್ದು ವಿಶೇಷ.

'ಸಿದ್ದರಾಮಯ್ಯ ಅನ್ನಭಾಗ್ಯದ ಸರದಾರ. ಕಾರ್ಯಕ್ರಮದಲ್ಲೂ ಊಟ ಚೆನ್ನಾಗಿದೆ. ಇಷ್ಟೊಂದು ಜನಕ್ಕೆ ಊಟ ಕೊಟ್ಟಿರುವುದು ಸುಲಭದ ಮಾತಲ್ಲ. ಮೈಸೂರು ಪಾಕ್ ಚೆನ್ನಾಗಿದೆ' ಎಂದು ಹಾವೇರಿಯ ರೈತ ಕುಮಾರ್ ಹೇಳುತ್ತಾರೆ.

ಊಟ ಮುಗಿಸಿದ ಬಳಿಕ ಮೈದಾನದ ಹೊರ ಆವರಣದಲ್ಲಿ ಐಸ್‌ಕ್ರೀಂ, ಬೀಡಾ ಹಾಗೂ ಸೌತೆಕಾಯಿಯನ್ನು ಸವಿದರು.



ಸಿದ್ದರಾಮಯ್ಯ ಅವರ ಜನ್ಮದಿನದ ಕಾರ್ಯಕ್ರಮವೂ ಚೆನ್ನಾಗಿದೆ. ಊಟವೂ ಚೆನ್ನಾಗಿದೆ. 7–8 ಲಕ್ಷ ಜನ ಸೇರಿರಬಹುದು. ಇಷ್ಟೊಂದು ಜನರಿಗೆ ಅನ್ನ ಪ್ರಸಾದದ ವ್ಯವಸ್ಥೆ ಮಾಡಿರುವುದನ್ನು ನನ್ನ ಜೀವನದಲ್ಲಿ ಇದೇ ಮೊದಲ ಬಾರಿ ನೋಡುತ್ತಿರುವೆ
ವೆಂಕಪ್ಪ ಸಿ.ಬಳ್ಳಾರಿ, ಗದಗ



ಸಿದ್ದರಾಮಯ್ಯ ಅಮೃತ ಮಹೋತ್ಸವದಲ್ಲಿ ಅಭಿಮಾನಿಗಳು ಮತ್ತು ಕಾರ್ಯಕರ್ತರು ಊಟ ಸವಿದರು.

ನೆಚ್ಚಿನ ನಾಯಕನ ಕೊಂಡಾಡಿದ ಕಾರ್ಯಕರ್ತರು.. ಮುಗಿಲು ಮುಟ್ಟಿದ ಕರತಾಡನ

ಬೆಣ್ಣೆ ನಗರಿಗೆ ಹರಿದುಬಂದ ಜನಸಾಗರ

ದಾವಣಗೆರೆ: ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಅಂಗವಾಗಿ ನಡೆದ 'ಅಮೃತ ಮಹೋತ್ಸವ'ಕ್ಕೆ ಜನಸಾಗರವೇ ಹರಿದು ಬಂತು. ಬುಧವಾರ ಮಧ್ಯಾಹ್ನ ನಡೆಯಲಿದ್ದ ಸಮಾರಂಭಕ್ಕೆ ಮಂಗಳವಾರ ರಾತ್ರಿಯಿಂದಲೇ ರಾಜ್ಯದ ವಿವಿಧ ಮೂಲೆಗಳಿಂದ ಬಸ್, ವ್ಯಾನ್ ಹಾಗೂ ದ್ವಿಚಕ್ರ ವಾಹನಗಳಲ್ಲಿ ಜನರು ತಂಡೋಪತಂಡವಾಗಿ ಆಗಮಿಸಿ ತಮ್ಮ ನೆಚ್ಚಿನ ನಾಯಕನ ಬಗೆಗಿನ ಅಭಿಮಾನ ಬಹಿರಂಗಪಡಿಸಿದರು.

ನಗರದ ಹೊರವಲಯದ ಕುಂದವಾಡದ ಬಳಿ ಇರುವ ಶಾಮನೂರು ಪ್ಯಾಲೇಸ್ ಮೈದಾನ ಹಿಂದೆಂದೂ ಕಾಣದ ರೀತಿಯ ಜನಜಾತ್ರೆಗೆ ಸಾಕ್ಷಿಯಾಯಿತು. ಸಿದ್ದರಾಮಯ್ಯ ಅಭಿಮಾನಿಗಳನ್ನು ಹೊತ್ತು ತಂದ ಸಾವಿರಾರು ವಾಹನಗಳ ದಟ್ಟಣೆಯಿಂದಾಗಿ ಬೆಂಗಳೂರು– ಪುಣೆ ರಾಷ್ಟ್ರೀಯ ಹೆದ್ದಾರಿ–48ರ ಸಾಮಾನ್ಯ ವಾಹನಗಳ ಮಾರ್ಗ ಬದಲಾಯಿಸಲಾಗಿತ್ತು. ಸಂಚಾರ ಬಂದ್ ಆಗಿದ್ದರೂ ಹೆದ್ದಾರಿಯಲ್ಲಿ ವಾಹನಜಂಗುಳಿ ಇದ್ದುದರಿಂದ, ಜನರು ಕಾರ್ಯಕ್ರಮ ನಡೆಯುವ ಮೈದಾನದವರೆಗೆ ನಡೆದುಕೊಂಡೇ ಬಂದರು.

ದಾರಿಯುದ್ದಕ್ಕೂ 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಜೈ' ಎಂಬ ಘೋಷಣೆ ಕೂಗಿದರು. 'ಹೌದ್ದ ಹುಲೀಯ' ಎಂಬ ಶ್ಲಾಘನೆಯ ಕೂಗು ಕೇಳಿಬರುತ್ತಲೇ ಇತ್ತು.

ಶಾಮನೂರು ಪಾಲೇಸ್ ಮೈದಾನದ ಆವರಣ, ದಾವಣಗೆರೆ ನಗರ ಹಾಗೂ ಹೆದ್ದಾರಿಯುದ್ದಕ್ಕೂ ಸಿದ್ದರಾಮಯ್ಯ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರ ಕಟೌಟ್‌ಗಳು, ಬ್ಯಾನರ್‌ಗಳು ರಾರಾಜಿಸಿದವು. ಕಟೌಟ್, ಬ್ಯಾನರ್‌ಗಳ ಕೆಳಗೆ ನಿಂತು ಅಭಿಮಾನಿಗಳು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂತಸಪಟ್ಟರು.

ಕಾರ್ಯಕ್ರಮ ಬೆಳಿಗ್ಗೆ 11ಕ್ಕೆ ಶುರುವಾಗುತ್ತಿದ್ದಂತೆಯೇ ಸಂಗೀತ ರಸಮಂಜರಿ ಮೆರುಗು ನೀಡಿತು. 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ' ಹಾಡಿಗೆ ದನಿಗೂಡಿಸಿದ ಜನಸಮೂಹ ದಿವಂಗತ ನಟ ಪುನೀತ್ ರಾಜಕುಮಾರ್ ಅವರನ್ನು ಸ್ಮರಿಸಿ ಕಣ್ಣೀರಾದರು.

ರಾಹುಲ್ ಗಾಂಧಿ ಆಗಮನ ತಡವಾಗಿದ್ದರೂ ಜನರು ವೇದಿಕೆಯತ್ತ ತಂಡೋಪತಂಡವಾಗಿ ಬರುತ್ತಿದ್ದುದರಿಂದ ಇಡೀ ಮೈದಾನದಲ್ಲಿ ಜನಸ್ತೋಮವೇ ನೆರೆದಿತ್ತು. ಸಿದ್ದರಾಮಯ್ಯ, ರಾಹುಲ್‌ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಜೈಕಾರವೇ ಮೊಳಗಿತು.

ವಿಶೇಷ ರೈಲಿನಲ್ಲಿ ಬಂದಿದ್ದ ಅಭಿಮಾನಿಗಳು: ಸಿದ್ದರಾಮಯ್ಯ ಅಮೃತ ಮಹೋತ್ಸವಕ್ಕೆ ಬೀದರ್, ಬಾದಾಮಿ ಹಾಗೂ ಬೆಳಗಾವಿ ವಿಶೇಷ ರೈಲಿನಲ್ಲಿ ಅಭಿಮಾನಿಗಳು ದಾವಣಗೆರೆ ಬಂದಿದ್ದರು. ಅವರು ಪ್ರತಿನಿಧಿಸುವ ಬಾದಾಮಿ ಕ್ಷೇತ್ರದಿಂದಲೇ ಸಾವಿರಾರು ಜನ ಬಂದಿದ್ದಾಗಿ ಅವರ ಅಭಿಮಾನಿಯೊಬ್ಬರು ತಿಳಿಸಿದರು.

ರಾರಾಜಿಸಿದ ಭಾವಚಿತ್ರಗಳು : ಇಡೀ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಭಾವಚಿತ್ರಗಳು ರಾರಾಜಿಸಿದವು. ಮೈಸೂರಿನ ಜಿ.ಟಿ. ಆನಂದ ಅವರು ಕೊಡುಗೆಯಾಗಿ ನೀಡಿದ ಭಾವಚಿತ್ರಗಳನ್ನು ಹಿಡಿದು ಸಾಗಿದ ಕಾರ್ಯಕರ್ತರು, ದಾರಿಯುದ್ದಕ್ಕೂ ಅಭಿಮಾನ ವ್ಯಕ್ತಪಡಿಸಿದರು. ಕೆಲವರ ಹೆಗಲ ಮೇಲಿದ್ದ ಹಸಿರು ಶಾಲಿನಲ್ಲೂ ಸಿದ್ದರಾಮಯ್ಯ ಅವರ ಚಿತ್ರಗಳು ರಾರಾಜಿಸಿದವು.



ಸಿದ್ದರಾಮಯ್ಯ ಅವರ ಜನ್ಮ ದಿನೋತ್ಸವದ ಅಂಗವಾಗಿ ನಡೆದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ

ಫ್ಲೆಕ್ಸ್: 28 ಎಫ್‌ಐಆರ್

ಬೆಂಗಳೂರು: ನಗರದಲ್ಲಿ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ಅಳವಡಿಸಿದ್ದ 28 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಬ್ಯಾನರ್ ತೆರವು ಕಾರ್ಯಾಚರಣೆ ತೀವ್ರಗೊಳಿಸಲಾಗಿದ್ದು, ಜುಲೈ 26ರಿಂದ ಈವರೆಗೆ 2,519 ಫ್ಲೆಕ್ಸ್‌ಗಳನ್ನು ತೆರವುಗೊಳಿಸಲಾಗಿದೆ. ಬಿಬಿಎಂಪಿ ಎಚ್ಚರಿಕೆ ನೀಡಿದರೂ ಫ್ಲೆಕ್ಸ್ ಅಳವಡಿಕೆ ಮಾಡುವುದು ಹೆಚ್ಚಾಗುತ್ತಿದ್ದು, ತೆರವುಗೊಳಿಸುವುದೇ ಕೆಲಸವಾಗಿದೆ. ನಿಯಮ ಉಲ್ಲಂಘಿಸಿದರೆ ದಂಡ ವಿಧಿಸುವ ಜತೆಗೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ. ತೆರವಿಗೆ ತಗುಲುವ ವೆಚ್ಚವನ್ನು ಅವರಿಂದಲೇ ವಸೂಲಿ ಮಾಡಲಾಗುವುದು’ ಎಂದರು.

ಈದ್ಗಾ ವಿವಾದ ಶೀಘ್ರ ಇತ್ಯರ್ಥ: ‘ಚಾಮರಾಜಪೇಟೆ ಈದ್ಗಾ ಮೈದಾನದ ಒಡೆತನ ವಿವಾದದಲ್ಲಿ ಖಾತೆ ಬದಲಾವಣೆ ಕೋರಿ ವಕ್ಫ್ ಮಂಡಳಿ ಅರ್ಜಿ ಸಲ್ಲಿಸಿದೆ. ಈ ಬಗ್ಗೆ ಸಕ್ಷಮ ಅಧಿಕಾರಿಯಾದ ಪಶ್ಚಿಮ ವಲಯ ಜಂಟಿ ಆಯುಕ್ತರು ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದು ತುಷಾರ್ ಗಿರಿನಾಥ್ ಹೇಳಿದರು.

‘ಮೈದಾನ ಜಾಗದ ಒಡೆತನಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಪಾಲಿಕೆಗೆ ನಿರ್ಬಂಧ ಆದೇಶ ಹೊರಡಿಸಿದೆ. ಹಾಗಾಗಿ, ಯಾವುದೇ ಸಭೆ, ಕಾರ್ಯಕ್ರಮಗಳಿಗೆ ಅನುಮತಿ ನೀಡುವ ಅಧಿಕಾರ ಪಾಲಿಕೆಗೆ ಇಲ್ಲ. ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರಿಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಬಹುದು. ಧ್ವಜಾರೋಹಣಕ್ಕೆ ಯಾವುದೇ ನಿರ್ಬಂಧ ಇಲ್ಲ’ ಎಂದರು.

ಪುಸ್ತಕ ಖರೀದಿ: ಶೇ 50 ರಷ್ಟು ರಿಯಾಯಿತಿ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಇದೇ 29ರವರೆಗೆ ಪುಸ್ತಕಗಳ ಖರೀದಿಯ ಮೇಲೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ. ಕಚೇರಿಗೆ ಭೇಟಿ ನೀಡಲು ಸಾಧ್ಯವಾಗದವರು ಅಕಾಡೆಮಿಯ ವೆಬ್‌ಸೈಟ್ sahithyaacademy.karnataka.gov.in ಮೂಲಕ ಪುಸ್ತಕಗಳನ್ನು ಆಯ್ಕೆ ಮಾಡಿ, ದೂರವಾಣಿ ಅಥವಾ ಇ ಮೇಲ್ (sahithya.academy@gmail.com) ಮೂಲಕ ತಿಳಿಸಿದರೆ ಕೊರಿಯರ್ ವೆಚ್ಚ ಸಹಿತ ಪುಸ್ತಕಗಳ ಬೆಲೆ ತಿಳಿಸಲಾಗುತ್ತದೆ. ಸಂಪರ್ಕ ಸಂಖ್ಯೆ: 080 22211730 ಅಥವಾ 9449935103

ಸಂಕ್ಷಿಪ್ತ ಸುದ್ದಿ

ಐಎಎಸ್ ಅಧಿಕಾರಿ ಜಾಮೀನು ಅರ್ಜಿ ವಜಾ

ಬೆಂಗಳೂರು: ಕಂದಾಯ ವ್ಯಾಜ್ಯವೊಂದರಲ್ಲಿ ₹5 ಲಕ್ಷ ಲಂಚ ಪಡೆದ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಬೆಂಗಳೂರು ನಗರ ಜಿಲ್ಲೆಯ ಈ ಹಿಂದಿನ ಜಿಲ್ಲಾಧಿಕಾರಿ ಜೆ.ಮಂಜುನಾಥ್‌ಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಮಂಜುನಾಥ್ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಪ್ರಕಟಿಸಿತು. ಆದೇಶದ ಪ್ರತಿ ಇನ್ನೂ ಬಿಡುಗಡೆಯಾಗದ ಕಾರಣ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಮಂಜುನಾಥ್ ಅವರನ್ನು ಎಸಿಬಿ ಪೊಲೀಸರು ಜುಲೈ 4ರಂದು ಬಂಧಿಸಿದ್ದರು. ಜಾಮೀನು ಕೋರಿ ಮಂಜುನಾಥ್ ಸಲ್ಲಿಸಿದ್ದ ಅರ್ಜಿಯನ್ನು 23ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಜುಲೈ 11ರಂದು ವಜಾಗೊಳಿಸಿತ್ತು.

ನೀರಿನ ಅದಾಲತ್ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 4ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಸೇರಿ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಕಸಾಪ ಆ್ಯಪ್ ಸಿದ್ಧ

ಬೆಂಗಳೂರು: ಸದಸ್ಯತ್ವ ಸೇರಿ ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದ್ದು, ಗುರುವಾರ ಲೋಕಾರ್ಪಣೆಯಾಗಲಿದೆ.

‘ಪ್ರಸ್ತುತ ಕಾಲಘಟ್ಟಕ್ಕೆ ತಕ್ಕಂತೆ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಿನೂತನ ಆ್ಯಪ್ ರೂಪಿಸಲಾಗಿದೆ. ಈ ಆ್ಯಪ್ ಕನ್ನಡ ಸಾಹಿತ್ಯ ಪರಿಷತ್ತನ್ನು ಜನಸಾಮಾನ್ಯರ ಪರಿಷತ್ತನ್ನಾಗಿಸುವ ಕೊಂಡಿಯಾಗಲಿದೆ. ವಿಶ್ವದಾದ್ಯಂತ ಇರುವ ಕನ್ನಡ ಹಾಗೂ ಕನ್ನಡಿಗರನ್ನು ಒಗ್ಗೂಡಿಸುವ ಪ್ರಯತ್ನಕ್ಕೆ ಪರಿಷತ್ತು ಮುಂದಾಗಿದೆ. ಕೋಟಿ ಸದಸ್ಯತ್ವ ಅಭಿಯಾನದಡಿ ಸಾಮಾನ್ಯರು ಸದಸ್ಯತ್ವ ಪಡೆಯಲು ಆ್ಯಪ್ ಸಹಕಾರಿಯಾಗಲಿದೆ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.



ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಭಾರತ ಮಾರ್ಷಲ್ ಆರ್ಟ್ಸ್ ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡಿದೆ!

ಮತದಾರರ ಪಟ್ಟಿ ಪರಿಷ್ಕರಣೆಗೆ ವೇಳಾಪಟ್ಟಿ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯವನ್ನು ಬಿಬಿಎಂಪಿ ಆರಂಭಿಸಿದ್ದು, ವೇಳಾಪಟ್ಟಿ ಪ್ರಕಟಿಸಿದೆ.

‘ಮತಗಟ್ಟೆಗಳ ಮರು ವ್ಯವಸ್ಥೆ, ಅಗತ್ಯ ಇದ್ದರೆ ಮತದಾರರ ಪಟ್ಟಿಯಲ್ಲಿನ ಭಾವಚಿತ್ರಗಳ ಗುಣಮಟ್ಟ ಹೆಚ್ಚಳ, ಮತಗಟ್ಟೆಗಳ ವ್ಯಾಪ್ತಿಗೆ ಬರುವ ಗಡಿಗಳನ್ನು ಗುರುತಿಸುವಿಕೆ ಪ್ರಕ್ರಿಯೆಯನ್ನು ಆಗಸ್ಟ್ 4ರಿಂದ ಅಕ್ಟೋಬರ್ 2ರೊಳಗೆ ಮಾಡಬೇಕು. ನವೆಂಬರ್ 9ರಂದು ಮತದಾರರ ಪಟ್ಟಿಯ ಕರಡು ಪ್ರಕಟಿಸಬೇಕು. ಆಕ್ಷೇಪಣೆ ಸಲ್ಲಿಸಲು ಡಿಸೆಂಬರ್ 8ರ ತನಕ ಅವಕಾಶ ಕಲ್ಪಿಸಬೇಕು. 2023ರ ಜನವರಿ 5ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಿಸಬೇಕು ಎಂದು ನಗರ ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಬಿಬಿಎಂಪಿ ಮುಖ್ಯ ಆಯುಕ್ತರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ, ಸಿದ್ಧಾಂತ ಶಿಖಾಮಣಿ-ವಚನ ಪ್ರವಚನ ಕಾರ್ಯಕ್ರಮ: ಬೆಳಿಗ್ಗೆ: ಶಶಿಕಲಾ, ಸುಭಾಷ್‌ಚಂದ್ರ ಎಚ್. ಪಾಟೀಲ, ಸ್ಥಳ: ಸಿ.441, ಕೃಷ್ಣ ಗವಾಕ್ಷಿ ಅಪಾರ್ಟ್‌ಮೆಂಟ್, ಪಣತ್ತೂರು ರಸ್ತೆ, ಕಾಡಬೀಸನಹಳ್ಳಿ,

ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಬಿ.ವಿ.ವಸಂತ ಕುಮಾರ್, ಕಿರಣ್ ರಾಜ್ ಕೆ., ಅಧ್ಯಕ್ಷತೆ: ಶ್ರೀನಿವಾಸ.ಎಸ್. ಬಳ್ಳಿ, ಆಯೋಜನೆ: ನೃಪತುಂಗ ವಿಶ್ವವಿದ್ಯಾಲಯ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ಬ್ರಿಗೇಡ್ ಟೆಕ್ ಗಾರ್ಡನ್ಸ್: ಅತಿಥಿಗಳು: ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ, ಮುರಗೇಶ ನಿರಾಣಿ, ಮನು ಸಾಲೆ, ಆಯೋಜನೆ: ಬ್ರಿಗೇಡ್, ಸ್ಥಳ: ದಿ ಹಿವ್ ಕನ್ವೆನ್ಷನ್ ಸೆಂಟರ್, ಬ್ರಿಗೇಡ್ ಟೆಕ್ ಗಾರ್ಡನ್, ಕುಂಡಲಹಳ್ಳಿ, ಬೆಳಿಗ್ಗೆ 10.30

ಹರ್ ಘರ್ ತಿರಂಗಾ ಅಭಿಯಾನ: ಅತಿಥಿಗಳು: ಆರಗ ಜ್ಞಾನೇಂದ್ರ, ಸಿದ್ದರಾಮಯ್ಯ, ಆರ್.ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿ.ಸೋಮಣ್ಣ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಆರಕ್ಷಕ ಮಹಾನಿರ್ದೇಶಕರು, ನಿರ್ದೇಶಕರು ಪೌರರಕ್ಷಣೆ, ಮಹಾನಿರ್ದೇಶಕರು ಅಗ್ನಿಶಾಮಕ ಇಲಾಖೆ, ಮಹಾನಿರ್ದೇಶಕರು ರಾಜ್ಯ ವಿಪತ್ತು ಸ್ಪಂದನಾ ಪಡೆ, ಸ್ಥಳ: ವಿಧಾನಸೌಧದ ಪೂರ್ವದ್ವಾರ, ಬೃಹತ್ ಭವ್ಯ ಮೆಟ್ಟಿಲುಗಳ ಮುಂಭಾಗದಲ್ಲಿ, ಬೆಳಿಗ್ಗೆ 11

ಭಾರತ ಸ್ವಾತಂತ್ರ್ಯ ಚಳವಳಿ ಕುರಿತು ಅಂತರ್‌ವಿಭಾಗೀಯ ಸಾಂಸ್ಕೃತಿಕ ಸ್ಪರ್ಧೆಗಳು: ಉದ್ಘಾಟನೆ: ಜಯಕರ್ ಎಸ್.ಎಂ., ಅತಿಥಿಗಳು: ಎಂ.ಕೊಟ್ರೇಶ್, ಸಿ.ಆರ್. ಮಹೇಶ್, ಅಧ್ಯಕ್ಷತೆ: ಸಿ.ಶ್ರೀನಿವಾಸ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಕೆ.ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ನ್ಯಾಯಮೂರ್ತಿ ಕೃಷ್ಣ ಭಟ್ ಅವರಿಗೆ ಬೀಳ್ಕೊಡುಗೆ: ಅತಿಥಿಗಳು: ಅಲೋಕ್ ಆರಾಧೆ, ಪ್ರಭುಲಿಂಗ್.ಕೆ. ನಾವದಿಗಿ, ವಿವೇಕ ಸುಬ್ಬಾರೆಡ್ಡಿ, ಆಯೋಜನೆ: ದಿ ಅಡ್ವೊಕೇಟ್ಸ್ ಅಸೋಸಿಯೇಷನ್, ಸ್ಥಳ: ಹೈಕೋರ್ಟ್ ಎಬಿ ಸಭಾಂಗಣ-2, ಮಧ್ಯಾಹ್ನ 3.15

ಸಿಲ್ಕ್ ಮಾರ್ಕ್ ಎಕ್ಸ್‌ಪೋ: ಉದ್ಘಾಟನೆ: ರಜಿತ್ ರಂಜನ್ ಒಖಂಡಿಯಾರ್, ಉಪಸ್ಥಿತಿ: ಕಲ್ಪನಾ ಕಟಾರಿಯಾ, ಆಯೋಜನೆ: ಕೇಂದ್ರ ಜವಳಿ ಸಚಿವಾಲಯ, ಸ್ಥಳ: ರಂಗೋಲಿ ಮೆಟ್ರೋ ಕಲಾಕೇಂದ್ರ, ಎಂ.ಜಿ. ರೋಡ್ ಮೆಟ್ರೋ ಸ್ಟೇಷನ್, ಮಧ್ಯಾಹ್ನ 3.30

ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಓದು: ಅಧ್ಯಕ್ಷತೆ: ಎ.ಜೆ. ಸದಾಶಿವ, ಅತಿಥಿಗಳು: ಜಗದೀಶ ರೆಡ್ಡಿ, ಕಾವ್ಯ ವಾಚನ: ಕೆ.ಎನ್. ಗಣೇಶಯ್ಯ, ಆಯೋಜನೆ: ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ, ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6

ರಾಘವೇಂದ್ರ ಗುರು ಸಾರ್ವಭೌಮರ 351ನೇ ಆರಾಧನೆ ಹಾಗೂ ಶ್ರೀಕೃಷ್ಣ ಜಯಂತಿ ಉತ್ಸವ: ಗಣಹೋಮದ ಉದ್ಘಾಟನೆ: ಸುವಿದ್ಯೇಂದ್ರತೀರ್ಥ ಶ್ರೀಪಾದ, ಆಯೋಜನೆ: ರಾಘವೇಂದ್ರ ಸ್ವಾಮಿಗಳ ಮಠ, ಮಲ್ಲೇಶ್ವರ, ಸಂಜೆ 6.30



ಅನಿಲ ಹೊರಸೂಸುವಿಕೆ: ಹೊಸ ಗುರಿಗೆ ಅನುಮೋದನೆ

ನವದೆಹಲಿ: ದೇಶದ ಹಸಿರು ಮನೆ ಅನಿಲ ಹೊರಸೂಸುವಿಕೆಯನ್ನು ಕಡಿತಗೊಳಿಸುವ ಕುರಿತ ಹೊಸ ಗುರಿಗೆ ಕೇಂದ್ರ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಈ ಮೂಲಕ 2030ರೊಳಗೆ ಪರಿಸರ ಸೇರುವ ಇಂಗಾಲದ ಪ್ರಮಾಣವನ್ನು ಶೇ 45ರಷ್ಟು ಕಡಿತಗೊಳಿಸುವುದಕ್ಕೆ ಸರ್ಕಾರ ಬದ್ಧತೆ ತೋರಿದೆ.

2030ರೊಳಗೆ ಇಂಧನ ಅಗತ್ಯದ ಶೇ 50ರಷ್ಟನ್ನು ನವೀಕರಿಸಬಹುದಾದ ಮೂಲಗಳಿಂದ ಪಡೆದುಕೊಳ್ಳುವುದನ್ನು ಸಾಧಿಸಲೂ ಸಂಪುಟ ಅನುಮೋದಿಸಿದೆ. ಕಳೆದ ನವೆಂಬರ್‌ನಲ್ಲಿ ಗ್ಲಾಸ್ಗೋ ಹವಾಮಾನ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರ 'ಪಂಚಾಮೃತ' ಘೋಷಣೆಯ ಭಾಗ ಇವುಗಳಾಗಿದ್ದವು.

ಬೆಂಗೇರಿಯ ರಾಷ್ಟ್ರಧ್ವಜ ತಯಾರಿಕಾ ಕೇಂದ್ರಕ್ಕೆ ಭೇಟಿ

ಕೇಂದ್ರದ ಕ್ರಮಕ್ಕೆ ರಾಹುಲ್ ತರಾಟೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಬೆಂಗೇರಿಯಲ್ಲಿರುವ ರಾಷ್ಟ್ರಧ್ವಜ ತಯಾರಿಕಾ ಕೇಂದ್ರಕ್ಕೆ ಬುಧವಾರ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭೇಟಿ ನೀಡಿದರು.

ರಾಷ್ಟ್ರಧ್ವಜ ತಯಾರಿಸುವ ಕುರಿತು ಸಿಬ್ಬಂದಿಯಿಂದ ಮಾಹಿತಿ ಪಡೆದರು. 'ದೆಹಲಿಯ ಕೆಂಪುಕೋಟೆ ಹಾಗೂ ದೇಶದ ಪ್ರಮುಖ ಸ್ಥಳಗಳಲ್ಲಿ ಹಾರಾಡುವ ಧ್ವಜವನ್ನು ಇಲ್ಲಿಂದಲೇ ತಯಾರಿಸಿ ಕಳುಹಿಸಲಾಗುತ್ತದೆ' ಎಂದು ಸಿಬ್ಬಂದಿ ತಿಳಿಸಿದರು. ಧ್ವಜದಲ್ಲಿರುವ ಅಶೋಕ ಚಕ್ರ ಸಿದ್ಧಪಡಿಸುವ ಬಗೆ ಗಮನಿಸಿ ತಾವು ಸಹ ಅಶೋಕ ಚಕ್ರ ಸಿದ್ಧಪಡಿಸಿದರು. ನಂತರ ಧ್ವಜಕ್ಕೆ ಇಸ್ತ್ರೀ ಹಾಕಿದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರಧ್ವಜ ಸಂಹಿತೆಗೆ ತಿದ್ದುಪಡಿ ಮಾಡಿ, ಪಾಲಿಸ್ಟರ್ ಧ್ವಜಕ್ಕೂ ಅನುಮತಿ ನೀಡಿದ್ದು ಖಾದಿ ಪ್ರಿಯರಲ್ಲಿ ಅಸಮಾಧಾನ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಖಾದಿ ಗ್ರಾಮೋದ್ಯೋಗ ಸಂಸ್ಥೆಯ ರಾಷ್ಟ್ರಧ್ವಜ ತಯಾರಿಕಾ ಕೇಂದ್ರಕ್ಕೆ ರಾಹುಲ್ ಭೇಟಿ ನೀಡಿ, ಸಿಬ್ಬಂದಿ ಜೊತೆ ಕೆಲಕಾಲ ಚರ್ಚಿಸಿದರು.

ಇದೇ ವೇಳೆ ಖಾದಿ ಗ್ರಾಮೋದ್ಯೋಗ ಸಂಸ್ಥೆ ಪದಾಧಿಕಾರಿಗಳು, ಧ್ವಜ ಸಂಹಿತೆ ತಿದ್ದುಪಡಿ ಹಿಂಪಡೆಯುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂದು ರಾಹುಲ್ ಅವರಿಗೆ ಮನವಿ ನೀಡಿದರು. ಚರಕ ಹಾಗೂ ಶಾಲು ಹೊದಿಸಿ ಸನ್ಮಾನಿಸಿದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಸಾಂಪ್ರದಾಯಿಕವಾಗಿ ರಾಷ್ಟ್ರಧ್ವಜ ಖಾದಿಯಿಂದ ಮಾಡಲಾಗುತ್ತದೆ. ದೇಶದ ಏಕತೆಯನ್ನು ಪ್ರತಿನಿಧಿಸುವ ಖಾದಿಯಿಂದ ಮಾಡಿದ ರಾಷ್ಟ್ರಧ್ವಜ ಪರವಾಗಿ ನಾವಿದ್ದೇವೆ' ಎಂದು ಹೇಳಿದರು.

'ಕೇಂದ್ರ ಸರ್ಕಾರ ಮಧ್ಯಮ ಮತ್ತು ಚಿಕ್ಕ ಉದ್ಯಮಿಗಳ ಕೈಗಳಿಂದ ಉದ್ಯಮಗಳನ್ನು ಕಸಿದುಕೊಂಡು, ಮೂರು-ನಾಲ್ಕು ದೊಡ್ಡ ಉದ್ಯಮಿಗಳಿಗೆ ನೀಡುತ್ತಿದೆ. ಕೃಷಿ ಕಾನೂನು, ನೋಟು ಅಮಾನ್ಯೀಕರಣ ನೀತಿ ಸಹ ಬಡವರ ವಿರೋಧಿಯಾಗಿದೆ. ಇವು ತಪ್ಪು ನಿರ್ಧಾರ' ಎಂದರು.




ಹುಬ್ಬಳ್ಳಿಯ ಬೆಂಗೇರಿಯಲ್ಲಿರುವ ರಾಷ್ಟ್ರಧ್ವಜ ತಯಾರಿಕಾ ಕೇಂದ್ರಕ್ಕೆ ಬುಧವಾರ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭೇಟಿ ನೀಡಿ ರಾಷ್ಟ್ರಧ್ವಜಕ್ಕೆ ಇಸ್ತ್ರೀ ಮಾಡಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದಾರೆ – ಪ್ರಜಾವಾಣಿ ಚಿತ್ರ

> ರಾಷ್ಟ್ರಧ್ವಜ ಸಂಹಿತೆ ತಿದ್ದುಪಡಿ ಮತ್ತು ಖಾದಿ ಗ್ರಾಮೋದ್ಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಮಸ್ಯೆ ಕುರಿತು ಸಂಸತ್ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗುವುದು
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

ಅಪ್ಪನ ಬರಹ ಪಠ್ಯವಾಗಿಸಿದ ಚಕ್ರತೀರ್ಥ: ವೀಣಾ

ಪ್ರಜಾವಾಣಿ ವಾರ್ತೆ



ವೀಣಾ ಬನ್ನಂಜೆ

ಬೆಂಗಳೂರು: ರೋಹಿತ್ ಚಕ್ರತೀರ್ಥ ಪಠ್ಯಪುಸ್ತಕ ಸಮಿತಿಯಲ್ಲಿದ್ದ ಕಾರಣ ಅಪ್ಪ ಗೋವಿಂದಾಚಾರ್ಯ ಅವರ 'ಶುಕನಾಸನ ಉಪದೇಶ' 10ನೇ ತರಗತಿಯ ಪಠ್ಯ ವಾಯಿತು. ಪಠ್ಯಪುಸ್ತಕಗಳಲ್ಲಿ ಇದುವರೆಗೂ ವಿರಾಜಿಸಿದವರ ನಿರ್ಗಮನವಾಗಿ, ಹೊಸಬರ ಆಗಮನಕ್ಕೆ ಅವಕಾಶವಾಯಿತು ಎಂದು ಲೇಖಕಿ ವೀಣಾ ಬನ್ನಂಜೆ ಹೇಳಿದರು.

ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ ಬುಧವಾರ ಹಮ್ಮಿಕೊಂಡಿದ್ದ ಆಚಾರ್ಯರ ಜನ್ಮಾರಾಧನೆ ಕಾರ್ಯಕ್ರಮದಲ್ಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಪ್ಪ ಹಾಗೂ ಚಕ್ರತೀರ್ಥ ಮಧ್ಯೆ ಆಪ್ತತೆ ಇತ್ತು. ಅವರ ಅಂಕಣಗಳನ್ನು ಅಪ್ಪ ಓದಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಚಕ್ರತೀರ್ಥ ತಮ್ಮ ಕೃತಿಗೆ ಅಪ್ಪನ ಬಳಿ ಮುನ್ನುಡಿ ಬರೆಸಿದ್ದರು ಎಂದು ನೆನಪಿಸಿಕೊಂಡರು.

'ಭಾರತವು ವಿವಿಧತೆಯಲ್ಲಿ ಏಕತೆಯ ದೇಶವಲ್ಲ. ಏಕತೆಯಲ್ಲಿ ವಿವಿಧತೆ ಹೊಂದಿರುವ ದೇಶ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಹರಿವ ನದಿ ಒಂದೇ. ಬನ್ನಂಜೆಯವರೂ ಏಕತೆಯಲ್ಲಿ ವೈವಿಧ್ಯದ ನಂಬಿಕೆ ಇಟ್ಟುಕೊಂಡು ಕೃತಿಗಳ ರಚನೆ ಮಾಡಿದರು' ಎಂದು ರೋಹಿತ್ ಚಕ್ರತೀರ್ಥ ಹೇಳಿದರು.

ವಿದ್ವಾಂಸ ಕೃಷ್ಣರಾಜ ಕುತ್ಪಾಡಿ ವಿಶೇಷ ಉಪನ್ಯಾಸ ನೀಡಿದರು. ಎಂ.ವೆಂಕಟೇಶ್ ಕುಮಾರ್, ಸತೀಶ್ ಕೊಳ್ಳಿ, ಕೇಶವ ಜೋಷಿ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ನಾಟಕ ಕೃತಿ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು 2021ನೇ ಸಾಲಿನ 'ಸಾರಂಗಿ ವೆಂಕಟ ರಾಮಯ್ಯ-ಪುಟ್ಟಚ್ಚಮ್ಮ ಸ್ಮಾರಕ ದತ್ತಿ ಪ್ರಶಸ್ತಿ'ಗೆ ನಾಟಕ ಕೃತಿಗಳನ್ನು ಆಹ್ವಾನಿಸಿದೆ.

ಆಸಕ್ತರು ನಾಟಕದ ಮೂರು ಪ್ರತಿಗಳನ್ನು ಬಿ.ಎಂ.ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು-560019 ಈ ವಿಳಾಸಕ್ಕೆ ಇದೇ 16ರೊಳಗೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

1,411 ಕಿ.ಮೀ. ನಿರ್ಮಾಣಕ್ಕೆ ಸಮೀಕ್ಷೆ

ಕರ್ನಾಟಕದಲ್ಲಿ ರೈಲ್ವೆ ಮಾರ್ಗ • ಲೋಕಸಭೆಯಲ್ಲಿ ಉತ್ತರ

ಪ್ರಜಾವಾಣಿ ವಾರ್ತೆ

ಕರ್ನಾಟಕದಲ್ಲಿರುವ ರೈಲ್ವೆ ವಲಯ	ಹೊಸ ಮಾರ್ಗದ ಸಮೀಕ್ಷೆ	ಒಟ್ಟು ಉದ್ದ (ಕಿ.ಮೀ.ಗಳಲ್ಲಿ)
ನೈರುತ್ಯರೈಲ್ವೆ	8	417
ಕೇಂದ್ರರೈಲ್ವೆ	6	784
ದಕ್ಷಿಣ ರೈಲ್ವೆ	2	135
ದಕ್ಷಿಣ ಕೇಂದ್ರರೈಲ್ವೆ	1	75
ಒಟ್ಟು	15	1411



ನವದೆಹಲಿ: ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 1411 ಕಿ.ಮೀ. ಉದ್ದದ 15 ರೈಲು ಮಾರ್ಗಗಳ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲು ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರ ಪ್ರಶ್ನೆಗೆ ಬುಧವಾರ ಲಿಖಿತ ಉತ್ತರ ನೀಡಿರುವ ಸಚಿವರು, 'ಸಮೀಕ್ಷೆಗಾಗಿ ಕಳೆದ ಮೂರು ವರ್ಷಗಳಲ್ಲಿ ₹47.83 ಕೋಟಿ ಅನುದಾನ ಮೀಸಲಿಡಲಾಗಿದ್ದು, ₹19.30 ಕೋಟಿ ವೆಚ್ಚ ಮಾಡಲಾಗಿದೆ' ಎಂದು ಹೇಳಿದ್ದಾರೆ.

ರಾಜ್ಯ ಸರ್ಕಾರಕ್ಕೆ 2016ರಲ್ಲಿ ಪ್ರಸ್ತಾವನೆ: 'ಬೆಂಗಳೂರು-ಕನಕಪುರ-ಚಾಮರಾಜನಗರ- ಸತ್ಯಮಂಗಲಂ ರೈಲು ಮಾರ್ಗ ನಿರ್ಮಾಣಕ್ಕೆ 1997-98ರಲ್ಲಿ ಅನುಮೋದನೆ ನೀಡಲಾಗಿತ್ತು. ರೈಲು ಮಾರ್ಗ ಮೀಸಲು ಅರಣ್ಯದಲ್ಲಿ ಹಾದು ಹೋಗಬೇಕಿತ್ತು. ಹೀಗಾಗಿ, ಚಾಮರಾಜನಗರ- ಸತ್ಯಮಂಗಲಂ ಮಾರ್ಗದ ಕಾಮಗಾರಿಯನ್ನು ಕೈಬಿಟ್ಟು ಬೆಂಗಳೂರು-ಚಾಮರಾಜನಗರ (142 ಕಿ.ಮೀ) ಮಾರ್ಗ ನಿರ್ಮಾಣಕ್ಕೆ ನಿರ್ಣಯಿಸಲಾಯಿತು. ಈ ಮಾರ್ಗಕ್ಕೆ ಬೇಕಿರುವ ಜಾಗವನ್ನು ಉಚಿತವಾಗಿ ನೀಡಲು ಹಾಗೂ ಯೋಜನೆಯ ಶೇ 50 ಮೊತ್ತ ಭರಿಸಲು ಕರ್ನಾಟಕ ಸರ್ಕಾರ ಒಪ್ಪಿಕೊಂಡಿತು. ಯೋಜನೆಗೆ ಬೇಕಿರುವ ಭೂಮಿಯ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರಕ್ಕೆ 2016ರಲ್ಲಿ ಸಲ್ಲಿಸಲಾಗಿದೆ' ಎಂದು ಸಚಿವರು ಉತ್ತರ ನೀಡಿದ್ದಾರೆ.

ಬೆಂಗಳೂರು-ಹೆಜ್ಜಾಲೆ-ಚಾಮರಾಜನಗರ ರೈಲು ಮಾರ್ಗದ ಕಾಮಗಾರಿ ಯಾವಾಗ ಆರಂಭವಾಗಿ ಪೂರ್ಣಗೊಳ್ಳುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ಯೋಜನಾ ಮೊತ್ತಕ್ಕೆ ಆಯಾ ರಾಜ್ಯ ಪಾಲು ನೀಡುವುದು, ತ್ವರಿತವಾಗಿ ಭೂಸ್ವಾಧೀನ ಪ್ರಕ್ರಿಯೆ, ಅರಣ್ಯ ಭೂಮಿಗಳ ಸ್ವಾಧೀನಕ್ಕಾಗಿ ಒಪ್ಪಿಗೆ, ವಿವಿಧ ಪ್ರಾಧಿಕಾರಗಳಿಂದ ಅನುಮೋದನೆ, ಭೌಗೋಳಿಕ ಸನ್ನಿವೇಶ, ಕಾನೂನು ಮತ್ತು ಸುವ್ಯವಸ್ಥೆ ಮತ್ತಿತರ ಅಂಶಗಳು ಯಾವುದೇ ರೈಲ್ವೆ ಯೋಜನೆ ಪೂರ್ಣಗೊಳ್ಳುವಲ್ಲಿ ಪರಿಣಾಮ ಬೀರುತ್ತವೆ' ಎಂದು ತಿಳಿಸಿದ್ದಾರೆ.

ಜಂಟಿ ಸಾಲ ನೀಡಲು ಅನುಕೂಲ: ಮಹಾಬಲೇಶ್ವರ

ಕರ್ಣಾಟಕ ಬ್ಯಾಂಕ್–ಯುಬಿ ನಡುವೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ ತನ್ನ ಗ್ರಾಹಕರ ಅನುಕೂಲಕ್ಕಾಗಿ ದೇಶದ ಅತಿದೊಡ್ಡ ಜಂಟಿ-ಸಾಲ ನೀಡುವ ವೇದಿಕೆಯಾದ ಯುಬಿ (yubi) ಕೋ ಲೆಂಡ್ ಮೂಲಕ ಜಂಟಿ-ಸಾಲ ನೀಡುವ ಒಪ್ಪಂದವನ್ನು ಮಾಡಿಕೊಂಡಿದೆ.

ಈ ಸಹಯೋಗವು ಬ್ಯಾಂಕ್‌ಗೆ ವಿವಿಧ ಎನ್‌ಬಿಎಫ್‌ಸಿಗಳನ್ನು (non banking financial company) ಡಿಜಿಟಲ್ ವಾಹಿನಿಗಳ ಮೂಲಕ ಸಂಪರ್ಕಿಸಿ ಗಮನಾರ್ಹ ಪ್ರಮಾಣದ ಹಣವನ್ನು ಸಾಲವಾಗಿ ನೀಡಲು ಅವಕಾಶ ಒದಗಿಸುತ್ತದೆ.

ಒಡಂಬಡಿಕೆಯನ್ನು ಅಂಗೀಕರಿಸಿ ಮಾತನಾಡಿದ ಕರ್ಣಾಟಕ ಬ್ಯಾಂಕಿನ ವ್ಯವಸ್ಥಾಪಕ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್ ಅವರು, 'ಕೆಬಿಎಲ್ ಹಾಗೂ ಯುಬಿಯ ಒಡಂಬಡಿಕೆಯು ಗ್ರಾಹಕಸ್ನೇಹಿಯಾಗಿದೆ. ಯುಬಿ ಸಂಸ್ಥೆಯ ಉತ್ತಮ ಡಿಜಿಟಲ್ ಪ್ಲಾಟ್‌ಫಾರ್ಮ್ ಮೂಲಕ ಬ್ಯಾಂಕಿಗೆ ಹೆಚ್ಚಿನ ಎನ್‌ಬಿಎಫ್‌ಸಿ ಪಾಲುದಾರರನ್ನು ಹಾಗೂ ಗ್ರಾಹಕರನ್ನು ತಲುಪಲು ಅನುಕೂಲವಾಗುತ್ತದೆ. ಬ್ಯಾಂಕ್ ಜಂಟಿ-ಸಾಲ ನೀಡುವುದರ ಮೇಲೆ ಕೇಂದ್ರೀಕರಿಸುವ ಜತೆಗೆ, ಗ್ರಾಹಕರಿಗೆ ಅವರಿರುವ ಸ್ಥಳದಲ್ಲಿಯೇ ಕ್ಷಿಪ್ರವಾಗಿ ವಿವಿಧ ಎನ್‌ಬಿಎಫ್‌ಸಿಗಳ ಮೂಲಕ ಸಾಲ ವಿತರಿಸಲಿದೆ' ಎಂದರು.

ಯುಬಿ ಸಂಸ್ಥಾಪಕ ಮತ್ತು ಸಿಇಒ ಗೌರವ್ ಕುಮಾರ್ ಮಾತನಾಡಿ, 'ಸಾಲ ನೀಡಿಕೆಯನ್ನು ತಂತ್ರಜ್ಞಾನದ ಮೂಲಕ ಸುಗಮಗೊಳಿಸುವುದು ಯುಬಿ ಗುರಿಯಾಗಿದೆ. ಒಡಂಬಡಿಕೆಯಿಂದಾಗಿ ಕರ್ಣಾಟಕ ಬ್ಯಾಂಕ್ ಇತರ ಅನೇಕ ಹಣಕಾಸು ಸಂಸ್ಥೆಗಳ ಜತೆ ಸಂಪರ್ಕ ಸಾಧಿಸಲು ಸಾಧ್ಯ. ನಾವು ಬ್ಯಾಂಕಿಂಗ್ ಸೇವೆ ತಲುಪದ ವರ್ಗಕ್ಕೆ ಸಾಲ ನೀಡಲು ಮತ್ತು ಎಲ್ಲರನ್ನೂ ವಿತ್ತೀಯ ಸೇರ್ಪಡೆಯ ವಾಹಿನಿಗೆ ತರಲು ಈ ಒಡಂಬಡಿಕೆ ಅನುಕೂಲಕರವಾಗಿದೆ' ಎಂದರು.


ಬ್ಯಾಂಕಿನ ಚೀಫ್ ಆಪರೇಟಿಂಗ್ ಆಫೀಸರ್ ಬಾಲಚಂದ್ರ ವೈ.ವಿ, ಚೀಫ್ ಬ್ಯುಸಿನೆಸ್ ಆಫೀಸರ್ ಗೋಕುಲ್‌ದಾಸ್ ಪೈ ಇದ್ದರು.



ಕರ್ಣಾಟಕ ಬ್ಯಾಂಕ್ ಸಿಇಒ ಮಹಾಬಲೇಶ್ವರ ಎಂ.ಎಸ್ ಮತ್ತು ಯುಬಿ ಸಂಸ್ಥಾಪಕ ಗೌರವ್ ಕುಮಾರ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು

'ಪಿಎಸ್‌ಐ ನೇಮಕಾತಿ: ಶೀಘ್ರದಲ್ಲಿ ಮರು ಪರೀಕ್ಷೆ'

ಪ್ರಜಾವಾಣಿ ವಾರ್ತೆ



ಆರಗ ಜ್ಞಾನೇಂದ್ರ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಗೆ ಶೀಘ್ರದಲ್ಲಿ ಮರು ಪರೀಕ್ಷೆ ನಡೆಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಗೃಹ ಸಚಿವರ ಅಧಿಕೃತ ನಿವಾಸದಲ್ಲಿ ಬುಧವಾರ ಅವರನ್ನು ಭೇಟಿಮಾಡಿದ ಪಿಎಸ್‌ಐ ಹುದ್ದೆ ಆಕಾಂಕ್ಷಿಗಳು ಈಗ ನಡೆದಿರುವ ಪರೀಕ್ಷೆಯನ್ನು ರದ್ದುಗೊಳಿಸಿರುವುದರಿಂದ ಆಗಿರುವ ತೊಂದರೆಯನ್ನು ಪರಿಹರಿಸುವಂತೆ ಮನವಿ ಮಾಡಿದರು. ಆಗ ಪ್ರತಿಕ್ರಿಯಿಸಿದ ಸಚಿವರು, ಶೀಘ್ರದಲ್ಲಿ ಮರು ಪರೀಕ್ಷೆ ನಡೆಸುವ ಭರವಸೆ ನೀಡಿದರು.

'ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಕುರಿತು ಸಿಐಡಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತನಿಖೆ ಮುಕ್ತಾಯವಾದ ತಕ್ಷಣ ಮರು ಪರೀಕ್ಷೆಗೆ ಪ್ರಕಟಣೆ ಹೊರಡಿಸಲಾಗುವುದು. ಈಗ ರದ್ದುಗೊಂಡಿರುವ ಪರೀಕ್ಷೆಯನ್ನು ಬರೆದಿರುವ ಹಾಗೂ ಅಕ್ರಮದಲ್ಲಿ ಭಾಗಿಯಾಗದ ಎಲ್ಲ 56,000 ಅಭ್ಯರ್ಥಿಗಳಿಗೂ ಮರು ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು' ಎಂದು ಜ್ಞಾನೇಂದ್ರ ತಿಳಿಸಿದರು.

'ಮರು ಪರೀಕ್ಷೆ ನಡೆಯುವುದು ತಡವಾದರೆ ವಯೋಮಿತಿ ಮೀರಬಹುದು ಎಂಬ ಆತಂಕ ಅಗತ್ಯವಿಲ್ಲ. ಪರೀಕ್ಷೆ ಬರೆದಿರುವ ಎಲ್ಲ ಅಭ್ಯರ್ಥಿಗಳೂ ನಿಶ್ಚಿಂತೆಯಿಂದ ಮರು ಪರೀಕ್ಷೆಗೆ ತಯಾರಿ ನಡೆಸಿ' ಎಂದರು.



ರಾಜೀವ್‌ಗಾಂಧಿ ನಗರದಲ್ಲಿ ಮನೆಗೆ ನುಗ್ಗಿದ್ದ ನೀರನ್ನು ಮಹಿಳೆಯೊಬ್ಬರು ಹೊರ ಹಾಕುತ್ತಿರುವುದು –ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ದನ್



ಬಸವನಗುಡಿ ನ್ಯಾಷನಲ್ ಹೈಸ್ಕೂಲ್ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿ ನಿರ್ಮಾಣ ಕಾಮಗಾರಿ ನಡೆಸುತ್ತಿರುವ ಜಾಗದಲ್ಲಿ ಅರಳಿ ಮರವೊಂದು ಧರೆಗುರುಳಿದೆ –ಪ್ರಜಾವಾಣಿ ಚಿತ್ರ/ರಂಜು ಪಿ.



ಚಾಮರಾಜಪೇಟೆ ಈದ್ಗಾ ಮೈದಾನದ ಬಳಿ ಆಟೊದ ಮೇಲೆ ಮರವೊಂದು ಬೇರು ಸಮೇತ ಉರುಳಿತ್ತು –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಧಾರಾಕಾರ ಮಳೆ: ನ್ಯಾಷನಲ್ ಹೈಸ್ಕೂಲ್ ಕ್ರೀಡಾಂಗಣದಲ್ಲಿ ಉರುಳಿದ ಹಳೆಯ ಅರಳಿ ಮರ, ಆಟೊ ಜಖಂ

ಬಡಾವಣೆಗೆ ನೀರು: ನಿವಾಸಿಗಳ ಕಣ್ಣೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಮಂಗವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದ ಹಲವು ಬಡಾವಣೆಗಳ ಮನೆಗಳಿಗೆ ನೀರು ನುಗ್ಗಿ, ನಿವಾಸಿಗಳು ಜಾಗರಣೆ ಮಾಡಿದರು. ಬುಧವಾರ ಸಹ ನಗರದ ವಿವಿಧ ಬಡಾವಣೆಗಳು ಮತ್ತು ಹೊರವಲಯದಲ್ಲಿ ಜೋರು ಮಳೆ ಸುರಿದಿದೆ.

4 ದಿನಗಳಿಂದ ನಗರದಲ್ಲಿ ಮಳೆ ಸುರಿಯುತ್ತಿರುವ ಪರಿಣಾಮ ನೂರಾರು ಮನೆಗಳಲ್ಲಿ ಆಹಾರ ಸಾಮಗ್ರಿಗಳು, ಪೀಠೋಪಕರಣ ನೀರಿನಲ್ಲಿ ತೊಯ್ದು ಹೋಗಿದ್ದು, ಅಪಾರ ನಷ್ಟ ಸಂಭವಿಸಿದೆ ಎಂದು ನಿವಾಸಿಗಳು ಅಳಲು ತೋಡಿಕೊಂಡರು. ರಾಜೀವ್‌ಗಾಂಧಿ ನಗರ, ಸಾಯಿ ಲೇಔಟ್, ಕಾವೇರಿ ಬಡಾವಣೆ, ಕುಮಾರಸ್ವಾಮಿ ಲೇಔಟ್ ಸೇರಿ ಕಾಲುವೆ ಅಂಚಿನ ಬಡಾವಣೆಗಳ ಮನೆಗಳಿಗೆ ನೀರು ನುಗ್ಗಿದ್ದರಿಂದ, ನಿವಾಸಿಗಳು ನೀರನ್ನು ಹೊರಹಾಕುವುದರಲ್ಲಿ ತೊಡಗಿದ್ದರು.

ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್ ಕ್ರೀಡಾಂಗಣದಲ್ಲಿ ಅಂದಾಜು ನೂರು ವರ್ಷದ ಮರವೊಂದು ಮಳೆಯಿಂದ ಉರುಳಿತು. ಕ್ರೀಡಾಂಗಣದಲ್ಲಿ ಬಿಬಿಎಂಪಿಯವರು ಪ್ರೇಕ್ಷಕರ ಗ್ಯಾಲರಿ ನಿರ್ಮಿಸುತ್ತಿದ್ದು, ಅವೈಜ್ಞಾನಿಕ ಕಾಮಗಾರಿಯಿಂದಾಗಿ ಭೂಮಿ ಸಡಿಲಗೊಂಡು ಮರ ಉರುಳಿದೆ ಎಂದು ಸ್ಥಳೀಯರು ದೂರಿದರು.

ಮಳೆ ಪ್ರಮಾಣ (ಸೆಂ.ಮೀಗಳಲ್ಲಿ)	
ಎಚ್‌ಎಎಲ್	7.34
ಬೆಂಗಳೂರು ನಗರ	5.23
ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ	8.20



ಹೊರಮಾವು ಕಾವೇರಿನಗರದ ಸಾಯಿ ಲೇಔಟ್ ಜಲಾವೃತಗೊಂಡಿರುವುದು –ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

ಶ್ರೀಸಾಯಿ ಲೇಔಟ್ ಜಲಮಯ

ಕೆ.ಆರ್.ಪುರ: ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಕ್ಷೇತ್ರದ ಹೊರಮಾವು ವಾರ್ಡ್‌ನ ಶ್ರೀಸಾಯಿ ಬಡಾವಣೆಯ 250ಕ್ಕೂ ಹೆಚ್ಚು ಮನೆಗಳು ಜಲಾವೃತವಾಗಿದ್ದು ನಿವಾಸಿಗಳ ಪರದಾಟ ಮುಂದುವರಿದಿದೆ.

ಹೆಬ್ಬಾಳ, ಬಾಣಸವಾಡಿ, ಹೆಣ್ಣೂರು, ನಾಗವಾರ ಭಾಗಗಳಿಂದ ರಾಜಕಾಲುವೆ ಮೂಲಕ ಹರಿದು ಬರುವ ಮಳೆ ನೀರು ಗೆದ್ದಲಹಳ್ಳಿ ಸಮೀಪದ ರೈಲ್ವೆ ವೆಂಟ್ ಮೂಲಕ ಹರಿದುಹೋಗಬೇಕು. ಆದರೆ, ರೈಲ್ವೆ ವೆಂಟ್ ಕಿರಿದಾಗಿರುವ ಕಾರಣ ನೀರು ಹಿಂದಕ್ಕೆ ಸರಿದು ತಗ್ಗು ಪ್ರದೇಶದಲ್ಲಿರುವ ಶ್ರೀಸಾಯಿ ಲೇಔಟ್‌ಗೆ ನುಗ್ಗಿ ಇಡೀ ಲೇಔಟ್ ಸಂಪೂರ್ಣ ಜಲಮಯವಾಗಿದೆ.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಭೇಟಿ ಪರಿಶೀಲನೆ ನಡೆಸಿದರು.'ರೈಲ್ವೆ ವೆಂಟ್ ಅನ್ನು ಹೆಚ್ಚು ಮಾಡಲು ಮುಖ್ಯಮಂತ್ರಿ ₹ 17.5 ಕೋಟಿ ಅನುದಾನ ನೀಡಿದ್ದಾರೆ. ಈ ವಿಚಾರವಾಗಿ ವರ್ಕ್ ಆರ್ಡರ್ ಪಡೆದುಕೊಂಡು ಸ್ಥಳಕ್ಕೆ ಬಂದಿದ್ದೇನೆ. ಮುಂದಿನ ಮಳೆಗಾಲದ ವೇಳೆಗೆ ಸಮಸ್ಯೆ ಬಗೆಹರಿಸುತ್ತೇವೆ' ಎಂದು ಸಚಿವರು ಹೇಳಿದರು. ಸಾಯಿ ಲೇಔಟ್‌ಗೆ ನೀರು ಬಾರದಂತೆ ಮಾಡಲು ಯೋಜನೆ ರೂಪಿಸಿಲಾಗಿದ್ದು, ವರ್ಕ್ ಆರ್ಡರ್ ಕೂಡ ಸಿದ್ಧವಾಗಿದೆ. ಮಳೆ ನಿಂತ ಕೂಡಲೇ ಕೆಲಸ ಕೈಗೆತ್ತಿಕೊಳ್ಳಲಾಗುವುದು ಎಂದು ಸಚಿವ ಬಸವರಾಜು ಸ್ಥಳೀಯರಿಗೆ ಭರವಸೆ ನೀಡಿದರು. ಬಿಬಿಎಂಪಿ ಕಮಿಷನರ್ ತುಷಾರ್ ಗಿರಿನಾಥ್ ಉಪಸ್ಥಿತರಿದ್ದರು.



ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಶ್ರೀಸಾಯಿ ಬಡಾವಣೆಯಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸಿದರು.

300ಕ್ಕೂ ಹೆಚ್ಚು ಮನೆಗಳಿಗೆ ನೀರು

ನಗರದ ಪೂರ್ವ ಮತ್ತು ಉತ್ತರ ಭಾಗದಲ್ಲಿ ಮಳೆಯಿಂದ ಹೆಚ್ಚಿನ ಹಾನಿಯಾಗಿದ್ದು, ಮಂಗಳವಾರ ಸುರಿದ ಮಳೆಗೆ 300ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ.

'ಹೊರಮಾವು ಸಾಯಿ ಲೇಔಟ್‌ನಲ್ಲಿ 270 ಮನೆಗಳು, ನಾಗಪ್ಪರೆಡ್ಡಿ ಲೇಔಟ್‌ನಲ್ಲಿ 12 ಮನೆಗಳು, ಪೈ ಲೇಔಟ್‌ನಲ್ಲಿ 14 ಮನೆಗಳಿಗೆ ನೀರು ನುಗ್ಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಎಚ್‌ಆರ್‌ಬಿಆರ್ ಲೇಔಟ್‌ನಲ್ಲೂ ರಾಜಕಾಲುವೆ ನೀರು ಬಡಾವಣೆಗೆ ನುಗ್ಗಿದೆ. ಮೂರು ಕಡೆ ಪಂಪ್‌ಗಳನ್ನು ಇರಿಸಿ ನೀರು ಹೊರಹಾಕುವ ಜತೆಗೆ ತಾತ್ಕಾಲಿಕ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದರು. ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ರೈಲ್ವೆ ಸೇತುವೆಯ ಬಳಿ ರಾಜಕಾಲುವೆ ಹಿಗ್ಗಿಸಬೇಕಿದ್ದು, ಈ ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದೆ ಎಂದರು.

ಆನೇಕಲ್: 30.7 ಮಿ.ಮೀ ಮಳೆ

ಆನೇಕಲ್: ತಾಲ್ಲೂಕಿನಾದ್ಯಂತ ಭಾರಿ ಮಳೆ ಸುರಿಯುತ್ತಿದ್ದು ರಾಷ್ಟ್ರೀಯ ಹೆದ್ದಾರಿ 7ರ ಹೆಬ್ಬಗೋಡಿಯಿಂದ ಚಂದಾಪುರದವರೆಗಿನ ರಸ್ತೆಯು ಕೆರೆಯಂತಾಗಿದೆ. ಸಂಪೂರ್ಣವಾಗಿ ರಸ್ತೆಯು ನೀರಿನಿಂದ ತುಂಬಿದ್ದು, ಜನರು ಪರದಾಡುವಂತಾಯಿತು.

ಆನೇಕಲ್ ತಾಲ್ಲೂಕಿನಲ್ಲಿ ಕಳೆದ 24 ಗಂಟೆಯಲ್ಲಿ 30.7 ಮಿ.ಮೀ. ಮಳೆಯಾಗಿದೆ. ಬುಧವಾರ ಮಧ್ಯಾಹ್ನ ಪ್ರಾರಂಭವಾದ ಮಳೆ ಸಂಜೆವರೆಗೂ ಧಾರಾಕಾರವಾಗಿ ಸುರಿಯಿತು. ದ್ವಿಚಕ್ರವಾಹನ ಸವಾರರು ರಸ್ತೆಗಳಲ್ಲಿ ಸಂಚರಿಸಲಾಗದೆ ಎದ್ದು ಬಿದ್ದು ಸಾಗುತ್ತಿದ್ದರು.

ಮೈಸೂರು–ಬೆಂಗಳೂರು: ರೈಲು ರದ್ದು

ಮಂಡ್ಯ: ಕೆರೆ, ಕಾಲುವೆಗಳು ಉಕ್ಕಿ ಹರಿಯುತ್ತಿರುವ ಕಾರಣ ಬೆಂಗಳೂರು–ಮೈಸೂರು ನಡುವೆ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಅದೇ ರೀತಿ ರೈಲು ಸಂಚಾರದಲ್ಲೂ ವ್ಯತ್ಯಯ ಉಂಟಾಗಿದ್ದು ಮಂಗಳವಾರ ಎರಡೂ ನಗರಗಳ ನಡುವೆ 10 ರೈಲುಗಳ ಸಂಚಾರ ರದ್ದುಗೊಳಿಸಲಾಗಿದೆ.

ಮಂಡ್ಯ ತಾಲ್ಲೂಕಿನ ಹನಕೆರೆ ಹಾಗೂ ಮದ್ದೂರು ಬಳಿ ರೈಲು ಹಳಿ ಮೇಲೆ ರಭಸವಾಗಿ ನೀರು ಹರಿಯತ್ತಿರುವ ಕಾರಣ ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ ಮೆಮೂ–ಪ್ಯಾಸೆಂಜರ್ ರೈಲುಗಳನ್ನು ಬಂದ್ ಮಾಡಲಾಗಿದೆ. ಎಕ್ಸ್‌ಪ್ರೆಸ್ ರೈಲುಗಳು ಮಾತ್ರ ನಿಧಾನವಾಗಿ ಚಲಿಸಿವೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಹತ್ಯೆ ಆರೋಪಿಗಳು ಕಸ್ಟಡಿಗೆ

ಮಂಗಳೂರು: ಸುರತ್ಕಲ್‌ನ ಮಹಮ್ಮದ್ ಫಾಝಿಲ್ ಹತ್ಯೆ ಆರೋಪದ ಮೇಲೆ ಬಂಧಿತರಾಗಿರುವ ಆರು ಆರೋಪಿಗಳಿಗೆ ಮಂಗಳೂರು ನ್ಯಾಯಾಲಯವು 14 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಜುಲೈ 27ರ ರಾತ್ರಿ ಕಾರಿನಲ್ಲಿ ಬಂದ ತಂಡ ಫಾಝಿಲ್ ಅವರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ, ಪರಾರಿಯಾಗಿತ್ತು. ಈ ಘಟನೆ ಸಂಬಂಧ ಪೊಲೀಸರು ಸುಹಾಸ್ ಶೆಟ್ಟಿ, ಮೋಹನ್ ಸಿಂಗ್, ಗಿರಿಧರ್, ಅಭಿಷೇಕ್, ಶ್ರೀನಿವಾಸ್ ಹಾಗೂ ದೀಕ್ಷಿತ್ ಸೇರಿ ಒಟ್ಟು ಆರು ಜನರನ್ನು ಬಂಧಿಸಿದ್ದರು.

ಆರೋಪಿಗಳಿಗೆ ಕಾರನ್ನು ಬಾಡಿಗೆ ನೀಡಿದ ಆರೋಪದ ಮೇಲೆ ಬಂಧಿತನಾಗಿದ್ದ ಅಜಿತ್ ಕ್ರಾಸ್ತಾನನ್ನು ಐದು ದಿನಗಳ ಪೊಲೀಸ್ ಕಸ್ಟಡಿಗೆ ನೀಡಲಾಗಿತ್ತು.

ಆರೋಪಿಗಳನ್ನು ಬಿಗಿ ಭದ್ರತೆಯಲ್ಲಿ ಘಟನೆ ನಡೆದ ಪ್ರದೇಶಕ್ಕೆ ಬುಧವಾರ ಕರೆದೊಯ್ದು ಸ್ಥಳ ಮಹಜರು ನಡೆಸಲಾಯಿತು.

ಪೊಲೀಸ್ ಕಸ್ಟಡಿ ನಾಲ್ಕು ದಿನ ವಿಸ್ತರಣೆ: ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲ್ಪಟ್ಟಿರುವ ಆರೋಪಿ ಶಫೀಕ್ (27)ನನ್ನು ಮತ್ತೆ 4ದಿನ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

₹ 6 ಲಕ್ಷದ ದ್ವಿಚಕ್ರ ವಾಹನ ವಶ



ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳ ಕಳವು ಮಾಡಿದ್ದ ಆರೋಪಿಯನ್ನು ಬಂಧಿಸಿರುವ ಕಲಾಸಿಪಾಳ್ಯ ಪೊಲೀಸ್ ಠಾಣೆಯ ಪೊಲೀಸರು, ₹ 6 ಲಕ್ಷ ಮೌಲ್ಯದ ವಿವಿಧ ಕಂಪನಿಯ 10 ಬೈಕ್ ವಶಪಡಿಸಿಕೊಂಡಿದ್ದಾರೆ.

ನಗರದ ಹೊಸಗುರಪ್ಪನಪಾಳ್ಯದ ನಿವಾಸಿ ಸೈಯದ್ ವಸೀಂ (24) ಎಂಬ ಆರೋಪಿಯನ್ನು ಬಂಧಿಸಲಾಗಿದೆ.

'ಕಲಾಸಿಪಾಳ್ಯ, ಚಂದ್ರಾಲೇಔಟ್, ಬೊಮ್ಮನಹಳ್ಳಿ, ಗೋವಿಂದರಾಜ ನಗರ, ಬ್ಯಾಟರಾಯನಪುರ, ಬನಶಂಕರಿ, ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿ ಕಳವು ಮಾಡಿದ್ದ ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಅಬ್ದುಲ್ ಸಲೀಂ ಅವರು ಕಲಾಸಿಪಾಳ್ಯದ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್ ಕಳವು ಮಾಡಲಾಗಿತ್ತು. ಸಲೀಂ ನೀಡಿದ ದೂರು ಆಧರಿಸಿ ತನಿಖೆ ನಡೆಸಿದ್ದರಿಂದ ಪ್ರಕರಣ ಬೆಳಕಿಗೆ ಬಂತು' ಎಂದು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಮ್ಯಾನ್‌ಹೋಲ್‌ಗೆ ಬಿದ್ದ ವಿದ್ಯಾರ್ಥಿನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಹೆಬ್ಬಾಳದ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಶಾಲೆಗೆ ತೆರಳುತ್ತಿದ್ದ ವಿದ್ಯಾರ್ಥಿನಿ ದೀಪಿಕಾ (14) ಮ್ಯಾನ್‌ಹೋಲ್‌ಗೆ ಬಿದ್ದಿದ್ದು, ಅಪಾಯದಿಂದ ಪಾರಾಗಿದ್ದಾಳೆ.

ನಾರಾಯಣ ಶಾಲೆಯಲ್ಲಿ 9ನೇ ತರಗತಿ ದೀಪಿಕಾ ಓದುತ್ತಿದ್ದಳು. ಮಂಗಳವಾರ ರಾತ್ರಿ ಹೆಬ್ಬಾಳ ಭಾಗದಲ್ಲಿ ಧಾರಾಕಾರ ಮಳೆ ಸುರಿದಿತ್ತು. ರಸ್ತೆಯಲ್ಲಿ ಮಳೆಯ ನೀರು ಹರಿಯುತ್ತಿದ್ದ ಪರಿಣಾಮ ಯಾರಿಗೂ ಮ್ಯಾನ್‌ಹೋಲ್ ಅಪಾಯಕ್ಕೆ ಆಹ್ವಾನಿಸುತ್ತಿರುವುದು ಕಾಣಿಸುತ್ತಿರಲಿಲ್ಲ.

ಶಾಲೆಗೆ ತೆರಳುವ ಧಾವಂತದಲ್ಲಿದ್ದ ದೀಪಿಕಾಗೆ ಬೈಕ್ ಅಡ್ಡ ಬಂತು. ಹೀಗಾಗಿ ಮುಂದಕ್ಕೆ ಚಲಿಸಲು ಹೋಗಿ ಮ್ಯಾನ್‌ಹೋಲ್‌ಗೆ ಬಿದ್ದಳು. ಆಕೆ ಕೂಗಿಕೊಂಡಾಗ ಸ್ಥಳದಲ್ಲಿದ್ದ ಪಾದಚಾರಿಗಳು ಮೇಲಕ್ಕೆತ್ತಿ ಅಪಾಯದಿಂದ ಪಾರು ಮಾಡಿದ್ದಾರೆ. ವಿದ್ಯಾರ್ಥಿನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬಿ

ಬಿಎಂಪಿ ಸಿಬ್ಬಂದಿ ಮ್ಯಾನ್‌ಹೋಲ್ ದುರಸ್ತಿ ಮಾಡಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ನಗರದ ವಿವಿಧೆಡೆ ಮ್ಯಾನ್‌ಹೋಲ್‌ಗಳು ಅಪಾಯದ ಮುನ್ಸೂಚನೆ ನೀಡುತ್ತಿವೆ. ಮಳೆ ಬಂದಾಗ ಅಪಾಯ ಖಚಿತ. ಮೊದಲು ನಗರದ ಗುಂಡಿಗಳನ್ನು ಮುಚ್ಚಬೇಕು. ಮ್ಯಾನ್‌ಹೋಲ್ ದುರಸ್ತಿ ಪಡಿಸಬೇಕು ಎಂಬುದು ಸ್ಥಳೀಯರ ಆಗ್ರಹವಾಗಿದೆ.

ಬಿಬಿಎಂಪಿ ವಾರ್ಡ್‌ವಾರು ಮೀಸಲಾತಿ ಪಟ್ಟಿ ಪ್ರಕಟ



ಬೆಂಗಳೂರು: ಬಿಬಿಎಂಪಿ 243 ವಾರ್ಡ್‌ಗಳಿಗೆ ಮೀಸಲಾತಿಯನ್ನು ನಿಗದಿ ಮಾಡಿ ಕರಡು ಪಟ್ಟಿಯನ್ನು ರಾಜ್ಯ ಸರ್ಕಾರ ಬುಧವಾರ ತಡರಾತ್ರಿ ಅಧಿಸೂಚನೆ ಹೊರಡಿಸಿದೆ. 2011ರ ಜನಗಣತಿಯಂತೆ ಹಾಗೂ ಸುಪ್ರೀಂ ಕೋರ್ಟ್ ಸೂಚನೆಯಂತೆ ಅಧಿಸೂಚನೆ ಹೊರಡಿಸಲಾಗಿದೆ. ಸಾರ್ವಜನಿಕರಿಗೆ ಆಕ್ಷೇಪಣೆ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಿದೆ.

ಯಲಹಂಕ ವಿಧಾನಸಭೆ ಕ್ಷೇತ್ರ
(ಸಂಖ್ಯೆ;ವಾರ್ಡ್;ಮೀಸಲು)
1;ಕೆಂಪೇಗೌಡ ವಾರ್ಡ್;ಸಾಮಾನ್ಯ
2;ಚೌಡೇಶ್ವರಿ ವಾರ್ಡ್;ಹಿಂದುಳಿದ ವರ್ಗ ಎ
3;ಸೋಮೇಶ್ವರ ವಾರ್ಡ್;ಸಾಮಾನ್ಯ
4;ಅಟ್ಟೂರು ವಾರ್ಡ್;ಹಿಂದುಳಿದ ವರ್ಗ ಎ (ಮಹಿಳೆ)
5;ಯಲಹಂಕ ಸ್ಯಾಟಲೈಟ್ ಟೌನ್;ಸಾಮಾನ್ಯ (ಮಹಿಳೆ)
ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರ
6;ಕೋಗಿಲು;ಸಾಮಾನ್ಯ (ಮಹಿಳೆ)
7;ಥಣಿಸಂದ್ರ;ಹಿಂದುಳಿದ ವರ್ಗ ಎ (ಮಹಿಳೆ)
8;ಜಕ್ಕೂರು;ಸಾಮಾನ್ಯ
9;ಅಮೃತಹಳ್ಳಿ;ಸಾಮಾನ್ಯ (ಮಹಿಳೆ)
10;ಕೆಂಪಾಪುರ;ಸಾಮಾನ್ಯ
11;ಬ್ಯಾಟರಾಯನಪುರ;ಹಿಂದುಳಿದ ವರ್ಗ ಎ
12;ಕೊಡಿಗೆಹಳ್ಳಿ;ಸಾಮಾನ್ಯ
13;ದೊಡ್ಡಬೊಮ್ಮಸಂದ್ರ;ಸಾಮಾನ್ಯ (ಮಹಿಳೆ)
14;ವಿದ್ಯಾರಣ್ಯಪುರ;ಸಾಮಾನ್ಯ (ಮಹಿಳೆ)
15;ಕುವೆಂಪುನಗರ;ಎಸ್.ಸಿ (ಮಹಿಳೆ)
ದಾಸರಹಳ್ಳಿ ವಿಧಾನಸಭೆ ಕ್ಷೇತ್ರ
16;ಕಮ್ಮಗೊಂಡನಹಳ್ಳಿ;ಎಸ್.ಸಿ.
17;ಶೆಟ್ಟಿಹಳ್ಳಿ;ಸಾಮಾನ್ಯ (ಮಹಿಳೆ)
18;ಬಾಗಲಕುಂಟೆ;ಹಿಂದುಳಿದ ವರ್ಗ ಎ (ಮಹಿಳೆ)
19;ಡಿಫೆನ್ಸ್ ಕಾಲೊನಿ;ಸಾಮಾನ್ಯ (ಮಹಿಳೆ)
20;ಮಲ್ಲಸಂದ್ರ;ಹಿಂದುಳಿದ ವರ್ಗ ಎ(ಮಹಿಳೆ)
21;ಟಿ. ದಾಸರಹಳ್ಳಿ;ಹಿಂದುಳಿದ ವರ್ಗ ಎ(ಮಹಿಳೆ)
22;ಚೊಕ್ಕಸಂದ್ರ;ಸಾಮಾನ್ಯ (ಮಹಿಳೆ)
23;ನೆಲಗದರೇನಹಳ್ಳಿ;ಸಾಮಾನ್ಯ (ಮಹಿಳೆ)
24;ರಾಜಗೋಪಾಲ್ ನಗರ;ಸಾಮಾನ್ಯ
25;ರಾಜೇಶ್ವರಿನಗರ;ಹಿಂದುಳಿದ ವರ್ಗ ಎ (ಮಹಿಳೆ)
26;ಹೆಗ್ಗನಹಳ್ಳಿ;ಸಾಮಾನ್ಯ
27;ಸುಂಕದಕಟ್ಟೆ;ಸಾಮಾನ್ಯ(ಮಹಿಳೆ)
ಯಶವಂತಪುರ ವಿಧಾನಸಭೆ ಕ್ಷೇತ್ರ
28;ದೊಡ್ಡಬಿದರಕಲ್ಲು;ಎಸ್.ಟಿ. (ಮಹಿಳೆ)
29;ವಿದ್ಯಾಮಾನ್ಯನಗರ;ಸಾಮಾನ್ಯ
30;ಹೇರೋಹಳ್ಳಿ;ಹಿಂದುಳಿದ ವರ್ಗ ಎ(ಮಹಿಳೆ)
31;ದೊಡ್ಡಗೊಲ್ಲರಹಟ್ಟಿ;ಹಿಂದುಳಿದ ವರ್ಗ ಎ
32;ಉಳ್ಳಾಲು;ಸಾಮಾನ್ಯ (ಮಹಿಳೆ)
33;ಕೆಂಗೇರಿ;ಸಾಮಾನ್ಯ
34;ಬಂಡೇಮಠ;ಹಿಂದುಳಿದ ವರ್ಗ ಎ (ಮಹಿಳೆ)
35;ಹೆಮ್ಮಿಗೆಪುರ;ಹಿಂದುಳಿದ ವರ್ಗ ಎ
ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರ
36;ಛತ್ರಪತಿ ಶಿವಾಜಿ;ಸಾಮಾನ್ಯ (ಮಹಿಳೆ)
37;ಚಾಣಕ್ಯ;ಹಿಂದುಳಿದ ವರ್ಗ ಎ
38;ಜೆ.ಪಿ. ಪಾರ್ಕ್;ಹಿಂದುಳಿದ ವರ್ಗ ಬಿ (ಮಹಿಳೆ)
39;ಕನ್ನೇಶ್ವರರಾಮ;ಸಾಮಾನ್ಯ (ಮಹಿಳೆ)
40;ವೀರಮದಕರಿ;ಎಸ್.ಸಿ
41;ಪೀಣ್ಯ;ಹಿಂದುಳಿದ ವರ್ಗ ಎ
42;ಲಕ್ಷ್ಮೀದೇವಿನಗರ;ಎಸ್.ಸಿ.
43;ರಣಧೀರ ಕಂಠೀರವ;ಹಿಂದುಳಿದ ವರ್ಗ ಬಿ (ಮಹಿಳೆ)
44;ವೀರ ಸಿಂಧೂರ ಲಕ್ಷ್ಮಣ;ಸಾಮಾನ್ಯ
45;ವಿಜಯನಗರ ಕೃಷ್ಣದೇವರಾಯ;ಹಿಂದುಳಿದ ವರ್ಗ ಎ
46;ಸರ್.ಎಂ. ವಿಶ್ವೇಶ್ವರಯ್ಯ;ಸಾಮಾನ್ಯ
47;ನಾಲ್ವಡಿ ಕೃಷ್ಣರಾಜ ಒಡೆಯರ್ ಪಾರ್ಕ್;-ಸಾಮಾನ್ಯ (ಮಹಿಳೆ)
48;ಜ್ಞಾನಭಾರತಿ;ಸಾಮಾನ್ಯ
49;ರಾಜರಾಜೇಶ್ವರಿನಗರ;ಹಿಂದುಳಿದ ವರ್ಗ ಎ
ಮಹಾಲಕ್ಷ್ಮಿ ಬಡಾವಣೆ ವಿಧಾನಸಭೆ ಕ್ಷೇತ್ರ
50;ಮಾರಪ್ಪನ ಪಾಳ್ಯ;ಹಿಂದುಳಿದ ವರ್ಗ ಎ (ಮಹಿಳೆ)
51;ನಾಗಪುರ;ಹಿಂದುಳಿದ ವರ್ಗ ಎ
52;ಮಹಾಲಕ್ಷ್ಮಿಪುರ;ಸಾಮಾನ್ಯ (ಮಹಿಳೆ)
53;ನಂದಿನಿ ಲೇಔಟ್;ಸಾಮಾನ್ಯ (ಮಹಿಳೆ)
54;ಜೈ ಮಾರುತಿನಗರ;ಹಿಂದುಳಿದ ವರ್ಗ ಎ (ಮಹಿಳೆ)
55;ಪುನೀತ್ ರಾಜ್‌ಕುಮಾರ್ ವಾರ್ಡ್;ಹಿಂದುಳಿದ ವರ್ಗ ಬಿ
56;ಶಂಕರಮಠ;ಎಸ್.ಸಿ.
57;ಶಕ್ತಿಗಣಪತಿ ನಗರ;ಸಾಮಾನ್ಯ (ಮಹಿಳೆ)
58;ವೃಷಭಾವತಿ ನಗರ;ಸಾಮಾನ್ಯ
ಮಲ್ಲೇಶ್ವರ ವಿಧಾನಸಭೆ ಕ್ಷೇತ್ರ
59;ಮತ್ತಿಕೆರೆ;ಹಿಂದುಳಿದ ವರ್ಗ ಎ
60;ಅರಮನೆ ನಗರ;ಸಾಮಾನ್ಯ
61;ಮಲ್ಲೇಶ್ವರ;ಸಾಮಾನ್ಯ
62;ಸುಬ್ರಹ್ಮಣ್ಯ ನಗರ;ಹಿಂದುಳಿದ ವರ್ಗ ಬಿ
63;ಗಾಯತ್ರಿನಗರ;ಹಿಂದುಳಿದ ವರ್ಗ ಎ
64;ಕಾಡು ಮಲ್ಲೇಶ್ವರ;ಹಿಂದುಳಿದ ವರ್ಗ ಎ
65;ರಾಜಮಹಲ್ ಗುಟ್ಟಹಳ್ಳಿ; ಸಾಮಾನ್ಯ (ಮಹಿಳೆ)
ಹೆಬ್ಬಾಳ ವಿಧಾನಸಭೆ ಕ್ಷೇತ್ರ
66;ರಾಧಾಕೃಷ್ಣ ದೇವಸ್ಥಾನ ವಾರ್ಡ್;ಹಿಂದುಳಿದ ವರ್ಗ ಎ
67;ಸಂಜಯನಗರ;ಸಾಮಾನ್ಯ
68;ವಿಶ್ವನಾಥ ನಾಗೇಹಳ್ಳಿ;ಸಾಮಾನ್ಯ
69;ಮನೋರಾಯನಪಾಳ್ಯ;ಹಿಂದುಳಿದ ವರ್ಗ ಎ (ಮಹಿಳೆ)
70;ಹೆಬ್ಬಾಳ;ಹಿಂದುಳಿದ ವರ್ಗ ಎ (ಮಹಿಳೆ)
71;ಚಾಮುಂಡಿನಗರ;ಸಾಮಾನ್ಯ
72;ಗಂಗಾನಗರ;ಹಿಂದುಳಿದ ವರ್ಗ ಬಿ (ಮಹಿಳೆ)
73;ಜಯಚಾಮರಾಜೇಂದ್ರ ನಗರ;ಸಾಮಾನ್ಯ
ಪುಲಿಕೇಶಿನಗರ ವಿಧಾನಸಭೆ ಕ್ಷೇತ್ರ
74;ಕಾವಲ್ ಬೈರಸಂದ್ರ;ಸಾಮಾನ್ಯ (ಮಹಿಳೆ)
75;ಕುಶಾಲ್ ನಗರ;ಹಿಂದುಳಿದ ವರ್ಗ ಎ (ಮಹಿಳೆ)
76;ಮುನೇಶ್ವರ ನಗರ;ಹಿಂದುಳಿದ ವರ್ಗ ಎ (ಮಹಿಳೆ)
77;ದೇವರಜೀವನಹಳ್ಳಿ;ಹಿಂದುಳಿದ ವರ್ಗ ಎ (ಮಹಿಳೆ)
78;ಎಸ್.ಕೆ. ಗಾರ್ಡನ್;ಎಸ್.ಸಿ. (ಮಹಿಳೆ)
79;ಸಗಾಯರಪುರಂ;ಎಸ್.ಸಿ.
80;ಪುಲಿಕೇಶಿನಗರ;ಹಿಂದುಳಿದ ವರ್ಗ ಬಿ (ಮಹಿಳೆ)
ಕೆ.ಆರ್.ಪುರ ವಿಧಾನಸಭೆ ಕ್ಷೇತ್ರ
81;ಹೊರಮಾವು;ಹಿಂದುಳಿದ ವರ್ಗ ಎ
82;ಬಾಬುಸಾಬ್ ಪಾಳ್ಯ;ಸಾಮಾನ್ಯ
83;ಕಲ್ಕೆರೆ;ಹಿಂದುಳಿದ ವರ್ಗ ಎ (ಮಹಿಳೆ)
84;ರಾಮಮೂರ್ತಿನಗರ;ಸಾಮಾನ್ಯ
85;ವಿಜಿನಾಪುರ;ಎಸ್.ಸಿ. (ಮಹಿಳೆ)
86;ಕೆ.ಆರ್.ಪುರ;ಸಾಮಾನ್ಯ
87;ಮೇಡಹಳ್ಳಿ;ಹಿಂದುಳಿದ ವರ್ಗ ಎ
88;ಬಸವನಪುರ;ಎಸ್.ಸಿ.
89;ದೇವಸಂದ್ರ;ಸಾಮಾನ್ಯ
90;ಮಹದೇವಪುರ;ಹಿಂದುಳಿದ ವರ್ಗ ಎ
91;ಎ.ನಾರಾಯಣಪುರ;ಸಾಮಾನ್ಯ
92;ವಿಜ್ಞಾನ ನಗರ;ಸಾಮಾನ್ಯ (ಮಹಿಳೆ)
93;ಎಚ್‌ಎಎಲ್ ವಿಮಾನ ನಿಲ್ದಾಣ;-ಸಾಮಾನ್ಯ
ಸರ್ವಜ್ಞನಗರ ವಿಧಾನಸಭೆ ಕ್ಷೇತ್ರ
94;ಹೆಣ್ಣೂರು;ಹಿಂದುಳಿದ ವರ್ಗ ಎ (ಮಹಿಳೆ)
95;ನಾಗವಾರ;ಹಿಂದುಳಿದ ವರ್ಗ ಎ (ಮಹಿಳೆ)
96;ಕಾಡುಗೊಂಡನಹಳ್ಳಿ;ಎಸ್.ಟಿ. (ಮಹಿಳೆ)
97;ವೆಂಕಟೇಶಪುರ;ಹಿಂದುಳಿದ ವರ್ಗ ಬಿ (ಮಹಿಳೆ)
98;ಕಾಚರಕನಹಳ್ಳಿ;ಸಾಮಾನ್ಯ (ಮಹಿಳೆ)
99;ಎಚ್‌ಆರ್‌ಬಿಆರ್ ಲೇಔಟ್;ಸಾಮಾನ್ಯ
100;ಬಾಣಸವಾಡಿ;ಸಾಮಾನ್ಯ
101;ಕಮ್ಮನಹಳ್ಳಿ;ಹಿಂದುಳಿದ ವರ್ಗ ಎ
102;ಲಿಂಗರಾಜಪುರ;ಎಸ್.ಸಿ.
103;ಮಾರುತಿ ಸೇವಾನಗರ;ಎಸ್.ಸಿ. (ಮಹಿಳೆ)
ಮಹದೇವಪುರ ವಿಧಾನಸಭೆ ಕ್ಷೇತ್ರ
104;ಕಾಡುಗೋಡಿ;ಹಿಂದುಳಿದ ವರ್ಗ ಎ
105;ಬೆಳತ್ತೂರು;ಎಸ್.ಸಿ.
106;ಹೂಡಿ;ಹಿಂದುಳಿದ ವರ್ಗ ಬಿ
107;ಗರುಡಾಚಾರ್ ಪಾಳ್ಯ;ಸಾಮಾನ್ಯ
108;ದೊಡ್ಡನೆಕ್ಕುಂದಿ;ಸಾಮಾನ್ಯ
109;ಎಇಸಿಎಸ್ ಲೇಔಟ್;ಹಿಂದುಳಿದ ವರ್ಗ ಎ
110;ವೈಟ್‌ಫೀಲ್ಡ್;ಸಾಮಾನ್ಯ
111;ಹಗದೂರು;ಸಾಮಾನ್ಯ (ಮಹಿಳೆ)
112;ವರ್ತೂರು;ಹಿಂದುಳಿದ ವರ್ಗ ಎ
113;ಮುನ್ನೆಕೊಳ್ಳಾಲ;ಸಾಮಾನ್ಯ
114;ಮಾರತಹಳ್ಳಿ;ಹಿಂದುಳಿದ ವರ್ಗ ಎ (ಮಹಿಳೆ)
115;ಬೆಳ್ಳಂದೂರು;ಸಾಮಾನ್ಯ
116;ದೊಡ್ಡಕನಹಳ್ಳಿ;ಸಾಮಾನ್ಯ
ಸಿ.ವಿ. ರಾಮನ್ ನಗರ ವಿಧಾನಸಭೆ ಕ್ಷೇತ್ರ
117;ಸಿ.ವಿ.ರಾಮನ್ ನಗರ;ಸಾಮಾನ್ಯ
118;ಲಾಲ್‌ಬಹದ್ದೂರ್ ನಗರ;ಎಸ್.ಸಿ
119;ಹೊಸ ಬೈಯಪ್ಪನಹಳ್ಳಿ;ಎಸ್.ಸಿ.(ಮಹಿಳೆ)
120;ಹೊಯ್ಸಳ ನಗರ;ಎಸ್.ಸಿ. (ಮಹಿಳೆ)
121;ಹಳೆ ತಿಪ್ಪಸಂದ್ರ;ಸಾಮಾನ್ಯ
122;ಹೊಸ ತಿಪ್ಪಸಂದ್ರ;ಸಾಮಾನ್ಯ
123;ಜಲಕಂಠೇಶ್ವರ ನಗರ;ಸಾಮಾನ್ಯ (ಮಹಿಳೆ)
124;ಜೀವನಬೀಮಾ ನಗರ;ಎಸ್.ಸಿ.
125;ಕೋನೇನ ಅಗ್ರಹಾರ;ಸಾಮಾನ್ಯ (ಮಹಿಳೆ)
ಶಿವಾಜಿನಗರ ವಿಧಾನಸಭೆ ಕ್ಷೇತ್ರ
126;ರಾಮಸ್ವಾಮಿ ಪಾಳ್ಯ;ಎಸ್.ಸಿ. (ಮಹಿಳೆ)
127;ಜಯಮಹಲ್;ಸಾಮಾನ್ಯ (ಮಹಿಳೆ)
128;ವಸಂತ್‌ನಗರ;ಹಿಂದುಳಿದ ವರ್ಗ ಎ (ಮಹಿಳೆ)
129;ಸಂಪಂಗಿರಾಮ್‌ನಗರ;ಹಿಂದುಳಿದ ವರ್ಗ ಎ (ಮಹಿಳೆ)
130;ಭಾರತಿ ನಗರ;ಹಿಂದುಳಿದ ವರ್ಗ ಬಿ (ಮಹಿಳೆ)
131;ಹಲಸೂರು;ಎಸ್.ಸಿ
ಗಾಂಧಿನಗರ ವಿಧಾನಸಭೆ ಕ್ಷೇತ್ರ
132;ದತ್ತಾತ್ರೇಯ ದೇವಸ್ಥಾನ;ಸಾಮಾನ್ಯ (ಮಹಿಳೆ)
133;ಗಾಂಧಿನಗರ;ಹಿಂದುಳಿದ ವರ್ಗ ಎ (ಮಹಿಳೆ)
134;ಸುಭಾಷ್ ನಗರ;ಎಸ್.ಸಿ. (ಮಹಿಳೆ)
135;ಓಕಳಿಪುರ;ಎಸ್.ಸಿ. (ಮಹಿಳೆ)
136;ಬಿನ್ನಿಪೇಟೆ;ಸಾಮಾನ್ಯ (ಮಹಿಳೆ)
137;ಕಾಟನ್ ಪೇಟೆ;ಸಾಮಾನ್ಯ (ಮಹಿಳೆ)
138;ಚಿಕ್ಕಪೇಟೆ;ಸಾಮಾನ್ಯ (ಮಹಿಳೆ)
ರಾಜಾಜಿನಗರ ವಿಧಾನಸಭೆ ಕ್ಷೇತ್ರ
139;ದಯಾನಂದ ನಗರ;ಎಸ್.ಸಿ.
140;ಪ್ರಕಾಶ್ ನಗರ;ಹಿಂದುಳಿದ ವರ್ಗ ಎ (ಮಹಿಳೆ)
141;ರಾಜಾಜಿನಗರ;ಸಾಮಾನ್ಯ (ಮಹಿಳೆ)
142;ಶ್ರೀರಾಮಮಂದಿರ;ಸಾಮಾನ್ಯ
143;ಶಿವನಗರ;ಸಾಮಾನ್ಯ
144;ಬಸವೇಶ್ವರನಗರ;ಹಿಂದುಳಿದ ವರ್ಗ ಬಿ
145;ಕಾಮಾಕ್ಷಿಪಾಳ್ಯ;ಸಾಮಾನ್ಯ
ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರ
146;ಡಾ. ರಾಜ್‌ಕುಮಾರ್ ವಾರ್ಡ್;ಸಾಮಾನ್ಯ (ಮಹಿಳೆ)
147;ಅಗ್ರಹಾರ ದಾಸರಹಳ್ಳಿ;ಸಾಮಾನ್ಯ
148;ಗೋವಿಂದರಾಜನಗರ;ಹಿಂದುಳಿದ ವರ್ಗ ಎ
149;ಕಾವೇರಿಪುರ;ಸಾಮಾನ್ಯ (ಮಹಿಳೆ)
150;ಮಾರೇನಹಳ್ಳಿ;ಹಿಂದುಳಿದ ವರ್ಗ ಎ
151;ಮಾರುತಿ ಮಂದಿರ ವಾರ್ಡ್;ಸಾಮಾನ್ಯ
152;ಮೂಡಲಪಾಳ್ಯ;ಹಿಂದುಳಿದ ವರ್ಗ ಎ (ಮಹಿಳೆ)
153;ನಾಗರಭಾವಿ;ಹಿಂದುಳಿದ ವರ್ಗ ಬಿ (ಮಹಿಳೆ)
154;ಚಂದ್ರಾಲೇಔಟ್;ಸಾಮಾನ್ಯ
155;ನಾಯಂಡಹಳ್ಳಿ;ಸಾಮಾನ್ಯ
ವಿಜಯನಗರ ವಿಧಾನಸಭೆ ಕ್ಷೇತ್ರ
156;ಕೆಂಪಾಪುರ ಅಗ್ರಹಾರ;ಎಸ್.ಟಿ
157;ವಿಜಯನಗರ;ಸಾಮಾನ್ಯ
158;ಹೊಸಹಳ್ಳಿ;ಹಿಂದುಳಿದ ವರ್ಗ ಎ (ಮಹಿಳೆ)
159;ಹಂಪಿನಗರ;ಸಾಮಾನ್ಯ
160;ಬಾಪೂಜಿ ನಗರ;ಸಾಮಾನ್ಯ (ಮಹಿಳೆ)
161;ಅತ್ತಿಗುಪ್ಪೆ;ಸಾಮಾನ್ಯ
162;ಗಾಳಿ ಆಂಜನೇಯ ದೇವಸ್ಥಾನ ವಾರ್ಡ್;ಸಾಮಾನ್ಯ (ಮಹಿಳೆ)
163;ವೀರಭದ್ರನಗರ;ಸಾಮಾನ್ಯ (ಮಹಿಳೆ)
164;ಅವಲಹಳ್ಳಿ;ಹಿಂದುಳಿದ ವರ್ಗ ಎ (ಮಹಿಳೆ)
ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರ
165;ಚಾಮರಾಜಪೇಟೆ;ಸಾಮಾನ್ಯ (ಮಹಿಳೆ)
166;ಚಲವಾದಿಪಾಳ್ಯ;ಎಸ್.ಸಿ. (ಮಹಿಳೆ)
167;ಜಗಜೀವನರಾಮ್ ನಗರ;ಎಸ್.ಸಿ. (ಮಹಿಳೆ)
168;ಪಾದರಾಯನಪುರ;ಸಾಮಾನ್ಯ (ಮಹಿಳೆ)
169;ದೇವರಾಜ್ ಅರಸ್ ನಗರ;ಸಾಮಾನ್ಯ (ಮಹಿಳೆ)
170;ಆಜಾದ್ ನಗರ;ಎಸ್.ಟಿ.
ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರ
171;ಸುಧಾಮ ನಗರ;ಎಸ್.ಸಿ.
172;ಧರ್ಮರಾಯ ಸ್ವಾಮಿ ದೇವಸ್ಥಾನ ವಾರ್ಡ್;ಸಾಮಾನ್ಯ
173;ಸುಂಕೇನಹಳ್ಳಿ;ಹಿಂದುಳಿದ ವರ್ಗ ಎ
174;ವಿಶ್ವೇಶ್ವರ ಪುರ;ಸಾಮಾನ್ಯ
175;ಅಶೋಕ ಸ್ತಂಭ;ಸಾಮಾನ್ಯ
176;ಸೋಮೇಶ್ವರ ನಗರ;ಹಿಂದುಳಿದ ವರ್ಗ ಎ
177;ಹೊಂಬೇಗೌಡ ನಗರ;ಸಾಮಾನ್ಯ
ಶಾಂತಿನಗರ ವಿಧಾನಸಭೆ ಕ್ಷೇತ್ರ
178;ದೊಮ್ಮಲೂರು;ಎಸ್.ಸಿ.
179;ಜೋಗುಪಾಳ್ಯ;ಸಾಮಾನ್ಯ (ಮಹಿಳೆ)
180;ಅಗರ;ಎಸ್.ಸಿ. (ಮಹಿಳೆ)
181;ಶಾಂತಲಾ ನಗರ;ಸಾಮಾನ್ಯ (ಮಹಿಳೆ)
182;ಶಾಂತಿನಗರ;ಹಿಂದುಳಿದ ವರ್ಗ ಎ
183;ನೀಲಸಂದ್ರ;ಸಾಮಾನ್ಯ (ಮಹಿಳೆ)
184;ವನ್ನಾರ ಪೇಟೆ;ಎಸ್.ಸಿ. (ಮಹಿಳೆ)
ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರ
185;ಈಜೀಪುರ;ಸಾಮಾನ್ಯ (ಮಹಿಳೆ)
186;ಕೋರಮಂಗಲ;ಸಾಮಾನ್ಯ (ಮಹಿಳೆ)
187;ಆಡುಗೋಡಿ;ಸಾಮಾನ್ಯ (ಮಹಿಳೆ)
188;ಲಕ್ಕಸಂದ್ರ;ಎಸ್.ಸಿ. (ಮಹಿಳೆ)
189;ಸುದ್ದಗುಂಟೆ ಪಾಳ್ಯ;ಸಾಮಾನ್ಯ
190;ಮಡಿವಾಳ;ಸಾಮಾನ್ಯ (ಮಹಿಳೆ)
191;ಜಕ್ಕಸಂದ್ರ;ಸಾಮಾನ್ಯ (ಮಹಿಳೆ)
192;ಬಿಟಿಎಂ ಲೇಔಟ್;ಹಿಂದುಳಿದ ವರ್ಗ ಎ (ಮಹಿಳೆ)
193;ಎನ್.ಎಸ್. ಪಾಳ್ಯ;ಹಿಂದುಳಿದ ವರ್ಗ ಎ (ಮಹಿಳೆ)
ಜಯನಗರ ವಿಧಾನಸಭೆ ಕ್ಷೇತ್ರ
194;ಗುರಪ್ಪನಪಾಳ್ಯ;ಸಾಮಾನ್ಯ (ಮಹಿಳೆ)
195;ತಿಲಕ್‌ನಗರ;ಹಿಂದುಳಿದ ವರ್ಗ ಬಿ (ಮಹಿಳೆ)
196;ಬೈರಸಂದ್ರ;ಸಾಮಾನ್ಯ (ಮಹಿಳೆ)
197;ಶಾಕಾಂಬರಿ ನಗರ;ಸಾಮಾನ್ಯ (ಮಹಿಳೆ)
198;ಜೆ.ಪಿ. ನಗರ;ಸಾಮಾನ್ಯ
199;ಸಾರಕ್ಕಿ;ಸಾಮಾನ್ಯ (ಮಹಿಳೆ)
ಪದ್ಮನಾಭನಗರ ವಿಧಾನಸಭೆ ಕ್ಷೇತ್ರ
200;ಯಡಿಯೂರು;ಸಾಮಾನ್ಯ (ಮಹಿಳೆ)
201;ಉಮಾಮಹೇಶ್ವರ ವಾರ್ಡ್;ಹಿಂದುಳಿದ ವರ್ಗ ಎ (ಮಹಿಳೆ)
202;ಗಣೇಶ್ ಮಂದಿರ ವಾರ್ಡ್;ಹಿಂದುಳಿದ ವರ್ಗ ಬಿ (ಮಹಿಳೆ)
203;ಬನಶಂಕರಿ ದೇವಸ್ಥಾನ ವಾರ್ಡ್;-ಸಾಮಾನ್ಯ
204;ಕುಮಾರಸ್ವಾಮಿ ಲೇಔಟ್;ಹಿಂದುಳಿದ ವರ್ಗ ಎ (ಮಹಿಳೆ)
205;ವಿಕ್ರಮ್ ನಗರ;ಸಾಮಾನ್ಯ
206;ಪದ್ಮನಾಭನಗರ;ಸಾಮಾನ್ಯ
207;ಕಾಮಾಕ್ಯನಗರ;ಸಾಮಾನ್ಯ
208;ದೀನ್ ದಯಾಳು ವಾರ್ಡ್;ಹಿಂದುಳಿದ ವರ್ಗ ಎ
209;ಹೊಸಕೆರೆಹಳ್ಳಿ;ಸಾಮಾನ್ಯ
ಬಸವನಗುಡಿ ವಿಧಾನಸಭೆ ಕ್ಷೇತ್ರ
210;ಬಸವನಗುಡಿ;ಸಾಮಾನ್ಯ (ಮಹಿಳೆ)
211;ಹನುಮಂತ ನಗರ;ಸಾಮಾನ್ಯ(ಮಹಿಳೆ)
212;ಶ್ರೀನಿವಾಸ ನಗರ;ಹಿಂದುಳಿದ ವರ್ಗ ಎ
213;ಶ್ರೀನಗರ;ಹಿಂದುಳಿದ ವರ್ಗ ಬಿ
214;ಗಿರಿನಗರ;ಸಾಮಾನ್ಯ
215;ಕತ್ರಿಗುಪ್ಪೆ;ಸಾಮಾನ್ಯ
216;ವಿದ್ಯಾಪೀಠ ವಾರ್ಡ್;ಹಿಂದುಳಿದ ವರ್ಗ ಎ
ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ
217;ಉತ್ತರಹಳ್ಳಿ;ಹಿಂದುಳಿದ ವರ್ಗ ಎ
218;ಸುಬ್ರಮಣ್ಯಪುರ;ಸಾಮಾನ್ಯ
219;ವಸಂಪುರ;ಹಿಂದುಳಿದ ವರ್ಗ ಎ (ಮಹಿಳೆ)
220;ಯಲಚೇನಹಳ್ಳಿ;ಸಾಮಾನ್ಯ
221;ಕೋಣನಕುಂಟೆ;ಸಾಮಾನ್ಯ
222;ಆರ್.ಬಿ.ಐ. ಲೇಔಟ್;ಸಾಮಾನ್ಯ (ಮಹಿಳೆ)
223;ಚುಂಚಘಟ್ಟ;ಸಾಮಾನ್ಯ
224;ಅಂಜನಾಪುರ;ಹಿಂದುಳಿದ ವರ್ಗ ಎ
225;ಗೊಟ್ಟಿಗೆರೆ;ಸಾಮಾನ್ಯ
226;ಕಾಳೇನ ಅಗ್ರಹಾರ;ಸಾಮಾನ್ಯ (ಮಹಿಳೆ)
227;ಬೇಗೂರು;ಹಿಂದುಳಿದ ವರ್ಗ ಎ
228;ನಾಗನಾಥಪುರ;ಸಾಮಾನ್ಯ (ಮಹಿಳೆ)
ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರ
229;ಇಬ್ಲೂರು;ಸಾಮಾನ್ಯ (ಮಹಿಳೆ)
230;ಅಗರ;ಹಿಂದುಳಿದ ವರ್ಗ ಬಿ
231;ಮಂಗಮ್ಮನಪಾಳ್ಯ;ಹಿಂದುಳಿದ ವರ್ಗ ಎ
232;ಎಚ್‌ಎಸ್‌ಆರ್– ಸಿಂಗಸಂದ್ರ;ಸಾಮಾನ್ಯ (ಮಹಿಳೆ)
233;ರೂಪೇನ ಅಗ್ರಹಾರ;ಸಾಮಾನ್ಯ (ಮಹಿಳೆ)
234;ಹೊಂಗಸಂದ್ರ;ಹಿಂದುಳಿದ ವರ್ಗ ಬಿ
235;ಬೊಮ್ಮನಹಳ್ಳಿ;ಸಾಮಾನ್ಯ (ಮಹಿಳೆ)
236;ದೇವರಚಿಕ್ಕನಹಳ್ಳಿ;ಸಾಮಾನ್ಯ (ಮಹಿಳೆ)
237;ಬಿಳೇಕಹಳ್ಳಿ;ಸಾಮಾನ್ಯ (ಮಹಿಳೆ)
238;ಅರಕೆರೆ;ಸಾಮಾನ್ಯ (ಮಹಿಳೆ)
239;ಹುಳಿಮಾವು;ಸಾಮಾನ್ಯ
240;ವಿನಾಯಕನಗರ;ಹಿಂದುಳಿದ ವರ್ಗ ಎ (ಮಹಿಳೆ)
241;ಪುಟ್ಟೇನಹಳ್ಳಿ– ಸಾರಕ್ಕಿ ಕೆರೆ;ಹಿಂದುಳಿದ ವರ್ಗ ಎ
242;ಜರಗನಹಳ್ಳಿ;ಸಾಮಾನ್ಯ
ಆನೇಕಲ್ ವಿಧಾನಸಭೆ ಕ್ಷೇತ್ರ
243;ಕೂಡ್ಲು;ಸಾಮಾನ್ಯ ಮಹಿಳೆ

ಸ್ವಾತಂತ್ರ್ಯೋತ್ಸವ: ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಪುಷ್ಪ ವೈಭವ ನಾಳೆಯಿಂದ ಆರಂಭ

ಪುಷ್ಪಗಳಲ್ಲಿ ಅರಳುತ್ತಿರುವ ಡಾ.ರಾಜ್, ಪುನೀತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯುವಿಹಾರಿಗಳ ನೆಚ್ಚಿನ ತಾಣ ಲಾಲ್‌ಬಾಗ್ ಈ ಬಾರಿ ಫಲಪುಷ್ಪ ಪ್ರದರ್ಶನಕ್ಕೆ ಮದುವಣಗಿತ್ತಿಯಂತೆ ಸಿಂಗಾರಗೊಳ್ಳುತ್ತಿದೆ. ಒಂದೆಡೆ ಬಣ್ಣ ಬಣ್ಣದ ತರಹೇವಾರಿ ಹೂವುಗಳು 'ಸಿಲಿಕಾನ್ ಸಿಟಿ'ಯ ಜನರನ್ನು ಸೆಳೆಯುತ್ತಿದ್ದರೆ, ಮತ್ತೊಂದೆಡೆ ಸ್ವಾತಂತ್ರ್ಯೋತ್ಸವದ ಅಂಗವಾಗಿ ಡಾ.ರಾಜ್, ಪುನೀತ್ ಪರಿಕಲ್ಪನೆ ಆಧಾರಿತ ಫಲಪುಷ್ಪ ಪ್ರದರ್ಶನ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತೋಟಗಾರಿಕೆ ಇಲಾಖೆ ಸಚಿವ ಕೆ.ಮುನಿರತ್ನ, 'ಕನ್ನಡ ಚಿತ್ರರಂಗಕ್ಕೆ ಅಮೂಲ್ಯ ಕೊಡುಗೆ ನೀಡಿರುವ ನಟರಾದ ದಿವಂಗತ ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರಿಗೆ ಈ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ರಾಜ್ ಅವರ ಗಾಜನೂರಿನ ಮನೆ ಮತ್ತು ಅನಾಥ ಮಕ್ಕಳಿಗೆ ಬೆಳಕಾದ 'ಶಕ್ತಿಧಾಮ' ಮತ್ತು ಪುಷ್ಪ ಮಾದರಿ ಪ್ರದರ್ಶನಕ್ಕೆ ಅಣಿಯಾಗುತ್ತಿದೆ. ಜೊತೆಗೆ ಡಾ.ರಾಜ್ ಮತ್ತು ಪುನೀತ್ ಅವರ ಪ್ರಸಿದ್ಧ ಚಿತ್ರಗಳಲ್ಲಿ ನಟಿಸಿದ ಪ್ರತಿಮೆಗಳನ್ನು ಸ್ಥಾಪಿಸಿ ಪುಷ್ಪಾಲಂಕಾರದಲ್ಲಿ ಕಂಗೊಳಿಸಲಿವೆ.

'ತೋಟಗಾರಿಕೆ ಇಲಾಖೆ, ಮೈಸೂರು ಉದ್ಯಾನ ಕಲಾ ಸಂಘವು ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ 212ನೇ ಫಲಪುಷ್ಪ ಪ್ರದರ್ಶನ ಇದಾಗಿದೆ. ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್‌ರ ವಿಶೇಷ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ. ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುವ ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಇದೇ 5ರಿಂದ 15ರ ತನಕ ಫಲಪುಷ್ಪ ಪ್ರದರ್ಶನಕ್ಕೆ ವೇದಿಕೆ ಸಜ್ಜಾಗುತ್ತಿದೆ' ಎಂದು ತಿಳಿಸಿದರು.

'ಆಗಸ್ಟ್ 5ರಂದು ಬೆಳಿಗ್ಗೆ 8ರಂದು ಕಂಠೀರವ ಸ್ಟುಡಿಯೋದಲ್ಲಿ ಡಾ.ರಾಜ್, ಪುನೀತ್ ರಾಜ್‌ಕುಮಾರ್ ಸ್ಮಾರಕ ಸ್ಥಳದಿಂದ ಲಾಲ್‌ಬಾಗ್ ಗಾಜಿನ ಮನೆಯವರಿಗೆ ಜ್ಯೋತಿಯಾತ್ರೆ ಮತ್ತು ಸೈಕಲ್ ಜಾಥಾ ನಡೆಯಲಿದೆ. ಫಲಪುಷ್ಪ ಪ್ರದರ್ಶನಕ್ಕೆ ಬೆಳಿಗ್ಗೆ 11ಕ್ಕೆ ಬಸವರಾಜ ಬೊಮ್ಮಾಯಿ ಚಾಲನೆ ನೀಡಿಲಿದ್ದಾರೆ' ಎಂದರು. ಡಾ. ರಾಜ್, ಪಾರ್ವತಮ್ಮ, ಪುನೀತ್ ಅವರ 3.5 ಅಡಿ ಎತ್ತರದ ಪುತ್ಥಳಿಗಳಿಗೆ ಒಂದೇ ಪೀಠದಲ್ಲಿ ಸ್ಥಾಪಿಸಲಾಗುವುದು. ಗಾಜಿನ ಮನೆಯ 10 ಮೂಲೆಗಳಲ್ಲಿ ಕುಂಡದಲ್ಲಿ ಬೆಳೆದ ಹೂ ಕುಂಡಗಳ ಜೋಡಣೆಯಿಂದ ಪುಷ್ಪ ಪಿರಮಿಡ್‌ಗಳ ರಚಿಸ ಲಾಗುತ್ತಿದೆ.



ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಗಾಜಿನ ಮನೆಯಲ್ಲಿ ಆಯೋಜಿಸುತ್ತಿರುವ ಫಲಪುಷ್ಪ ಪ್ರದರ್ಶನದಲ್ಲಿ ಪುನೀತ್‌ರಾಜ್‌ಕುಮಾರ್ ಅವರ ಪ್ರತಿಮೆ ಸ್ಥಾಪಿಸಿರುವುದು

ಪ್ರವೇಶ ಶುಲ್ಕ ಹೀಗಿದೆ...

ವಯಸ್ಕರಿಗೆ ₹ **70**, ರಜೆ ದಿನಗಳಲ್ಲಿ **80**
ಮಕ್ಕಳಿಗೆ ₹ **30**
ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ

ಪ್ರದರ್ಶನದ ಸಮಯ
ಬೆಳಿಗ್ಗೆ **7**ರಿಂದ ಸಂಜೆ **7**ರ ವರೆಗೆ

ವಾಹನ ನಿಲುಗಡೆ ಎಲ್ಲಿ?

- ಹಾಪ್‌ಕಾಮ್ಸ್ ಆವರಣ ಮತ್ತು ವಿಲ್ಸನ್ ಗಾರ್ಡನ್‌ನಲ್ಲಿರುವ ಹೊಂಬೇಗೌಡ ಕ್ರೀಡಾಂಗಣ
- ಶಾಂತಿನಗರ ಬಸ್‌ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ
- ಜೆ.ಸಿ.ರಸ್ತೆಯ ಮಯೂರ ರೆಸ್ಟೋರೆಂಟ್ ಬಳಿಯ ಪಾಲಿಕೆ ಕಟ್ಟಡ
- ಅಲ್ ಅಮೀನ್ ಕಾಲೇಜು ಮೈದಾನ

ಫಲಪುಷ್ಪ ಪ್ರದರ್ಶನದ ಆಕರ್ಷಣೆಗಳು

- 30 ಅಡಿ ಉದ್ದ 15 ಅಡಿ ಅಗಲ ಹಾಗೂ 13 ಅಡಿ ಎತ್ತರದ ಡಾ.ರಾಜ್‌ಕುಮಾರ್ ಅವರ ಗಾಜನೂರಿನ ಮನೆಯ ಹೂವಿನ ಪ್ರತಿಕೃತಿ
- 30 ಅಡಿ ಎತ್ತರದ ಪುನೀತ್ ರಾಜ್‌ಕುಮಾರ್ ಅವರ ಚಿನ್ನ ಲೇಪಿತ ಪ್ರತಿಮೆ
- 10 ಅಡಿ ಎತ್ತರದ ಡಾ.ರಾಜ್‌ಕುಮಾರ್ ಅವರ ಮಯೂರ ಪಾತ್ರದ ಪ್ರತಿಮೆ
- 12 ಅಡಿ ಎತ್ತರದ ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆ
- 16 ಅಡಿ ಅಗಲದ 14 ಅಡಿ ಎತ್ತರದ ರಾಜ್‌ಕುಮಾರ್ ಅವರ ಸಿಂಹಾಸನಾರೂಢ ರಣಧೀರ ಕಂಠೀರವ ಪ್ರತಿಮೆ
- 10 ಅಡಿ ಎತ್ತರದ ಬಹದ್ದೂರ್ ಗಂಡು (ರಾಜ್‌ಕುಮಾರ್), 4 ಅಡಿ ಎತ್ತರದ ರಾಘವೇಂದ್ರಸ್ವಾಮಿ ಪ್ರತಿಮೆ
- 15 ಅಡಿ ಉದ್ದ, 12 ಅಡಿ ಅಗಲ ಹಾಗೂ 6 ಅಡಿ ಎತ್ತರದ ವರ್ಟಿಕಲ್ ಗಾರ್ಡನ್‌ನಲ್ಲಿ ಅರಳುವ ಮೆಗಾ ಕ್ಯಾಮೆರಾ
- 20 ಅಡಿ ಉದ್ದ 12 ಅಡಿ ಅಗಲ ಮತ್ತು 13 ಅಡಿ ಎತ್ತರದ ಶಕ್ತಿಧಾಮದ ಹೂವಿನ ಪ್ರತಿಕೃತಿ
- ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ವಿಶೇಷ ಆರ್ಕಷಣೆಯುಳ್ಳ ಪುಷ್ಪಾಲಂಕಾರದ ಪ್ರತಿಮೆಗಳ ಸ್ಥಾಪನೆ
- ಮರಳಿನಲ್ಲಿ ಡಾ.ರಾಜ್ ಮತ್ತು ಪುನೀತ್‌ರಾಜ್‌ಕುಮಾರ್ ಅವರ ಪ್ರತಿಕೃತಿ ರಚನೆ

ಅಂಕಿ-ಅಂಶಗಳು

₹2.30 ಕೋಟಿ ಫಲಪುಷ್ಪ ಪ್ರದರ್ಶನದ ಒಟ್ಟು ವೆಚ್ಚ	450 ಕಾವಲಿಗೆ ನೇಮಿಸಲಾಗುವ ಪೊಲೀಸ್ ಸಿಬ್ಬಂದಿ ಸಂಖ್ಯೆ	12-15 ಲಕ್ಷ ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವವರ ಅಂದಾಜು ಸಂಖ್ಯೆ

125 ಉದ್ಯಾನದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು	12.52 ಲಕ್ಷ ಅಂದಾಜು ಬಳಕೆಯಾಗುವ ಹೂ ಕುಂಡಗಳ ಸಂಖ್ಯೆ	1500 ವಿಶೇಷ ಆಲಂಕಾರಿಕ ಗಿಡಗಳು	6,22,000 ಬಿಡಿ ಹೂಗಳ ಬಳಕೆ

ಬಿಜೆಪಿ ಶಾಸಕರ ಕ್ಷೇತ್ರಕ್ಕೆ ತಲಾ 10 ಹೆಚ್ಚುವರಿ ಶಾಲಾ ಕೊಠಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕರು ಪ್ರತಿನಿಧಿಸುವ 88 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 10ರಂತೆ ಒಟ್ಟು 880 ಶಾಲಾ ಕೊಠಡಿಗಳನ್ನು ಹೆಚ್ಚುವರಿಯಾಗಿ ನಿರ್ಮಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮುಂದಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ಟಿಪ್ಪಣಿಯಂತೆ ಇಲಾಖೆ ಈ ಕ್ರಮ ತೆಗೆದುಕೊಂಡಿದೆ.

ಈ ಕುರಿತಂತೆ ಆದೇಶ ಹೊರಡಿಸಲಾಗಿದ್ದು, ಆಯಾ ಕ್ಷೇತ್ರಗಳ ಶಾಸಕರಿಂದ ಮಾಹಿತಿ ಪಡೆದು ಕೊಠಡಿ ನಿರ್ಮಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೂಚಿಸಿದ್ದಾರೆ.

ರಾಜ್ಯದ ಸರ್ಕಾರಿ ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಒಟ್ಟು 6,601 ಹೊಸ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಅದರ ಅನ್ವಯ, ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ತಲಾ 20 ಕೊಠಡಿಗಳಂತೆ 4,480 ಕೊಠಡಿಗಳನ್ನು ಹಂಚಿಕೆ ಮಾಡಲಾಗಿದೆ. ಇದೀಗ ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಸೀಮಿತಗೊಳಿಸಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಇಲಾಖೆ ಮುಂದಾಗಿದೆ.

ಬಿಬಿಎಂಪಿಯಿಂದ ಧ್ವಜ ಮಾರಾಟ ಮಳಿಗೆ

ಬೆಂಗಳೂರು: ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜ ಅಭಿಯಾನವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಧ್ವಜ ಮಾರಾಟ ಮಳಿಗೆಗಳನ್ನು ತೆರೆಯಲು ಬಿಬಿಎಂಪಿ ಅಧಿಕಾರಿಗಳಿಗೆ ವಿಶೇಷ ಆಯುಕ್ತ(ಆಡಳಿತ) ಎಸ್.ರಂಗಪ್ಪ ಸೂಚನೆ ನೀಡಿದರು.

ವರ್ಚುವಲ್ ಸಭೆ ನಡೆಸಿದ ಅವರು, ಪಾಲಿಕೆಯ ವಲಯ ಕಚೇರಿ, ವಾರ್ಡ್ ಕಚೇರಿ, ಸರ್ಕಾರಿ ಕಚೇರಿ, ಪ್ರಮುಖ ಮಾಲ್‌ಗಳು, ಜನನಿಬಿಡ ಪ್ರದೇಶಗಳಲ್ಲಿ ಧ್ವಜ ಮಾರಾಟ ಮಳಿಗೆ ತೆರೆಯುವಂತೆ ವಲಯ ಜಂಟಿ ಆಯುಕ್ತರಿಗೆ ತಿಳಿಸಿದರು.

ಒಟ್ಟು 10 ಲಕ್ಷ ಧ್ವಜಗಳನ್ನು ವಿತರಿಸುವ ಗುರಿ ಇದ್ದು, 6 ಲಕ್ಷ ಧ್ವಜಗಳನ್ನು ವಿತರಿಸಲಾಗಿದೆ. 4 ಲಕ್ಷ ಧ್ವಜಗಳ ವಿತರಣೆಯಾಗಬೇಕಿದೆ. ವಿಧಾನಸೌಧ, ಬಹುಮಹಡಿ ಕಟ್ಟಡ, ಬಿಬಿಎಂಪಿ ಕೇಂದ್ರ ಕಚೇರಿ, ನಾಗರಿಕ ಸೇವಾ ಕೇಂದ್ರ, ರವೀಂದ್ರ ಕಲಾಕ್ಷೇತ್ರ, ಮಂತ್ರಿ ಮಾಲ್ ಸೇರಿ ಪ್ರಮುಖ ಸ್ಥಳಗಳಲ್ಲಿ ಮಾರಾಟಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಭಕ್ತಿ ಬಿಂಬಿಸಲು ಕರಪತ್ರ, ಬ್ಯಾಡ್ಜ್ ವಿತರಿಸಬೇಕು. ಘನತ್ಯಾಜ್ಯ ವಿಭಾಗದ ವಾಹನಗಳನ್ನು ಅಭಿಯಾನದ ಪ್ರಚಾರಕ್ಕೆ ಉಪಯೋಗಿಸಿಕೊಳ್ಳಬೇಕು. ಪ್ರತಿ ಮನೆಗೂ ಭೇಟಿ ನೀಡಿ ಧ್ವಜಗಳನ್ನು ಮಾರಾಟ ಮಾಡಬೇಕು ಎಂದರು.

ಮೈಮೇಲೆ ಗಾಜು ಬಿದ್ದು ಚಾಲಕ ಸಾವು

ಬೆಂಗಳೂರು: ಪಿಕ್‌ಅಪ್ ವಾಹನದಿಂದ ಗಾಜು ಇಳಿಸುವಾಗ ಗಾಜುಗಳು ಮೈಮೇಲೆ ಬಿದ್ದು ಚಾಲಕ ಜಿ.ಶಂಕರ್ (38) ಎಂಬುವರು ಬುಧವಾರ ಮೃತಪಟ್ಟಿದ್ದಾರೆ.

ಕಿಟಕಿಯ ಗಾಜುಗಳನ್ನು ಅಮೃತಹಳ್ಳಿಯಿಂದ ವಸಂತಪುರಕ್ಕೆ ಪಿಕ್‌ಅಪ್ ವಾಹನದಲ್ಲಿ ಸಾಗಿಸುತ್ತಿದ್ದರು.

ಇಂದಿರಾನಗರ: ಬಾರ್‌ನಲ್ಲಿ ಗಲಾಟೆ– ವ್ಯಕ್ತಿ ಕೊಲೆ

ಬೆಂಗಳೂರು: ಬಾರ್‌ನಲ್ಲಿ ಬಿಲ್ ಪಾವತಿಸುವ ವಿಚಾರಕ್ಕೆ ಎರಡು ಗುಂಪುಗಳ ನಡುವೆ ನಡೆದ ಗಲಾಟೆಯಲ್ಲಿ ಇಂದಿರಾನಗರ ನಿವಾಸಿ ಪ್ರಕಾಶ್ (35) ಎಂಬ ವ್ಯಕ್ತಿಯನ್ನು ಕೊಲೆ ಮಾಡಲಾಗಿದ್ದು, ಇಂದಿರಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಂಜುನಾಥ್, ಸ್ನೇಹಿತರು ಪ್ರಕಾಶ್ ಮೇಲೆ ಬಿಯರ್ ಬಾಟಲಿಯಿಂದ ಹಲ್ಲೆ ನಡೆಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಪ್ರಕಾಶ್‌ರನ್ನು ಬುಧವಾರ ಮೃತಪಟ್ಟರು.

'ಪತ್ರಕರ್ತನಿಗೆ ಭಾಷೆ, ಭಾಷಾಂತರ ಮುಖ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತ್ರಕರ್ತರಿಗೆ ಭಾಷೆ, ಬರವಣಿಗೆ ಮತ್ತು ಭಾಷಾಂತರ ಬಹಳ ಮುಖ್ಯ ಕೌಶಲಗಳು' ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕ ಡಿ.ಪಿ. ಮುರುಳೀಧರ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ಮಾಧ್ಯಮ ವಿಭಾಗ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಸರಣಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಡಿಜಿಟಲ್ ಕ್ಷೇತ್ರ ವಿಸ್ತಾರಗೊಂಡಿದ್ದರಿಂದ ಮಾಧ್ಯಮ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳು ಸೃಷ್ಟಿಯಾಗಿವೆ' ಎಂದು ಹೇಳಿದರು.

'ಸಾಮಾಜಿಕ ಮಾಧ್ಯಮವು ಡಿಜಿಟಲ್ ಮಾಧ್ಯಮದ ಒಂದು ಅಂಗವೇ ಹೊರತು ಸಾಮಾಜಿಕ ಮಾಧ್ಯಮವೇ ಮಾಧ್ಯಮವಲ್ಲ. ಆದ್ದರಿಂದ, ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ ಮಾಧ್ಯಮ ಕ್ಷೇತ್ರಕ್ಕೆ ಬೇಕಾದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾಗಿರಬೇಕು. ಹೀಗಾಗಿ, ನಿರಂತರ ಅಧ್ಯಯನವೂ ಅತಿ ಮುಖ್ಯ' ಎಂದು ಸಲಹೆ ನೀಡಿದರು.

ವಿಶ್ವವಿದ್ಯಾಲಯದಲ್ಲಿ ಸುಮಾರು 36 ವರ್ಷಗಳವರೆಗೆ ಮಾಧ್ಯಮ ಸಂಪರ್ಕಗಾರರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದ ಸಿದ್ಧಲಿಂಗಯ್ಯ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.



ಕಾರ್ಯಕ್ರಮದಲ್ಲಿ ಸಿದ್ಧಲಿಂಗಯ್ಯ ಅವರನ್ನು ಸನ್ಮಾನಿಸಲಾಯಿತು. ಸಹಾಯಕ ಪ್ರಾಧ್ಯಾಪಕರಾದ ಡಾ. ಆರ್ ರಾಜೇಶ್ವರಿ, ವಿದ್ಯುನ್ಮಾನ ಮಾಧ್ಯಮ ವಿಭಾಗದ ಸಂಯೋಜಕ ಡಾ.ಟಿ.ಶ್ರೀಪತಿ, ಕುಲಪತಿ ಪ್ರೊ. ಎಸ್‌ಎಂ. ಜಯಕರ್, ವಿಶ್ರಾಂತ ಕುಲಪತಿ ಪ್ರೊ.ಕೆ.ಆರ್‌ವೇಣುಗೋಪಾಲ್, ವಾರ್ತಾ ಇಲಾಖೆ ಜಂಟಿ ನಿರ್ದೇಶಕ ಡಿ.ಪಿ. ಮುರುಳೀಧರ್, ಟಿವಿ ನಿರೂಪಕ ಹರಿಪ್ರಸಾದ್, ಕುಲಸಚಿವ ಪ್ರೊ.ಎಂ.ಕೊಟ್ರೇಶ್, ಸಹಾಯಕ ಪ್ರಾಧ್ಯಾಪಕಿ ಡಾ.ವಾಹಿನಿ ಅರವಿಂದ್ ಇದ್ದರು.

ಹಿಂಡಿನಿಂದ ಬೇರ್ಪಟ್ಟ ಮರಿಯಾನೆ

ಪ್ರಜಾವಾಣಿ ವಾರ್ತೆ

ಆನೇಕಲ್: ಹಿಂಡಿನಿಂದ ಬೇರ್ಪಟ್ಟ ಗಂಡಾನೆ ಮರಿಯೊಂದನ್ನು ಬನ್ನೇರುಘಟ್ಟ ಉದ್ಯಾನಕ್ಕೆ ತರಲಾಗಿದ್ದು, ಸಿಬ್ಬಂದಿಯು ಅದನ್ನು ಜತನದಿಂದ ಆರೈಕೆ ಮಾಡುತ್ತಿದ್ದಾರೆ.

ಕಾವೇರಿ ವನ್ಯಜೀವಿ ಅಭಯಾರಣ್ಯದ ಹಲಗೂರು ಅರಣ್ಯ ಪ್ರದೇಶದ ವ್ಯಾಪ್ತಿಯ ಮುತ್ತತ್ತಿ ಕಡೆಗೆ ಹೋಗುವ ದಾರಿಯಲ್ಲಿ ಗಂಡಾನೆ ಮರಿಯೊಂದು ಒಂಟಿಯಾಗಿ ಪತ್ತೆಯಾಗಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ಇದನ್ನು ರಕ್ಷಿಸಿ ಎರಡು ದಿನಗಳ ಕಾಲ ಅಭಯಾರಣ್ಯದ ಆನೆಗಳ ಹಿಂಡಿನೊಂದಿಗೆ ಸೇರಿಸಲು ಪ್ರಯತ್ನ ನಡೆಸಿದ್ದರು.

ಆದರೆ, ಈ ಹಿಂಡುಗಳು ಮರಿಯನ್ನು ತಿರಸ್ಕರಿಸಿದ್ದರಿಂದ ಯಶಸ್ವಿಯಾಗಲಿಲ್ಲ. ಹಾಗಾಗಿ, ಮೂರ್ನಾಲ್ಕು ತಿಂಗಳ ವಯೋಮಾನದ ಮರಿಯನ್ನು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ತರಲಾಗಿದ್ದು, ಇಲ್ಲಿಯೇ ಆರೈಕೆ ಮಾಡಲಾಗುತ್ತಿದೆ.

ಮರಿಯಾನೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು ವೈರಲ್ ಸೋಂಕಿನ ಬಗ್ಗೆ ತಪಾಸಣೆ ಮಾಡಲಾಗುತ್ತದೆ ಎಂದು ಉದ್ಯಾನದ ಕಾರ್ಯ ನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ರಕ್ಷಿಸಿ ತರಲಾಗಿರುವ ಮರಿಯಾನೆ

ತಿಗಣೆ ಔಷಧಿಯಿಂದ ಬಾಲಕಿ ಸಾವು: ಮಾಲೀಕನ ವಿಚಾರಣೆ

ಬೆಂಗಳೂರು: ಬಾಡಿಗೆ ಮನೆಗೆ ಮಾಲೀಕ ತಿಗಣೆ ಔಷಧ ಸಿಂಪಡಿಸಿದ್ದರಿಂದ ಅಸ್ವಸ್ಥಗೊಂಡು ಮೃತಪಟ್ಟಿದ್ದ ಬಾಲಕಿ ಅಹಾನೆ ವಿ. ನಾಯರ್ (6) ಮೃತದೇಹದ ಮರಣೋತ್ತರ ಪರೀಕ್ಷೆಯು ಬುಧವಾರ ಬೌರಿಂಗ್ ಆಸ್ಪತ್ರೆಯಲ್ಲಿ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು.

ಎರಡು ದಿನಗಳಲ್ಲಿ ಮರಣೋತ್ತರ ಪರೀಕ್ಷೆಯ ವೈದ್ಯಕೀಯ ವರದಿ ಬರಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣದ ಸಂಬಂಧ ಅಪಾರ್ಟ್‌ಮೆಂಟ್ ಮಾಲೀಕ ಸುಂದರ್‌ನನ್ನು ಬುಧವಾರವೂ ಹೈಗ್ರೌಂಡ್ಸ್ ಪೊಲೀಸರು ವಿಚಾರಣೆ ನಡೆಸಿ ಮನೆಗೆ ಕಳುಹಿಸಿದ್ದಾರೆ. ವಿಚಾರಣೆಗೆ ಕರೆದಾಗ ಬರಬೇಕೆಂದು ಪೊಲೀಸರು ಸೂಚಿಸಿದ್ದಾರೆ.



ಅಹಾನೆ

'ಅಹಾನೆಯ ಸಾವಿಗೆ ಮನೆ ಮಾಲೀಕರು ಸುರಕ್ಷಾ ಕ್ರಮ ಕೈಗೊಳ್ಳದೆ ತಿಗಣೆ ಔಷಧ ಸಿಂಪಡಣೆ ಮಾಡಿದ್ದು ಕಾರಣವಾಗಿದೆ' ಎಂದು ಬಾಲಕಿಯ ದೊಡ್ಡಮ್ಮ ಲತಾ ಮಧುಸೂದನ್ ದೂರು ನೀಡಿದ್ದಾರೆ. ಬಾಲಕಿ ಪೋಷಕರಾದ ವಿನೋದ್, ನಿಶಾ ಅವರೂ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

'3 ದಿನಗಳ ಕಾಲ ಕೇರಳಕ್ಕೆ ಹೋಗಿ ನಂತರ ಆಗಸ್ಟ್ 1ರಂದು ಬೆಳಿಗ್ಗೆ 5.30ಕ್ಕೆ ಮನೆಗೆ ಬಂದಿದ್ದರು. 7.30ರ ತನಕ ವಿಶ್ರಾಂತಿ ಪಡೆದು ಕಾಫಿ ತಯಾರಿಸಿ ಮೂವರೂ ಕುಡಿದಿದ್ದರು. ಆಗ ವಾಂತಿ ಆರಂಭವಾಗಿ ಅಸ್ವಸ್ಥಗೊಂಡಿದ್ದರು. 11.30ರ ವೇಳೆಗೆ ಆಂಬುಲೆನ್ಸ್‌ನಲ್ಲಿ ಬಂದು ಆಸ್ಪತ್ರೆ ದಾಖಲಾಗಿದ್ದರು. ಮಾಲೀಕರು ತಿಗಣೆ ಔಷಧ ಸಿಂಪಡಣೆ ಮಾಡಿದ್ದರಿಂದ ದುರಂತ ಸಂಭವಿಸಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣ ಏನು?: ತಿಗಣೆ ಕಾಟದಿಂದ ಬೇಸತ್ತಿದ್ದ ಮಾಲೀಕರು ವಸಂತನಗರದ ಮಾರಮ್ಮ ದೇವಸ್ಥಾನದ ಬಳಿಯ ತಮ್ಮ ಬಾಡಿಗೆ ಮನೆಗೆ ತಿಗಣೆ ಔಷಧ ಸಿಂಪಡಿಸಿದ್ದರು. ಒಂದು ವಾರ ಮನೆ ಖಾಲಿ ಬಿಡುವಂತೆ ಬಾಡಿಗೆದಾರರಿಗೆ ಸೂಚಿಸಿದ್ದರು ಎನ್ನಲಾಗಿದೆ.

'ಮನೆ ಖಾಲಿ ಮಾಡಿ ನಾಲ್ಕೇ ದಿನಕ್ಕೆ ವಾಪಸಾಗಿದ್ದರು. ಮನೆಯನ್ನೂ ಸ್ವಚ್ಛಗೊಳಿಸದೇ ವಾಸ್ತವ್ಯ ಮಾಡಿದ್ದರು' ಎಂಬುದು ಮಾಲೀಕರ ವಾದವಾಗಿದೆ.

ಕಲ್ಪನಾಲೋಕಕ್ಕೆ ಗ್ರಾಹಕರ ಕೊಂಡೊಯ್ಯಲು ವ್ಯವಸ್ಥೆ

ಬೆಂಗಳೂರು: ಕೋರಮಂಗಲದ ನೆಕ್ಸಸ್ ಮಾಲ್‌ನಲ್ಲಿ 'ಮೊಸಳೆ ಬಾಯಿ', 'ಗಾಳಿಯಲ್ಲಿ ತೇಲಾಟ' ಮುಂತಾದ ಥೀಮ್‌ನೊಂದಿಗೆ ಆರಂಭಿಸಿರುವ 'ಅಬ್ರಕಾಡಾಬ್ರಾ' ಗ್ರಾಹಕರನ್ನು ಕಲ್ಪನಾಲೋಕಕ್ಕೆ ಕೊಂಡೊಯ್ಯಲಿದೆ ಎಂದು ಮಾಲ್‌ನ ಪ್ರಕಟಣೆ ತಿಳಿಸಿದೆ.

ಇಲ್ಲಿ ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ಗಾಗಿ ಉತ್ತಮ ಫೋಟೊ ಕ್ಲಿಕ್ಕಿಸಿಕೊಳ್ಳಬಹುದು. ರೀಲ್ ಮಾಡಿ ಅವುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಬಹುದು. ಈ ವ್ಯವಸ್ಥೆ ಪ್ರಸ್ತುತ ನೆಕ್ಸಸ್ ಕೋರಮಂಗಲ ಮಾಲ್‌ನಲ್ಲಿ ಇದೆ ಎಂದು ತಿಳಿಸಿದೆ.



ಗುಜರಾತ್‌ನ ಆನಂದನಲ್ಲಿ ಬುಧವಾರ ನಡೆದ ವಿಶ್ವ ಡೇರಿ ಶೃಂಗಸಭೆ ಕುರಿತ ಸಭೆಯಲ್ಲಿ ಅಮೂಲ್ ವ್ಯವಸ್ಥಾಪಕ ನಿರ್ದೇಶಕ ಆರ್‌.ಎಸ್‌. ಸೋಧಿ, ಅಮೂಲ್ ಅಧ್ಯಕ್ಷರಾದ ಶಾಮಲಭಾಯಿ ಪಟೇಲ್, ಎನ್‌ಡಿಡಿಬಿ ಅಧ್ಯಕ್ಷ ಮೀನೇಷ್, ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್, ದೆಹಲಿ ಮದರ್ ಡೇರಿ ವ್ಯವಸ್ಥಾಪಕ ನಿರ್ದೇಶಕ ಮನಿಷ್ ಪಾಲ್ಗೊಂಡಿದ್ದರು.

ಸೆ. 12ಕ್ಕೆ ವಿಶ್ವ ಡೇರಿ ಶೃಂಗಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಡೇರಿ ಫೆಡರೇಷನ್‌ನ 'ವಿಶ್ವ ಡೇರಿ ಶೃಂಗ ಸಭೆ' ಸೆ.12ರಿಂದ 15ರವರೆಗೆ ದೆಹಲಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಈ ಶೃಂಗಸಭೆಯ ಪ್ರಾಯೋಜಕತ್ವವನ್ನು ಅಮೂಲ್ ಜತೆಯಲ್ಲಿ ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ವಹಿಸಿಕೊಂಡಿದೆ.

ಈ ಶೃಂಗಸಭೆಗೆ ಪ್ರಪಂಚದಾದ್ಯಂತ ಸುಮಾರು 1500 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ. ಡೇರಿ ಸಂಸ್ಕರಣಾ ಕಂಪನಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಉದ್ಯೋಗಿಗಳು, ರೈತರು, ಡೇರಿ ಉದ್ಯಮಕ್ಕೆ ಪೂರೈಕೆದಾರರು, ಶಿಕ್ಷಣ ತಜ್ಞರು, ಸರ್ಕಾರಿ ಪ್ರತಿನಿಧಿಗಳು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಆಸಕ್ತ ರೈತರು, ಶಿಕ್ಷಣ ತಜ್ಞರು ಮತ್ತು ಉದ್ಯಮಿಗಳು ಈ ಶೃಂಗಸಭೆಯಲ್ಲಿ ಪಾಲ್ಗೊಂಡು ಡೇರಿ ಉದ್ಯಮದ ಬಗ್ಗೆ ಮತ್ತಷ್ಟು ಮಾಹಿತಿ ಪಡೆದುಕೊಳ್ಳಬಹುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ತಿಳಿಸಿದ್ದಾರೆ.

ಕಾಹೇರ್: 1,502 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಬೆಳಗಾವಿ: ಇಲ್ಲಿನ ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ (ಕಾಹೇರ್), ಡೀಮ್ಡ್ ವಿಶ್ವವಿದ್ಯಾಲಯದ 12ನೇ ಘಟಿಕೋತ್ಸವ ಸಮಾರಂಭದಲ್ಲಿ ಬುಧವಾರ ವಿವಿಧ ವಿಭಾಗಗಳ ಒಟ್ಟು 1,502 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ರಾಜ್ಯ ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವಥ್ ನಾರಾಯಣ ಅವರು ವಿದ್ಯಾರ್ಥಿಗಳಿಗೆ ಪದವಿ ಹಾಗೂ ಪದಕ ಪ್ರಧಾನ ಮಾಡಿ, ಘಟಿಕೋತ್ಸವ ಭಾಷಣ ಮಾಡಿದರು. ಕಾಹೇರ್‌ನ ಕುಲಪತಿ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ.ಪ್ರಭಾಕರ ಕೋರೆ ಅಧ್ಯಕ್ಷತೆ ವಹಿಸಿದ್ದರು. ಕುಲಪತಿ ಡಾ.ವಿವೇಕ ಸಾವೋಜಿ ವರದಿ ಮಂಡಿಸಿದರು.

ಈ ಬಾರಿ ಒಟ್ಟು 14 ಪಿಎಚ್‌.ಡಿ, 10 ಪೋಸ್ಟ್ ಡಾಕ್ಟರಲ್, 37 ಚಿನ್ನದ ಪದಕಗಳು ಸೇರಿ ಆರೋಗ್ಯ ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಒಟ್ಟು 1,502 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡಲಾಯಿತು. 494 ಸ್ನಾತಕೋತ್ತರ ಪದವಿ, 909 ಪದವಿ, 11 ಸ್ನಾತಕೋತ್ತರ ಡಿಪ್ಲೊಮಾ, 34 ಸರ್ಟಿಫಿಕೆಟ್ ಕೋರ್ಸ್, 8 ಫೆಲೋಶಿಪ್ ಮತ್ತು 22 ಡಿಪ್ಲೊಮಾ ಪ್ರಮಾಣ ಪತ್ರ ನೀಡಲಾಯಿತು.



ಪ್ರಜಾವಾಣಿ
ಗುರುವಾರ
● ಆಗಸ್ಟ್ 4, 2022

ಸೇತುವೆಗಳು ಕೊಚ್ಚಿ ಹೋಗಿ ಸಂಚಾರ ಅಸ್ತವ್ಯಸ್ತ ● ಕೆಲ ಗ್ರಾಮಗಳು, ಜಮೀನುಗಳು ಜಲಾವೃತ

ವರ್ಷಧಾರೆಗೆ ನಲುಗಿದ ಕರುನಾಡು

ಪ್ರಜಾವಾಣಿ ವಾರ್ತೆ



ಮಂಡ್ಯ ಜಿಲ್ಲೆಯ ಮದ್ದೂರು ಪಟ್ಟಣದ ಕೊಲ್ಲಿ ಸರ್ಕಲ್ ಬಳಿ ಹೆದ್ದಾರಿಗೆ ನೀರು ನುಗ್ಗಿದ್ದರಿಂದ ಮೈಸೂರು – ಬೆಂಗಳೂರು ಹೆದ್ದಾರಿ ಸಂಚಾರ ಬಂದ್ ಆಗಿತ್ತು – ಪ್ರಜಾವಾಣಿ ಚಿತ್ರ

ಬೆಂಗಳೂರು: ರಾಜ್ಯದ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿ ಜಿಲ್ಲೆಗಳು ಹಾಗೂ ಹಳೆ ಮೈಸೂರು ಭಾಗದಲ್ಲಿ ಬುಧವಾರವೂ ಭಾರಿ ಮಳೆಯಾಗಿದೆ. ಮಂಗಳವಾರ ರಾತ್ರಿ ಕೆಲ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದ್ದು, ಜನ-ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯದ ಕಾಲುವೆಯಲ್ಲಿ ಮಂಗಳವಾರ ನಾಪತ್ತೆಯಾಗಿದ್ದ ರಾಜಪ್ಪ ಭೋವಿ (40) ಮತ್ತು ಅವರ ಪುತ್ರ ಮಹೇಶ (12) ಬುಧವಾರ ಶವವಾಗಿ ಪತ್ತೆಯಾದರು.

ಮೈಸೂರು ಭಾಗದ ಕೊಡಗು ಹಾಗೂ ಹಾಸನ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಧಾರಾಕಾರ ಮಳೆ ಸುರಿದಿದ್ದು, ದೇವರಕೊಲ್ಲಿ– ಕೊಯನಾಡು ನಡುವಿನ ಮಡಿಕೇರಿ– ಮಂಗಳೂರು ರಸ್ತೆಯಲ್ಲಿ ದೊಡ್ಡ ಬಿರುಕುಗಳು ಮೂಡಿವೆ. ಭಾರಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಗುರುವಾರ ಭಾರಿ ಮಳೆ ಬೀಳುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

ಹಾಸನ ಜಿಲ್ಲೆಯ ಶ್ರವಣಬೆಳಗೊಳದ ವಿಂಧ್ಯಗಿರಿ ಬೆಟ್ಟದ ಕೋಟೆಯ ಕಲ್ಲುಗಳು ಸಡಿಲಗೊಂಡು ಬಿದ್ದಿದ್ದು, ಬೆಟ್ಟಕ್ಕೆ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಅರಕಲಗೂಡು ತಾಲ್ಲೂಕಿನಲ್ಲಿ 10ಕ್ಕೂ ಹೆಚ್ಚು ಕೆರೆಗಳು ಒಡೆದಿವೆ. ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ. ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಂಡ್ಯ ತಾಲ್ಲೂಕಿನ ಹೊಸಬೂದನೂರು ಕೆರೆ ನೀರು ರಸ್ತೆಯಲ್ಲಿ ಹರಿಯುತ್ತಿದ್ದರಿಂದ ಬೆಂಗಳೂರು- ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ಬುಧವಾರ ಅಸ್ತವ್ಯಸ್ತಗೊಂಡಿತ್ತು.

ವಿಜಯಪುರದಲ್ಲಿ ಸಿಡಿಲು ಬಡಿದು ಎಮ್ಮೆ ಸಾವಿಗೀಡಾಗಿದೆ. ಸತತ ಮಳೆಗೆ ವಿಜಯನಗರ–ಬಳ್ಳಾರಿಯಲ್ಲಿ ಒಟ್ಟು ಆರು ಮನೆಗಳಿಗೆ ಹಾನಿಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ 15, ಬಾಗಲಕೋಟೆ ಜಿಲ್ಲೆಯಲ್ಲಿ 9, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನಲ್ಲಿ 10, ಕಾರಟಗಿ ತಾಲ್ಲೂಕಿನಲ್ಲಿ 14, ಕುಷ್ಟಗಿ ಮತ್ತು ಕುಕನೂರು ತಾಲ್ಲೂಕಿನಲ್ಲಿ ತಲಾ ಎರಡು ಮನೆಗಳು ಕುಸಿದಿವೆ. ನವಲಗುಂದದಲ್ಲಿ ಎರಡು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಗಂಗಾವತಿ ತಾಲ್ಲೂಕಿನಲ್ಲಿ 6 ಗುಡಿಸಲುಗಳಿಗೆ ಭಾಗಶಃ ಹಾನಿಯಾಗಿದೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ರಾಗಿಮಸಲವಾಡ ಗ್ರಾಮದಲ್ಲಿ ಒಂದು ಮನೆ ಕುಸಿದಿದೆ. ಭೀಮ್ಲಾ ತಾಂಡಾದಲ್ಲಿ ಮನೆ ಕುಸಿದು ಆರು ವರ್ಷದ ಬಾಲಕನಿಗೆ ಗಾಯವಾಗಿದೆ.

ತುಮಕೂರು ಜಿಲ್ಲೆಯಲ್ಲಿ ಮಳೆಯ ಅಬ್ಬರ ಮುಂದುವರಿದಿದ್ದು, ಮಧುಗಿರಿ ಭಾಗದಲ್ಲಿ ಜಯಮಂಗಲಿ ನದಿ ಉಕ್ಕಿ ಹರಿಯುತ್ತಿದೆ. ನದಿ ನೀರು ನುಗ್ಗಿ ನಾಲ್ಕು ಹಳ್ಳಿಗಳು ಜಲಾವೃತಗೊಂಡಿವೆ. ಜಯಮಂಗಲಿ ನದಿ ಹಿಂದಿನ ವರ್ಷ ಬಿದ್ದ ಮಳೆಗೆ 25 ವರ್ಷಗಳ ನಂತರ ತುಂಬಿ ಹರಿದಿತ್ತು. ಈ ವರ್ಷವೂ ಉತ್ತಮ ಮಳೆ ಆಗುತ್ತಿರುವುದರಿಂದ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ.

ದೇವನಹಳ್ಳಿ ತಾಲ್ಲೂಕಿನ ಹೊಸನಲ್ಲೂರು ಗ್ರಾಮದ ರೈತ ಕಿರಣ್ ಕುಮಾರ್ ಅವರ ಕೋಳಿ ಫಾರಂಗೆ ನೀರು ನುಗ್ಗಿದ್ದು, 1,500ಕ್ಕೂ ಹೆಚ್ಚು ಕೋಳಿಗಳು ಸತ್ತು ಹೋಗಿವೆ. ₹ 3.5 ಲಕ್ಷ ನಷ್ಟವಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಕೊಟ್ಟಿಗೆಮಾಚೇನಹಳ್ಳಿಯ ಸಂಪರ್ಕ ಸೇತುವೆ ಮಂಗಳವಾರ ರಾತ್ರಿ ಸುರಿದ ಭಾರೀ ಮಳೆಗೆ ನಾಲ್ಕನೇ ಬಾರಿಗೆ ಕೊಚ್ಚಿ ಹೋಗಿದೆ.

ಹಾವೇರಿ ಜಿಲ್ಲೆ ರಟ್ಟೀಹಳ್ಳಿಯಲ್ಲಿ ಕುಮುದ್ವತಿ ನದಿ ಅಪಾಯಮಟ್ಟ ಮೀರಿ ಹರಿಯುತ್ತಿದೆ. ರಟ್ಟೀಹಳ್ಳಿ ಮತ್ತು ಯಲಿವಾಳ ಗ್ರಾಮದ ಮಧ್ಯೆ ಕುಮುದ್ವತಿ ನದಿಗೆ ನಿರ್ಮಿಸಿರುವ ಸೇತುವೆ ಮುಳುಗಡೆಯಾಗಿದೆ.

5 ಗಂಟೆಯಲ್ಲಿ 14 ಸೆಂ.ಮೀಗೂ ಅಧಿಕ ಮಳೆ: ಮಡಿಕೇರಿ ತಾಲ್ಲೂಕಿನ ಚೆಂಬು ಗ್ರಾಮದಲ್ಲಿ ಬುಧವಾರ ಸಂಜೆಯಿಂದ ಎಡೆಬಿಡದೇ ಮಳೆ ಸುರಿಯುತ್ತಿದ್ದು, ಜನರು ಭಯಭೀತರಾಗಿದ್ದಾರೆ.

ಭಾರಿ ಶಬ್ದದ ಗುಡುಗು, ಸಿಡಿಲುಗಳು ಅಪ್ಪಳಿಸಿದ್ದು, ಜನರು ಭಯಭೀತರಾಗಿದ್ದಾರೆ. 'ಮೇಘಸ್ಫೋಟ'ದ ವದಂತಿ ಗ್ರಾಮದಲ್ಲಿ ಹಬ್ಬಿದ್ದು, ವಾಟ್ಸ್‌ಆ್ಯಪ್‌ನಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ವಿದ್ಯುತ್ ಪೂರೈಕೆ ಕಡಿತಗೊಂಡಿದ್ದು, ಜನರು ಆತಂಕಗೊಂಡಿದ್ದಾರೆ.

ಮಧ್ಯಾಹ್ನ 3.30ರಿಂದ ರಾತ್ರಿ 8.30ರ ತನಕ 14 ಸೆಂ.ಮೀ ಮಳೆ ಸುರಿದಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ತಿಳಿಸಿದೆ.

7 ಗಂಟೆ ಸಂಚಾರ ಸ್ಥಗಿತ

ಮಂಗಳೂರು: ಜಿಲ್ಲೆಯಲ್ಲಿ ಬುಧವಾರ ನಸುಕಿನಲ್ಲಿ ಮಳೆಯ ಅಬ್ಬರ ಜೋರಾಗಿತ್ತು. ಧಾರಾಕಾರ ಮಳೆಯಿಂದ ಪಯಸ್ವಿನಿ ನದಿ ಉಕ್ಕಿ ಹರಿದ ಪರಿಣಾಮ, ಮೈಸೂರು– ಮಂಗಳೂರು ಹೆದ್ದಾರಿಯಲ್ಲಿ ದಕ್ಷಿಣ ಕನ್ನಡ– ಕೊಡಗು ಜಿಲ್ಲೆಗಳ ಗಡಿಭಾಗದ ಸಂಪಾಜೆ ಸಮೀಪ ಪೆರಾಜೆ ಬಳಿ ನಸುಕಿನಿಂದ ಏಳು ತಾಸು ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಪ್ರವಾಹದಲ್ಲಿ ಸಿಲುಕಿದ ಕೆಎಸ್‌ಆರ್‌ಟಿಸಿ ರಾಜಹಂಸ ಬಸ್‌ನಲ್ಲಿದ್ದ ಒಂಬತ್ತು ಪ್ರಯಾಣಿಕರನ್ನು ದೋಣಿ ಮೂಲಕ ಸುರಕ್ಷಿತ ಸ್ಥಳಕ್ಕೆ ಕರೆತರಲಾಯಿತು. ಸಂಪರ್ಕ ಕಡಿತವಾದ ಪರಿಣಾಮ ಸುಮಾರು 7 ಕಿ.ಮೀ.ವರೆಗೆ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಅರಂಬೂರು, ಪಾಲಡ್ಕ ಬಳಿ ಆಶ್ರಮ ಸೇರಿದಂತೆ ಸುಮಾರು ಎಂಟಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡು, ಮನೆಯಲ್ಲಿದ್ದವರನ್ನು ರಕ್ಷಿಸಲು ಹರಸಾಹಸ ಪಡಬೇಕಾಯಿತು.

ಚೆಂಬು ಗ್ರಾಮದಲ್ಲಿ ಮತ್ತೆ ಲಘು ಭೂಕಂಪನವಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ತುಂಗಭದ್ರಾ ನದಿಗೆ 90 ಸಾವಿರ ಕ್ಯುಸೆಕ್ ನೀರು

ತುಂಗಭದ್ರಾ ಜಲಾಶಯದ ಒಳಹರಿವು ಹೆಚ್ಚಾಗಿರುವುದರಿಂದ ಬುಧವಾರ ನದಿಗೆ 90 ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿದ್ದು, ಪುನಃ ಕಂಪ್ಲಿ–ಗಂಗಾವತಿ ಸಂಪರ್ಕಿಸುವ ಸೇತುವೆ ಮುಳುಗುವ ಭೀತಿ ಎದುರಾಗಿದೆ.

ಬೆಳಗಾವಿ ಜಿಲ್ಲೆಯ ಘಟಪ್ರಭಾ ನದಿ ಅಚ್ಚುಕಟ್ಟು ಪ್ರದೇಶದಲ್ಲಿ ಬಿದ್ದ ಮಳೆಯಿಂದಾಗಿ ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದ ನೀರಿನ ಮಟ್ಟ 2,158.75 ಅಡಿಗೆ ಏರಿಕೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	58,062	72,117
ಹಾರಂಗಿ	2,859	2,857.30	1,370	6,070
ಕಬಿನಿ	2284.00	2283.78	10,300	11,000
ಹೇಮಾವತಿ	2,922	2,922	11,487	11,425
ಲಿಂಗನಮಕ್ಕಿ	1,819	1,800	19,725	4,889
ಸೂಪಾ (ಮೀ)	564	541.98	3,055	1,818
ಮಾಣಿ	594	584	912	312
ತುಂಗಭದ್ರಾ	1,633	1,631.78	75,244	85,733
ಮಲಪ್ರಭಾ	2079.5	2,069.90	2,813	394
ಘಟಪ್ರಭಾ	2175	2,158.75	2,714	168
ಭದ್ರಾ	186	184	6,575	5,070
ಆಲಮಟ್ಟಿ (ಮೀ)	519.6	518.73	29,318	18,451
ನಾರಾಯಣಪುರ (ಮೀ)	492.25	491.88	20,000	29,080

* ನೆಲಮಟ್ಟದಿಂದ

5 ಜಿಲ್ಲೆಗಳಿಗೆ 3 ದಿನ 'ರೆಡ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುಡುಗು ಸಹಿತ ಭಾರಿ ಮಳೆ ಮುಂದುವರೆಯಲಿದ್ದು, ಉತ್ತರ ಕನ್ನಡ ಸೇರಿ ಐದು ಜಿಲ್ಲೆಗಳಿಗೆ ಹವಾಮಾನ ಇಲಾಖೆ 'ರೆಡ್ ಅಲರ್ಟ್' ಘೋಷಿಸಿದೆ.

ಶುಕ್ರವಾರ ಬೆಳಗಿನವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಲಿದೆ. ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗೆ ಮುಂದಿನ ಮೂರು ದಿನಗಳು 'ರೆಡ್ ಅಲರ್ಟ್' ನೀಡಲಾಗಿದೆ. ಶಿವಮೊಗ್ಗಕ್ಕೆ 'ಆರೆಂಜ್ ಅಲರ್ಟ್' ಹಾಗೂ ಬೀದರ್, ಕಲಬುರ್ಗಿ ಸೇರಿ 10 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು, ಬಳ್ಳಾರಿ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಯಲ್ಲಿ ಭಾರಿ ಮಳೆಯಾಗಲಿದೆ. ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರ್ಗಿ ಹಾಗೂ ವಿಜಯಪುರ, ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾಸನ, ಕೋಲಾರ, ಮಂಡ್ಯ, ಮೈಸೂರು, ತುಮಕೂರು ಹಾಗೂ ರಾಮನಗರ ಜಿಲ್ಲೆಯಲ್ಲಿ ಒಂದೆರಡು ಕಡೆ ಗುರುವಾರ ಭಾರಿ ಮಳೆಯಾಗಲಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 50 ಕಿ.ಮೀ.ನಿಂದ 60 ಕಿ.ಮೀ. ತಲುಪುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಸೂಚಿಸಿದೆ.

ರಾಜ್ಯದಲ್ಲಿ ಮುಂದುವರಿದ ಮಳೆ ಅಬ್ಬರ

ಒಂದನೇ ಪುಟದಿಂದ...

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ರಾರಾವಿ ಬಳಿಯ ವೇದಾವತಿ ನದಿಯಲ್ಲಿ ಬುಧವಾರ ಬೆಳಗಿನ ಜಾವ ಪ್ರವಾಹದಲ್ಲಿ ಸಿಕ್ಕಿದ ಟ್ರಕ್ ಪಲ್ಟಿಯಾಗಿ, ಅದರಲ್ಲಿದ್ದ ಇಬ್ಬರು ಚಾಲಕರ ಪೈಕಿ ಹುಸೇನಿ (25) ಎಂಬುವವರು ನೀರಿನಲ್ಲಿ ಕೊಚ್ಚಿಹೋಗಿದ್ದಾರೆ. ಮತ್ತೊಬ್ಬ ಚಾಲಕ ಅಹಮ್ಮದ್ (55) ಎಂಬಾತನನ್ನು ಅಗ್ನಿ ಶಾಮಕ ದಳದ ಸಿಬ್ಬಂದಿ ಹಾಗೂ ಸುರಪುರದ ಎಸ್‌ಡಿಆರ್‌ಎಫ್ ತಂಡ ರಕ್ಷಣೆ ಮಾಡಿದೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಳೆ ಇಳಿಮುಖವಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳಿದೆ. ಕ್ಷೇತ್ರಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಿದೆ.

ನೆರೆ ಪರಿಹಾರಕ್ಕೆ ₹500 ಕೋಟಿ: ಸಿ.ಎಂ ಬೊಮ್ಮಾಯಿ

ಒಂದನೇ ಪುಟದಿಂದ...

ಭಟ್ಕಳ ತಾಲ್ಲೂಕಿನ ಮುಟ್ಟಳ್ಳಿ ಗ್ರಾಮದಲ್ಲಿ ಭೂ ಕುಸಿತದಿಂದ ನಾಲ್ವರು ಮೃತಪಟ್ಟ ಪ್ರದೇಶಕ್ಕೆ ಬುಧವಾರ ಭೇಟಿ ನೀಡಿದ ನಂತರ ಅವರು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಈವರೆಗಿನ ಮಾಹಿತಿಯ ಪ್ರಕಾರ, 14 ಜಿಲ್ಲೆಗಳಲ್ಲಿ ಮಳೆಯಿಂದ ಹಾನಿಯಾದ ವರದಿಯಿದೆ. ಉತ್ತರ ಕನ್ನಡ ಹಾಗೂ ತುಮಕೂರು ಜಿಲ್ಲೆಗಳಲ್ಲಿ ತಲಾ ನಾಲ್ವರು, ವಿಜಯನಗರ ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಸುಮಾರು 600 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. 21,471 ಹೆಕ್ಟೇರ್ ಗಳಷ್ಟು ಕೃಷಿ ಪ್ರದೇಶಕ್ಕೆ ಹಾನಿಯಾಗಿದೆ' ಎಂದು ತಿಳಿಸಿದರು.

'ಭೂಕುಸಿತವಾದ ಪ್ರದೇಶಗಳ ಭೌಗೋಳಿಕ ಸಮೀಕ್ಷೆ ಮಾಡಿಸಲಾಗುವುದು. ಮುಟ್ಟಳ್ಳಿಯಲ್ಲಿ ಮೃತಪಟ್ಟ ನಾಲ್ವರ ಕುಟುಂಬಕ್ಕೆ ಒಟ್ಟು ₹ 20 ಲಕ್ಷ ಪರಿಹಾರ ವಿತರಿಸಲಾಗಿದೆ. ಮಕ್ಕಳ ಸ್ನಾತಕೋತ್ತರ ವಿದ್ಯಾಭ್ಯಾಸದ ತನಕ ಸರ್ಕಾರವೇ ಸಂಪೂರ್ಣ ಜವಾಬ್ದಾರಿ ವಹಿಸಲಿದೆ. ಭೂಕುಸಿತವಾಗಿ ನೆಲಸಮವಾದ ಮನೆಯ ಕುಟುಂಬದವರ ವಾಸ್ತವ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಲು ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ' ಎಂದು ಪ್ರಕಟಿಸಿದರು.



ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುಟ್ಟಳ್ಳಿಯಲ್ಲಿ ಭೂಕುಸಿತವಾದ ಪ್ರದೇಶಕ್ಕೆ ಬುಧವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೃತ ಲಕ್ಷ್ಮಿ ನಾರಾಯಣ ನಾಯ್ಕ ಅವರ ಸಂಬಂಧಿಕರಿಗೆ ಒಟ್ಟು ₹20 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ಸಚಿವರಾದ ಆರ್.ಅಶೋಕ, ಶಿವರಾಮ ಹೆಬ್ಬಾರ, ಶಾಸಕ ಸುನೀಲ ನಾಯ್ಕ ಇದ್ದಾರೆ –ಪ್ರಜಾವಾಣಿ ಚಿತ್ರ

ಶರೀಫ್‌ರನ್ನು ರಕ್ಷಿಸಿದ ಸೋಮಶೇಖರ್

ಸುಬ್ರಹ್ಮಣ್ಯ(ದಕ್ಷಿಣ ಕನ್ನಡ): ಸುಳ್ಯ ತಾಲ್ಲೂಕಿನ ಹರಿಹರ ಪಲ್ಲತ್ತಡ್ಕದಲ್ಲಿ ಸೇತುವೆಗೆ ಅಪ್ಪಳಿಸಿದ್ದ ಮರಗಳನ್ನು ತೆರವುಗೊಳಿಸುವ ವೇಳೆ ಆಯತಪ್ಪಿ ನದಿಗೆ ಬಿದ್ದ ಜೆಸಿಬಿ ಆಪರೇಟರ್ ಅನ್ನು, ಪ್ರವಾಹದ ಅಪಾಯ ಲೆಕ್ಕಿಸದೆ ಸ್ಥಳೀಯ ವ್ಯಕ್ತಿಯೊಬ್ಬರು ರಕ್ಷಿಸಿದ್ದಾರೆ. ಹರಿಹರ ಹೊಳೆಯ ಸೇತುವೆಯ ಬದಿಯಲ್ಲಿ ಸಿಲುಕಿಕೊಂಡಿದ್ದ ಮರದ ದಿಮ್ಮಿಗಳನ್ನು ಜೆಸಿಬಿ ಚಾಲಕ ಶರೀಫ್ ಮಂಗಳವಾರ ಸಂಜೆ ತೆರವುಗೊಳಿಸುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಹೊಳೆಗೆ ಬಿದ್ದಿದ್ದಾರೆ. ಇದನ್ನು ಕಂಡ ಸೋಮಶೇಖರ್ ಕಟ್ಟೆಮನೆ ತಕ್ಷಣ ನೀರಿಗೆ ಜಿಗಿದು, ತಮ್ಮ ಪ್ರಾಣದ ಹಂಗುತೊರೆದು ಶರೀಫ್ ಅವರನ್ನು ರಕ್ಷಿಸಿದ್ದಾರೆ.

ಸ್ಥಳದಲ್ಲಿದ್ದವರು ಈ ದೃಶ್ಯವನ್ನು ವಿಡಿಯೊ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. 'ಸಾಮಾಜಿಕ ಜಾಲತಾಣದಲ್ಲಿ ನಾವಿಬ್ಬರು ಹಿಂದೂ–ಮುಸ್ಲಿಂ ಎಂದು ಬಿಂಬಿಸುತ್ತಿದ್ದಾರೆ. ಆ ಕ್ಷಣದಲ್ಲಿ ಹೊಳೆಗೆ ಬಿದ್ದ ವ್ಯಕ್ತಿಯನ್ನು ರಕ್ಷಿಸುವುದಷ್ಟೇ ನನ್ನ ಗುರಿಯಾಗಿತ್ತು. ಆಗ ನಾನು ಅಲ್ಲಿ ಧರ್ಮ ಯಾವುದೆಂದು ನೋಡಲಿಲ್ಲ. ನಮ್ಮಿಬ್ಬರ ಧರ್ಮ ಬೇರೆ ಇರಬಹುದು, ಆದರೆ, ಎಲ್ಲರ ಜೀವವೂ ಒಂದೇ' ಎಂದು ಸೋಮಶೇಖರ್ ಪ್ರತಿಕ್ರಿಯಿಸಿದರು.

ಮುರುಘಾ ಮಠಕ್ಕೆ ಭೇಟಿ, ಮಠಾಧೀಶರೊಂದಿಗೆ ಸಂವಾದ

ಇಷ್ಟಲಿಂಗ ದೀಕ್ಷೆ ಪಡೆದ ರಾಹುಲ್ ಗಾಂಧಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಇಲ್ಲಿಯ ಮುರುಘಾ ಮಠಕ್ಕೆ ಭೇಟಿ ನೀಡಿದ್ದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಡಾ.ಶಿವಮೂರ್ತಿ ಮುರುಘಾ ಶರಣರಿಂದ ಇಷ್ಟಲಿಂಗ ದೀಕ್ಷೆ ಪಡೆದರು. ವಿಭೂತಿ ಧರಿಸಿ ಕೊರಳಿಗೆ ಲಿಂಗಧಾರಣೆ ಮಾಡಿಕೊಂಡು ಬಸವೇಶ್ವರರ ಭಕ್ತರಾದರು.

ಮುರುಘಾ ಮಠದಲ್ಲಿ ಬುಧವಾರ ಏರ್ಪಡಿಸಿದ್ದ ಮಠಾಧೀಶರೊಂದಿಗಿನ ಸಂವಾದದಲ್ಲಿ ಅವರು ಬಸವತತ್ವ ಪರಿಪಾಲನೆಯ ವಾಗ್ದಾನ ನೀಡಿದರು. ಲಿಂಗಪೂಜೆಯ ವಿಧಿ– ವಿಧಾನಕ್ಕೆ ಸಂಬಂಧಿಸಿ ತರಬೇತಿ ನೀಡಲು ಮಠದ ಪ್ರತಿನಿಧಿಯೊಬ್ಬರನ್ನು ತಮ್ಮೊಂದಿಗೆ ಕಳುಹಿಸಿಕೊಡುವಂತೆ ಮನವಿ ಮಾಡಿಕೊಂಡರು.

ಮಠ, ತತ್ವ, ಸಿದ್ಧಾಂತ ಹಾಗೂ ಗುರು ಪರಂಪರೆಯ ಬಗ್ಗೆ ಪ್ರಶ್ನಿಸಿದ ರಾಹುಲ್ ಗಾಂಧಿ ಅವರಿಗೆ ಶರಣರು ಬಸವತತ್ವ, ಕಾಯಕ ಪ್ರಜ್ಞೆ ಕುರಿತು ವಿವರಿಸಿದರು. ಲಿಂಗದೀಕ್ಷೆಯ ಮಾಹಿತಿ ನೀಡಿ, ಅಂಗೈನಲ್ಲಿ ಇಷ್ಟಲಿಂಗ ಹಿಡಿದು ಪ್ರಾತ್ಯಕ್ಷಿಕೆ ತೋರಿಸಿದರು. ಇದರಿಂದ ಪ್ರೇರಣೆಗೊಂಡ ರಾಹುಲ್ ಲಿಂಗದೀಕ್ಷೆ ಪಡೆಯುವ ಇಚ್ಛೆ ವ್ಯಕ್ತಪಡಿಸಿದರು. ಸಂತಸಗೊಂಡ ಮಠಾಧೀಶರು ಲಿಂಗ ದೀಕ್ಷೆ ನೀಡಿ ಮಹತ್ವ ತಿಳಿಸಿದರು.

'ದೇಶದಲ್ಲಿ ಜೈನ, ಬೌದ್ಧ, ಹಿಂದೂವಾದದಂತೆ ಬಸವತತ್ವವೂ ಇದೆ. ಬಸವತತ್ವ ಪ್ರಚಾರ ಮಾಡುವ ಕಾರ್ಯದಲ್ಲಿ ನಾವು ತೊಡಗಿದ್ದೇವೆ. ಸಾಮಾಜಿಕ ಸಮಾನತೆ, ಮಾನವಪ್ರೀತಿ, ದಾಸೋಹ ಹಾಗೂ ಲಿಂಗಪೂಜೆಯ ಮೂರು ಹಂತಗಳನ್ನು ವಿವರಿಸಿದೆವು. ಲಿಂಗದೀಕ್ಷೆ ಸ್ವೀಕರಿಸಲು ಸ್ವಯಂ ಪ್ರೇರಿತವಾಗಿ ಮುಂದೆ ಬಂದ ರಾಹುಲ್, ಲಿಂಗಧಾರಣೆ ಮಾಡಿಕೊಂಡು ವಿಭೂತಿ ಧರಿಸಿದರು. ಸುಮಾರು 20 ನಿಮಿಷ ಈ ಪ್ರಕ್ರಿಯೆ ನಡೆಯಿತು' ಎಂದು ಡಾ.ಶಿವಮೂರ್ತಿ ಮುರುಘಾ ಶರಣರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಷಡಾಕ್ಷರಮುನಿ ಸ್ವಾಮೀಜಿ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸೇರಿದಂತೆ 30ಕ್ಕೂ ಹೆಚ್ಚು ಮಠಾಧೀಶರು ಸಂವಾದದಲ್ಲಿ ಪಾಲ್ಗೊಂಡಿದ್ದರು.



ಚಿತ್ರದುರ್ಗದ ಮುರುಘಾ ಮಠದ ಡಾ.ಶಿವಮೂರ್ತಿ ಮುರುಘಾ ಶರಣರಿಂದ ಇಷ್ಟಲಿಂಗ ದೀಕ್ಷೆ ಪಡೆದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಕೊರಳಿಗೆ ಧರಿಸಿದರು

ಮೋದಿ ಸಮರ್ಥ ನಾಯಕ: ಶರಣರು

'ದೇಶದ ಸುತ್ತ ಶತ್ರುಗಳಿದ್ದು, ಭದ್ರತೆ ಪ್ರಾಮುಖ್ಯತೆ ಪಡೆದಿದೆ. ಶತ್ರುಗಳಿಂದ ದೇಶವನ್ನು ರಕ್ಷಿಸಲು ಪ್ರಧಾನಿ ನರೇಂದ್ರ ಮೋದಿ ಅವರಂತಹ ಬಲಿಷ್ಠ ನಾಯಕರು ಬೇಕಿದೆ' ಎಂದು ಡಾ.ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಮುರುಘಾ ಮಠಕ್ಕೆ ಭೇಟಿ ನೀಡುವುದಕ್ಕೂ ಮುನ್ನ ಶರಣರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಭಾರತ ಬಲಿಷ್ಠವಾಗುತ್ತಿರುವುದನ್ನು ಸುತ್ತಲಿನ ದೇಶಗಳು ಗಮನಿಸುತ್ತಿವೆ. ಭಾರತದ ಶಕ್ತಿಯನ್ನು ಕುಂದಿಸುವ ಪ್ರಯತ್ನ ಮಾಡುತ್ತಿವೆ. ದೇಶದ ಮೇಲೆ ಆಕ್ರಮಣಗಳು ನಡೆಯದ ರೀತಿಯಲ್ಲಿ ಮೋದಿ ಅವರು ಸಮರ್ಥವಾಗಿ ಆಡಳಿತ ನಡೆಸುತ್ತಿದ್ದಾರೆ. ವಿರೋಧ ಪಕ್ಷಗಳಲ್ಲಿಯೂ ಆ ರೀತಿಯ ಬಲಿಷ್ಠ ನಾಯಕ ಎದ್ದು ಬರಲಿ' ಎಂದು ಹೇಳಿದರು.

'ಭಾರತದ ಬಗ್ಗೆ ವಿದೇಶಿಗರು ಕೂಡ ಅಭಿಮಾನಪಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಭಾರತೀಯರಿಗೆ ಇದೊಂದು ಹೆಮ್ಮೆಯ ಸಂಗತಿ. ಸಮರ್ಥ ನಾಯಕ ಇಲ್ಲದೇ ಹೋದರೆ ಶತ್ರು ರಾಷ್ಟ್ರಗಳು ದೇಶದ ಮೇಲೆ ದಾಳಿ ನಡೆಸಬಹುದು' ಎಂದರು.

'ಕೈ' ನಗಾರಿ: ಒಗ್ಗಟ್ಟಿನ ಸವಾರಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಒಂದನೇ ಪುಟದಿಂದ...

'ಸಿದ್ದರಾಮಯ್ಯನವರ ಮುಂದಾಳತ್ವದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಮುಂದಿನ ಚುನಾವಣೆ ಎದುರಿಸುತ್ತೇವೆ' ಎಂದು ಹೇಳುವುದನ್ನು ಶಿವಕುಮಾರ್ ಮರೆಯಲಿಲ್ಲ. 'ಸಾಮೂಹಿಕ ನಾಯಕತ್ವದಲ್ಲಿ ಒಗ್ಗಟ್ಟಾಗಿ ಹೋಗಿ' ಎಂದು ಕರೆ ನೀಡಿ ರಾಹುಲ್ ಗಾಂಧಿ, 'ಕನ್ನಡ ಭಾಷೆ, ಸಂಸ್ಕೃತಿಯನ್ನು ಬೆಂಬಲಿಸುವ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರ ಆಶೀರ್ವಾದ ಬೇಕು' ಎಂದೂ ಮನವಿ ಮಾಡಿದರು.

'ಬಸವಣ್ಣನ ಹೆಸರಲ್ಲಿ ರಾಜಕಾರಣ ಮಾಡುವ ಬಿಜೆಪಿ, ಜನರನ್ನು ಕೊಳ್ಳೆ ಹೊಡೆಯುವ ಕೆಲಸ ಮಾಡುತ್ತಿದ್ದು, ಅವರ ತತ್ವಾದರ್ಶಗಳಿಗೆ ತದ್ವಿರುದ್ಧವಾದ ಆಡಳಿತ ನೀಡುತ್ತಿದೆ. ಆದರೆ, ಕಾಂಗ್ರೆಸ್ ಪಕ್ಷ ನಿಜ ಅರ್ಥದಲ್ಲಿ ಬಸವೇಶ್ವರರ ತತ್ವ ಆಚರಿಸುತ್ತ ಬಡಜನರ ಆಶಾಕಿರಣವಾಗಿದೆ' ಎಂದೂ ರಾಹುಲ್ ಅವರು ಹೇಳಿದರು.

ಸಿದ್ದರಾಮಯ್ಯ ನೇತೃತ್ವದ ಐದು ವರ್ಷಗಳ ಆಡಳಿತ ವೈಖರಿ ಹಾಗೂ ಡಿ.ಕೆ. ಶಿವಕುಮಾರ್ ನಾಯಕತ್ವಕ್ಕೆ ರಾಹುಲ್ ಗಾಂಧಿ ಶಹಬ್ಬಾಸ್ ನೀಡಿದರು.

'ರಾಜಕಾರಣದಲ್ಲಿ ಮುಂದುವರಿಯುವೆ'

ಒಂದನೇ ಪುಟದಿಂದ...

'ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ತ್ಯಾಗಮೂರ್ತಿಗಳು. ಎರಡು ಬಾರಿ ಮನೆ ಬಾಗಿಲಿಗೆ ಬಂದಿದ್ದ ಪ್ರಧಾನಿ ಪಟ್ಟವನ್ನು ಮನಮೋಹನ್ ಸಿಂಗ್ ಅವರಿಗೆ ಬಿಟ್ಟುಕೊಟ್ಟರು. ಬೇರೆ ಪಕ್ಷದಿಂದ ಬಂದ ನನ್ನನ್ನು ಮುಖ್ಯಮಂತ್ರಿ ಮಾಡಿದರು. ಅಂಥವರನ್ನು ಕೇಂದ್ರ ಸರ್ಕಾರ ಇ.ಡಿ. ವಿಚಾರಣೆಗೆ ಒಳಪಡಿಸಿ ಶೋಷಿಸುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ಜನರ ಬೆಂಬಲ ಇದೆ. ಜನಶಕ್ತಿಯನ್ನು ಸರ್ವಾಧಿಕಾರವು ಹಿಡಿದಿಟ್ಟುಕೊಳ್ಳಲು ಆಗದು' ಎಂದು ಅವರು ಪ್ರಧಾನಿ ಮೋದಿ ಅವರಿಗೆ ಸವಾಲೆಸೆದರು.

ಸಿದ್ದರಾಮಯ್ಯ ಸಿಎಂ ಘೋಷಣೆ

ಜನ್ಮದಿನ ಆಚರಿಸಿಕೊಳ್ಳುತ್ತಿರುವ ನೆಚ್ಚಿನ ನಾಯಕನ ಹೆಸರು ಕೇಳಿದಾಗೆಲ್ಲ ಮುಗಿಲು ಮುಟ್ಟುತ್ತಿದ್ದ ಅಭಿಮಾನಿಗಳ ಕೇಕೆಯು, ಸಿದ್ದರಾಮಯ್ಯ ಅವರನ್ನೇ ಮುಂದಿನ ಮುಖ್ಯಮಂತ್ರಿಯಾಗಿ ಘೋಷಿಸಲು ಒತ್ತಡ ಹೇರಿದಂತೆ ಭಾಸವಾಯಿತು. ಆದರೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆ.ಸಿ. ವೇಣುಗೋಪಾಲ್ ಹಾಗೂ ರಾಹುಲ್ ಗಾಂಧಿ ಆ ಬೇಡಿಕೆಗೆ ಮನ್ನಣೆ ನೀಡದೆ ಸಾಮೂಹಿಕ ನಾಯಕತ್ವಕ್ಕೇ ಆದ್ಯತೆ ನೀಡುವುದಾಗಿ ಘೋಷಿಸಿದರು.

ಕೆಲವೊಮ್ಮೆ ಕಾರ್ಯಕರ್ತರು ಮತ್ತು ಅಭಿಮಾನಿಗಳು 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಎಂಬ ಘೋಷಣೆ ಕೂಗುವ ಮೂಲಕ 'ಸಾಮೂಹಿಕ ನಾಯಕತ್ವ ಬೇಡ, ಮತ್ತೆ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಲಿ' ಎಂಬ ಬೇಡಿಕೆಯನ್ನು ಇರಿಸಿದರು.

ಪೌರಕಾರ್ಮಿಕನಿಗೆ ಮನೆ ನೀಡದ ಜನ

ಮೈಸೂರು: 'ತಾಲ್ಲೂಕಿನ ಬೀರಿಹುಂಡಿ ಗ್ರಾ.ಪಂನಲ್ಲಿ ಇರುವುದ ನಾನೊಬ್ಬನೇ ಪೌರಕಾರ್ಮಿಕ. ನಾಲ್ಕು ಗ್ರಾಮಗಳನ್ನು ಸ್ವಚ್ಛಗೊಳಿಸುವ ನನಗೆ ಗ್ರಾಮದಲ್ಲಿ ಉಳಿಯಲು ಮನೆಯಿಲ್ಲ. ನನಗೊಬ್ಬನಿಗಷ್ಟೇ ಅಲ್ಲ ಪರಿಶಿಷ್ಟ ಸಮುದಾಯಕ್ಕೆ ಬಾಡಿಗೆ ಮನೆಯನ್ನೂ ಊರಿನ ಜನ ನೀಡುತ್ತಿಲ್ಲ..'

– ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ಪೌರಕಾರ್ಮಿಕರ ಕುಂದುಕೊರತೆ ಸಭೆಯಲ್ಲಿ ಪೌರಕಾರ್ಮಿಕ ಮಂಜುನಾಥ್ ಹೀಗೆ ಅಳಲು ತೋಡಿಕೊಂಡರು.

'ಮೈಸೂರಿನ ಬೋಗಾದಿಯಲ್ಲಿ ಬಾಡಿಗೆ ಮನೆ ಮಾಡಿ ಬೀರಿಹುಂಡಿಗೆ ಹೋಗಿ ಬರಬೇಕಿದೆ. ಸಂಬಳವೂ ಹೆಚ್ಚಿಲ್ಲ. ಮಕ್ಕಳನ್ನು ಇಲ್ಲಿನ ಶಾಲೆಗೆ ಸೇರಿಸಿದ್ದೇನೆ. ಮನೆ ಅಥವಾ ಜಾಗಕ್ಕೆಂದು ಅರ್ಜಿ ಸಲ್ಲಿಸಿದರೂ ಸ್ಪಂದನೆ ದೊರೆತಿಲ್ಲ' ಎಂದರು.

ಸುಧಾ, ಮಯೂರ ಓದಿರಿ

ಜೆಡಿಎಸ್ ಅಧ್ಯಕ್ಷರಾಗಿ ಸಿ.ಎಂ.ಇಬ್ರಾಹಿಂ ಆಯ್ಕೆ

ಬೆಂಗಳೂರು: ಜೆಡಿಎಸ್ ರಾಜ್ಯಮಟ್ಟದ ಸಾಂಸ್ಥಿಕ ಚುನಾವಣಾ ಪ್ರಕ್ರಿಯೆ ಬುಧವಾರ ಪೂರ್ಣಗೊಂಡಿದ್ದು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಸಿ.ಎಂ. ಇಬ್ರಾಹಿಂ ಅದೇ ಹುದ್ದೆಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಕ್ಷದ ಮುಖಂಡ ಎಚ್.ಸಿ. ನೀರಾವರಿ ಸಾಂಸ್ಥಿಕ ಚುನಾವಣೆಯ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಹಾಗೂ ರಾಜ್ಯ ಕಾರ್ಯಕಾರಿಣಿ ಮಂಡಳಿಯ 65 ಸದಸ್ಯರ ಸ್ಥಾನಗಳಿಗೆ ಅಷ್ಟೇ ಸಂಖ್ಯೆಯ ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಎಲ್ಲರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ನೀರಾವರಿ ಪ್ರಕಟಿಸಿದರು.

ಇಬ್ರಾಹಿಂ ಅವರಿಗೆ ಆಯ್ಕೆಪತ್ರ ಹಸ್ತಾಂತರಿಸಿದ ಬಳಿಕ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಪಕ್ಷದ ರಾಜ್ಯ ಘಟಕಕ್ಕೆ ಹೊಸ ಅಧ್ಯಕ್ಷರು ಬಂದಿದ್ದಾರೆ. ಅವರ ನೇತೃತ್ವದಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು' ಎಂದರು.

'ನಮ್ಮ ತಂದೆ ಎಚ್.ಡಿ. ದೇವೇಗೌಡರ ಸಮ್ಮುಖದಲ್ಲಿ ಈ ಚುನಾವಣೆ ನಡೆಯಬೇಕಿತ್ತು. ಆದರೆ, ಅನಾರೋಗ್ಯದ ಕಾರಣದಿಂದ ಅವರು ಭಾಗವಹಿಸಲು ಸಾಧ್ಯವಾಗಿಲ್ಲ. 2006ರಲ್ಲಿ ನಾನು ಬಿಜೆಪಿ ಜತೆ ಸೇರಿ ಸರ್ಕಾರ ರಚಿಸಿದ್ದರಿಂದ ಅವರು ನೊಂದುಕೊಂಡಿದ್ದರು. ಅದೇ ಅವರ ಆರೋಗ್ಯ ಹದಗೆಡಲು ಕಾರಣವಾಯಿತು' ಎಂದು ಹೇಳಿದರು.

ಭಿನ್ನಮತ ಹೆಚ್ಚಲಿದೆ: 'ಸಿದ್ದರಾಮೋತ್ಸವದಿಂದ ಕಾಂಗ್ರೆಸ್‌ನಲ್ಲಿ ಭಿನ್ನಮತ ಹೆಚ್ಚಲಿದೆ. ಅವರ ಪಕ್ಷದ ದೌರ್ಬಲ್ಯವನ್ನು ಆಧರಿಸಿ ಜೆಡಿಎಸ್ ಎಂದೂ ರಾಜಕಾರಣ ಮಾಡುವುದಿಲ್ಲ' ಎಂದು ಕುಮಾರಸ್ವಾಮಿ ಹೇಳಿದರು.

'ಜನ ಸಂಕಷ್ಟದಲ್ಲಿರುವಾಗ ಉತ್ಸವ ಬೇಕಿತ್ತೆ?'

ಬೆಂಗಳೂರು: ರಾಜ್ಯದ ಜನರು ಅತಿವೃಷ್ಟಿ, ಪ್ರವಾಹದಿಂದ ಸಂಕಷ್ಟದಲ್ಲಿ ಸಿಲುಕಿರುವಾಗ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ₹ 75 ಕೋಟಿ ವೆಚ್ಚ ಮಾಡಿ ಜನ್ಮದಿನೋತ್ಸವ ಆಚರಿಸಿಕೊಳ್ಳುವ ಅಗತ್ಯವಿತ್ತೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪ್ರಶ್ನಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಸಮಾಜವಾದಿ ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಸಿದ್ದರಾಮಯ್ಯ ಜನರು ಸಂಕಷ್ಟದಲ್ಲಿರುವಾಗ ಮಜಾವಾದ ಪ್ರದರ್ಶಿಸಿದ್ದಾರೆ. ಜನರ ಸಂಕಷ್ಟಕ್ಕೆ ಸ್ಪಂದಿಸಿದ ಸರ್ಕಾರ, ತನ್ನ ಒಂದು ವರ್ಷದ ಸಂಭ್ರಮಾಚರಣೆಯ ಜನೋತ್ಸವ ರದ್ದುಮಾಡಿತು. ಆದರೆ, ಕಾಂಗ್ರೆಸ್‌ನ ಒಂದು ಗುಂಪು ಸಿದ್ದರಾಮಯ್ಯ ಅವರನ್ನು ಮುಂದಿನ ಮುಖ್ಯಮಂತ್ರಿ ಎಂದು ಬಿಂಬಿಸಲು ಈ ಕಾರ್ಯಕ್ರಮ ನಡೆಸಿದೆ. ಕಾಂಗ್ರೆಸ್ ಪಕ್ಷಕ್ಕೆ ಜನಪರ ಕಾಳಜಿ ಇಲ್ಲ ಎಂಬುದು ಇದರಿಂದ ಸಾಬೀತಾಗಿದೆ' ಎಂದಿದ್ದಾರೆ.

ಕಾಂಗ್ರೆಸ್ ಸಂವೇದನಾಶೀಲತೆ ಕಳೆದುಕೊಂಡಿತೇ: ಸಿ.ಟಿ. ರವಿ ಪ್ರಶ್ನೆ

ಚಿಕ್ಕಮಗಳೂರು: 'ಭಾರಿ ಮಳೆಯಿಂದಾಗಿ ರಾಜ್ಯದಲ್ಲಿ 13 ಮಂದಿ ಮೃತಪಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ 75ನೇ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಿದ್ದು ಸರಿಯೇ, ಕಾಂಗ್ರೆಸ್ ಸಂವೇದನಾಶೀಲತೆ ಕಳೆದುಕೊಂಡಿತೇ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರಶ್ನಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜನರು ಸಂಕಷ್ಟದಲ್ಲಿರುವ ಹೊತ್ತಿನಲ್ಲಿ ಈ ಸಂಭ್ರಮ ಆಚರಿಸಬೇಕಿತ್ತೇ ಎಂಬುದನ್ನು ಆ ಪಕ್ಷ ಯೋಚಿಸಬೇಕಿತ್ತು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ವರ್ಷ ತುಂಬಿತ್ತು. ಜುಲೈ 28ರಂದು ಜನೋತ್ಸವಕ್ಕೆ ಸಿದ್ಧತೆ ಮಾಡಿಕೊಂಡಿದ್ದೆವು, ಬಿಜೆಪಿ ಕಾರ್ಯಕರ್ತ ಪ್ರವೀಣ್ ಹತ್ಯೆಯಾಗಿದ್ದರಿಂದ ಕಾರ್ಯಕ್ರಮ ಕೈಬಿಟ್ಟೆವು' ಎಂದರು.

ಜನವಾದಿ ಮಹಿಳಾ ಸಂಘಟನೆಯ ನಾಯಕಿ ಮರಿಯಂ ಧವಳೆ

'ಆರ್‌ಎಸ್‌ಎಸ್, ಬಿಜೆಪಿಯವರು ದೇಶ ಬಿಟ್ಟು ತೊಲಗಲಿ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಜಾತಿ, ಧರ್ಮದ ಹೆಸರಲ್ಲಿ ಗಲಭೆ ಉಂಟು ಮಾಡುತ್ತಿರುವ ಆರ್‌ಎಸ್‌ಎಸ್, ಬಿಜೆಪಿಯವರು ದೇಶ ಬಿಟ್ಟು ತೊಲಗಬೇಕು. ಇಲ್ಲದಿದ್ದರೆ, ಮಣ್ಣಿನಲ್ಲಿ ಹೂತು ಹಾಕುತ್ತೇವೆ' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಎಚ್ಚರಿಕೆ ನೀಡಿದರು.

ನಗರದಲ್ಲಿ ಬುಧವಾರ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 11ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದ ಆರ್‌ಎಸ್‌ಎಸ್ ಮತ್ತು ಮುಸ್ಲಿಂ ಲೀಗ್‌ನವರು ಗಲಾಟೆ ಮಾಡಿ, ಬ್ರಿಟಿಷರಿಗೆ ಸಹಕರಿಸಿದ್ದರು' ಎಂದು ಆರೋಪಿಸಿದರು.



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಬುಧವಾರ ಬೃಹತ್ ರ‍್ಯಾಲಿ ನಡೆಯಿತು

'ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದವರು ಇವತ್ತು ಅಧಿಕಾರಕ್ಕೆ ಬಂದು ದೇಶವನ್ನು ಮಾರಾಟ ಮಾಡಿ, ನಮ್ಮ ಬದುಕಿಗೆ ಕೊಳ್ಳಿ ಇಟಿದ್ದಾರೆ. ಅವರ ವಿರುದ್ಧ ನಾವು ಕ್ವಿಟ್ ಇಂಡಿಯಾ ಮಾದರಿಯಲ್ಲಿ ಹೋರಾಡಬೇಕಿದೆ' ಎಂದರು.

'ಉತ್ತಮ ಆಡಳಿತ ನಡೆಸುವಂತೆ ಜನರು ಮತ ಹಾಕಿದ್ದಾರೆ ಹೊರತು ದೇಶ ಮತ್ತು ದೇಶದ ಸಂಪತ್ತನ್ನು ಅಂಬಾನಿ, ಅದಾನಿಯಂತಹ ಕಾರ್ಪೊರೇಟ್‌ಗಳಿಗೆ ಮಾರಾಟ ಮಾಡಲು ಅಲ್ಲ' ಎಂದು ಅವರು ಟೀಕಿಸಿದರು.

'ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆಯೇ ಹೊರತು ಮಹಿಳೆಯರಿಗೆ ಅಲ್ಲ. ಮಹಿಳೆಯರಿಗೆ ಆಸ್ತಿಯ ಹಕ್ಕು ಸಿಕ್ಕಿಲ್ಲ. ಶೇ 40ಕ್ಕೂ ಅಧಿಕ ಮಹಿಳೆಯರು ಇನ್ನೂ ಅನಕ್ಷರಸ್ಥರು ಆಗಿದ್ದಾರೆ. ಘನತೆಯಿಂದ ಬದುಕುವ ವಾತಾವರಣವೇ ಇಲ್ಲದ ಈ ಹೊತ್ತಿನಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸಿದರೆ ಏನು ಫಲ' ಎಂದು ಅವರು ಪ್ರಶ್ನಿಸಿದರು.

ಸಂಘಟನೆಯ ರಾಜ್ಯ ಸಮಿತಿಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ರಾಷ್ಟ್ರೀಯ ಕಾರ್ಯದರ್ಶಿ ಕನೀಜ್ ಫಾತಿಮಾ, ರಾಜ್ಯ ಉಪಾಧ್ಯಕ್ಷೆ ಕೆ.ನೀಲಾ ಇತರರು ಇದ್ದರು. ಇದಕ್ಕೂ ಮುನ್ನ ನಗರದ ಎಪಿಎಂಸಿ ಗಂಜ್‌ನಿಂದ ಸಂಘಟನೆಯ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು.

81 ತಿದ್ದುಪಡಿಗಳನ್ನು ಸೂಚಿಸಿದ್ದ ಜೆಪಿಸಿ; ಮುಂದಿನ ಅಧಿವೇಶನದಲ್ಲಿ ಹೊಸ ಮಸೂದೆ • ವಿಪಕ್ಷಗಳ ಸ್ವಾಗತ

ವೈಯಕ್ತಿಕ ದತ್ತಾಂಶ ಭದ್ರತಾ ಮಸೂದೆ ವಾಪಸ್

ನವದೆಹಲಿ (ಪಿಟಿಐ): 'ವೈಯಕ್ತಿಕ ದತ್ತಾಂಶ ಭದ್ರತಾ ಮಸೂದೆ-2019' ಅನ್ನು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಬುಧವಾರ ವಾಪಸ್ ಪಡೆದಿದೆ. ಮಸೂದೆಯ ಪರಿಶೀಲನೆಗೆ ನೇಮಿಸಲಾಗಿದ್ದ ಸಂಸತ್ತಿನ ಜಂಟಿ ಸಂಸದೀಯ ಸಮಿತಿಯು (ಜೆಪಿಸಿ) 81 ತಿದ್ದುಪಡಿಗಳು ಹಾಗೂ 12 ಶಿಫಾರಸುಗಳನ್ನು ಸೂಚಿಸಿದ್ದರಿಂದ ಸರ್ಕಾರವು ಮಸೂದೆಯನ್ನು ಹಿಂಪಡೆದಿದೆ.

ಮಸೂದೆಯನ್ನು ವಾಪಸ್ ಪಡೆಯುವುದಾಗಿ ಪ್ರಕಟಿಸಿದ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು, ಸಮಗ್ರ ಕಾನೂನಿನ ಚೌಕಟ್ಟಿಗೆ ಹೊಂದುವ ಹೊಸ ಮಸೂದೆಯನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸುವುದಾಗಿ ಹೇಳಿದರು.

'ಈ ಮಸೂದೆಯನ್ನು ಕೋವಿಡ್ ಮುನ್ನಾ ಕಾಲದಲ್ಲಿ ರೂಪಿಸಲಾಗಿತ್ತು. ಆದರೆ, ಈಗ ಪರಿಸ್ಥಿತಿ ಗಣನೀಯವಾಗಿ ಬದಲಾಗಿದೆ. ಈ ಮಸೂದೆಯು ನವೋದ್ಯಮಗಳ ಬೆಳವಣಿಗೆಗೆ ಮಾರಕವಾಗಿತ್ತು. ಹೀಗಾಗಿ ಹೊಸ ಮಸೂದೆ ರಚಿಸಲಾಗುತ್ತದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಂಸತ್ತಿಗೆ ಹೊಸ ಮಸೂದೆ ಪರಿಚಯಿಸುವ ಮುನ್ನ, ಸಾರ್ವಜನಿಕರೊಂದಿಗೆ ಸರ್ಕಾರ ವಿಸ್ತೃತ ಸಮಾಲೋಚನೆ ನಡೆಸಲಿದೆ ಎಂದು ಮೂಲಗಳು ತಿಳಿಸಿವೆ. ಖಾಸಗಿತನ ಹಾಗೂ ಸೈಬರ್ ಭದ್ರತೆ ಕುರಿತ ಕೆಲವು ಕಾನೂನುಗಳನ್ನು ಹೊಸ ಮಸೂದೆಯು ಬದಲಿಸಲಿದೆ.

2019ರ ಡಿಸೆಂಬರ್ 11ರಂದು ಮಸೂದೆ ಮಂಡಿಸಲಾಗಿತ್ತು. ಮಸೂದೆ ಪರಿಶೀಲಿಸಲು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಲಾಗಿತ್ತು. 2021ರ ಡಿಸೆಂಬರ್‌ನಲ್ಲಿ ಜಂಟಿ ಸಂಸದೀಯ ಸಮಿತಿಯು ತನ್ನ ವರದಿಯನ್ನು ಲೋಕಸಭೆಗೆ ಸಲ್ಲಿಸಿತ್ತು.

ಈ ಮಸೂದೆಯು ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡುವುದರ ಜೊತೆಗೆ, ತನಿಖಾ ಸಂಸ್ಥೆಗಳಿಗೆ ವಿನಾಯಿತಿ ನೀಡಿತ್ತು. ಈ ಅಂಶಗಳಿಗೆ ಪ್ರತಿಪಕ್ಷಗಳು ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು.

ಟ್ವೀಟ್ ಮಾಡಿರುವ ಮಾಹಿತಿ ತಂತ್ರಜ್ಞಾನ ಸಚಿವಾಲಯದ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, 'ಈಗಿನ ಹಾಗೂ ಭವಿಷ್ಯದ ಸವಾಲುಗಳನ್ನು ಎದುರಿಸಬಲ್ಲ ಡಿಜಿಟಲ್ ಖಾಸಗಿತನ ನಿಯಮಗಳು ಹಾಗೂ ಜಾಗತಿಕ ಮಾನದಂಡದ ಕಾನೂನುಗಳನ್ನು ಒಳಗೊಂಡ ಹೊಸ ಮಸೂದೆಯನ್ನು ತರಲಾಗುವುದು' ಎಂದು ಹೇಳಿದ್ದಾರೆ.

ಜೆಪಿಸಿ ವರದಿಯು ಗುರುತಿಸಿರುವ ಹಲವು ವಿಷಯಗಳು ಪ್ರಸ್ತುತವಾಗಿದ್ದರೂ, ಆಧುನಿಕ ಡಿಜಿಟಲ್ ಖಾಸಗಿತನತ ಕಾನೂನುಗಳ ವ್ಯಾಪ್ತಿಯ ಆಚೆಗಿವೆ ಎಂದೂ ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಕೇಂದ್ರದಿಂದ ತನಿಖಾ ಸಂಸ್ಥೆಗಳ ದುರ್ಬಳಕೆ ಕುರಿತ ಚರ್ಚೆಗೆ ಕಾಂಗ್ರೆಸ್ ಆಗ್ರಹ
- ಲೋಕಸಭೆ, ರಾಜ್ಯಸಭೆಗಳಲ್ಲಿ ಪ್ರತಿಪಕ್ಷಗಳ ಸಂಸದರಿಂದ ಧರಣಿ




ಸಚಿವ ಅಶ್ವಿನಿ ವೈಷ್ಣವ್ ಅವರು ಮಸೂದೆ ಹಿಂಪಡೆಯುವುದಾಗಿ ಲೋಕಸಭೆಯಲ್ಲಿ ಪ್ರಕಟಿಸಿದರು

ಸಂಸತ್ ಕಲಾಪದಲ್ಲಿ...

- ನ್ಯಾಷನಲ್ ರೈಲ್ ಆ್ಯಂಡ್ ಟ್ರಾನ್ಸ್‌ಪೋರ್ಟೇಷನ್ ಸಂಸ್ಥೆಯನ್ನು ಸ್ವಾಯತ್ತ ಕೇಂದ್ರೀಯ ವಿಶ್ವವಿದ್ಯಾಲಯವಾಗಿ ಮಾರ್ಪಾಡು ಮಾಡುವ ಕೇಂದ್ರೀಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆಗೆ ಲೋಕಸಭೆ ಬುಧವಾರ ಅನುಮೋದನೆ ನೀಡಿತು. ಈ ವಿಶ್ವವಿದ್ಯಾಲಯವನ್ನು 'ಗತಿಶಕ್ತಿ ವಿಶ್ವವಿದ್ಯಾಲಯ' ಎಂದು ಕರೆಯಲಾಗುತ್ತದೆ
- ವಸತಿ ಸಮುಚ್ಚಯದಂಥ ಭಾರಿ ಕಟ್ಟಡಗಳು 100 ಕಿಲೊವ್ಯಾಟ್ ವಿದ್ಯುತ್‌ಅನ್ನು ನವೀಕರಿಸಬಹುದಾದ ಶಕ್ತಿ ಮೂಲಗಳಿಂದ ಪಡೆಯುವುದನ್ನು ಕಡ್ಡಾಯ ಮಾಡಲು ಅನುವು ಮಾಡಿಕೊಡುವ ಇಂಧನ ಉಳಿತಾಯ (ತಿದ್ದುಪಡಿ) ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು
- ರಾಷ್ಟ್ರೀಯ ಉದ್ದೀಪನಮದ್ದು ಮಸೂದೆಗೆ ರಾಜ್ಯಸಭೆಯಲ್ಲಿ ಧ್ವನಿಮತದ ಮೂಲಕ ಅನುಮೋದನೆ ಪಡೆಯಲಾಯಿತು

'ಟೋಲ್ ಘಟಕಗಳ ಬಳಿ ಉದ್ದದ ಸಾಲು ತಡೆಯಲು ಹೊಸ ವ್ಯವಸ್ಥೆ'



ನಿತಿನ್ ಗಡ್ಕರಿ

ಹೆದ್ದಾರಿ ಟೋಲ್ ಘಟಕಗಳ ಬಳಿ ವಾಹನಗಳ ಉದ್ದನೆಯ ಸಾಲು ತಪ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ ಎಂದು ಕೇಂದ್ರ ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ರಾಜ್ಯಸಭೆಗೆ ತಿಳಿಸಿದರು. ಟೋಲ್ ಘಟಕಗಳ ಬದಲು ಹೊಸ ತಂತ್ರಜ್ಞಾನ ಅಳವಡಿಸುವ ಕುರಿತು ಯೋಚಿಸಲಾಗುತ್ತಿದ್ದು, ಮುಂದಿನ ಆರು ತಿಂಗಳಲ್ಲಿ ಹೊಸ ವ್ಯವಸ್ಥೆ ಪರಿಚಯಿಸಲಾಗುತ್ತದೆ ಎಂದರು.

ಫಾಸ್ಟ್ಯಾಗ್ ಬದಲಿಗೆ ಇತರ ಎರಡು ಮಾದರಿಯಲ್ಲಿ ಶುಲ್ಕ ಸಂಗ್ರಹ ಮಾಡುವ ವಿಧಾನಗಳ ಕುರಿತು ಚರ್ಚೆ ನಡೆದಿದೆ. ಮೊದಲನೆಯದು ಉಪಗ್ರಹ ಆಧರಿತ ಶುಲ್ಕ ಸಂಗ್ರಹ. ಕಾರ್‌ಗಳಿಗೆ ಜಿಪಿಎಸ್ ಅಳವಡಿಸಿ, ಬಳಕೆದಾರರ ಬ್ಯಾಂಕ್ ಖಾತೆಯಿಂದ ನೇರವಾಗಿ ಶುಲ್ಕ ಪಡೆದುಕೊಳ್ಳುವ ವ್ಯವಸ್ಥೆ ಇದಾಗಿದೆ. ವಾಹನಗಳ ನೋಂದಣಿ ಫಲಕ ಬಳಸಿ ಶುಲ್ಕ ವಿಧಿಸುವ ತಂತ್ರಜ್ಞಾನವು ಎರಡನೆಯ ವಿಧಾನವಾಗಿದೆ. ಯಾವ ಮಾದರಿ ಅಳವಡಿಸಬೇಕು ಎಂಬುದನ್ನು ತಜ್ಞರ ಜೊತೆ ಚರ್ಚಿಸಿ ನಿರ್ಧರಿಸುತ್ತೇವೆ ಎಂದು ಗಡ್ಕರಿ ಹೇಳಿದರು.

'ಕೇಂದ್ರದಲ್ಲಿ 9.79 ಲಕ್ಷ ಹುದ್ದೆ ಖಾಲಿ'

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2021 ಮಾರ್ಚ್ 1ರ ಅನ್ವಯ 9.79 ಲಕ್ಷ ಹುದ್ದೆಗಳು ಖಾಲಿ ಇವೆ' ಎಂದು ಸಿಬ್ಬಂದಿ ಸಚಿವಾಲಯದ ರಾಜ್ಯ ಖಾತೆ ಸಚಿವ ಜಿತೇಂದ್ರ ಸಿಂಗ್ ಬುಧವಾರ ಮಾಹಿತಿ ನೀಡಿದರು.'23,584 ಗ್ರೂಪ್ 'ಎ' ಹುದ್ದೆಗಳು, 1,18,801 ಗ್ರೂಪ್ 'ಬಿ' ಹಾಗೂ 8,36,936 ಗ್ರೂಪ್ 'ಸಿ' ಹುದ್ದೆಗಳು ಖಾಲಿ ಇವೆ. ಹುದ್ದೆಗಳ ಭರ್ತಿ ಮತ್ತು ಸೃಷ್ಟಿಯು ಆಯಾ ಇಲಾಖೆಗಳ ಜವಾಬ್ದಾರಿಯಾಗಿದೆ. ಇದೊಂದು ನಿರಂತರ ಪ್ರಕ್ರಿಯೆ' ಎಂದು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

ಯುಎಪಿಎ: 149 ಮಂದಿ ಅಪರಾಧಿಗಳು

ನವದೆಹಲಿ (ಪಿಟಿಐ): 'ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ 2018ರಿಂದ 2022ರ ಅವಧಿಯಲ್ಲಿ ಒಟ್ಟು 4,690 ಮಂದಿಯನ್ನು ಬಂಧಿಸಲಾಗಿದೆ. ಈ ಪೈಕಿ ಕೇವಲ 149 ಮಂದಿಯ ವಿರುದ್ಧ ಮಾತ್ರ ಆರೋಪಗಳು ಸಾಬೀತಾಗಿವೆ' ಎಂದು ಕೇಂದ್ರ ಗೃಹಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಬುಧವಾರ ಹೇಳಿದರು.

'ಈ ಕಾಯ್ದೆ ಅಡಿ 2020ರಲ್ಲಿ 1,321 ಮಂದಿಯನ್ನು ಬಂಧಿಸಲಾಗಿದೆ. ಇವರಲ್ಲಿ 80 ಮಂದಿಯ ವಿರುದ್ಧ ಆರೋಪಗಳು ಸಾಬೀತಾಗಿವೆ. ಅಂತೆಯೇ, 2019ರಲ್ಲಿ 1,948 ಬಂಧಿತರಲ್ಲಿ 34 ಹಾಗೂ 2018ರಲ್ಲಿ ಬಂಧಿಸಲಾದ 1,421 ಮಂದಿಯಲ್ಲಿ 35 ವ್ಯಕ್ತಿಗಳ ಮೇಲಿನ ಆರೋಪಗಳು ಸಾಬೀತಾಗಿವೆ' ಎಂದು ರಾಜ್ಯಸಭೆಯಲ್ಲಿ ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

'ಈ ಮೂರು ವರ್ಷದ ಅವಧಿಯಲ್ಲಿ ಉತ್ತರ ಪ್ರದೇಶದಲ್ಲೇ ಅತಿ ಹೆಚ್ಚು ಮಂದಿಯನ್ನು (1,338) ಬಂಧಿಸಲಾಗಿದೆ.

ಮಂಕಿಪಾಕ್ಸ್ ತಡೆಗೆ ಮಾರ್ಗಸೂಚಿ ಪ್ರಕಟ



ನವದೆಹಲಿ (ಪಿಟಿಐ): ದೇಶದಲ್ಲಿ ಮಂಕಿಪಾಕ್ಸ್ ವೈರಾಣು ಸೋಂಕಿನ ಪ್ರಕರಣಗಳು ದಿನೇ ದಿನೇ ಏರುತ್ತಿರುವಾಗ ಕೇಂದ್ರ ಆರೋಗ್ಯ ಸಚಿವಾಲಯ ರೋಗ ಹರಡದಂತೆ ತಡೆಗಟ್ಟಲು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದೆ.

ಸೋಂಕಿತ ವ್ಯಕ್ತಿಯೊಂದಿಗೆ ದೀರ್ಘಕಾಲದ ಅಥವಾ ವ್ಯಕ್ತಿಗತ ಪುನರಾವರ್ತಿತ ನೇರ ಸಂಪರ್ಕ ಹೊಂದಿದ್ದಾಗ ಯಾರಿಗಾದರೂ ಈ ವೈರಸ್ ಸುಲಭವಾಗಿ ತಗುಲಬಹುದು ಎಂದು ಅದು ಎಚ್ಚರಿಸಿದೆ.

ಮಂಕಿಪಾಕ್ಸ್‌ನಿಂದ ದೂರವಿರಲು ಏನು ಮಾಡಬೇಕು?, ಏನು ಮಾಡಬಾರದು? ಸಲಹೆಗಳು ಹೀಗಿವೆ...

ಏನು ಮಾಡಬೇಕು?

- ಸೋಂಕಿತರನ್ನು ಪ್ರತ್ಯೇಕ ವಾಸದಲ್ಲಿರಿಸಿದರೆ ಬೇರೆಯವರಿಗೆ ರೋಗ ಹರಡದು
- ಕೈಗಳನ್ನು ಸೋಪು, ನೀರಿನಿಂದ ತೊಳೆಯಿರಿ ಅಥವಾ ಹ್ಯಾಂಡ್ ಸ್ಯಾನಿಟೈಸರ್ ಬಳಸಿ
- ಸೋಂಕಿತರ ಹತ್ತಿರ ಹೋಗುವಾಗ ಮುಖಕ್ಕೆ ಮಾಸ್ಕ್ ಧರಿಸಿ; ಬಳಸಿ ಬಿಸಾಡುವ ಕೈಗವಸು ಧರಿಸಿ
- ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಲು ಸೋಂಕು ನಿವಾರಕಗಳನ್ನು ಬಳಸಿ

ಏನು ಮಾಡಬಾರದು?

- ಸೋಂಕು ದೃಢಪಟ್ಟವರೊಂದಿಗೆ ಬಟ್ಟೆ, ಹಾಸಿಗೆ, ಟೋಪಿ...ಇತ್ಯಾದಿ ಹಂಚಿಕೊಳ್ಳಬಾರದು
- ಸೋಂಕಿನ ಲಕ್ಷಣಗಳಿದ್ದವರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಬಾರದು
- ಸೋಂಕಿತರ ಬಟ್ಟೆಗಳು ಮತ್ತು ಸೋಂಕು ಇಲ್ಲದವರ ಬಟ್ಟೆಗಳನ್ನು ಒಟ್ಟೊಟ್ಟಿಗೆ ತೊಳೆಯಬಾರದು
- ಸೌಮ್ಯ ಲಕ್ಷಣಗಳಿದ್ದರೆ ರಕ್ತದಾನ, ಕೋಶ, ಅಂಗಾಂಗ, ಅಂಗಾಂಶ ದಾನ ಮಾಡಬಾರದು
- ಸೋಂಕಿತರು, ಶಂಕಿತ ಸೋಂಕಿತರನ್ನು ಕಳಂಕಿತರನ್ನಾಗಿ ನೋಡಬಾರದು
- ಯಾವುದೇ ವದಂತಿ ಅಥವಾ ಸುಳ್ಳುಗಳನ್ನು ನಂಬಬಾರದು

11 ಇಲಾಖೆಗಳ ನಿರ್ದಿಷ್ಟ ಹುದ್ದೆಗಳ ವೇತನ ಶ್ರೇಣಿ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ರಾಜ್ಯ ವೇತನ ಆಯೋಗ ಸಲ್ಲಿಸಿದ ವರದಿಯಂತೆ ಅರಣ್ಯ ಇಲಾಖೆಯ ಅರಣ್ಯ ರಕ್ಷಕರು, ಉಪವಲಯ ಅರಣ್ಯಾಧಿಕಾರಿ, ಆನೆ ಕಾವಾಡಿಗರು, ಮಾವುತ ಹುದ್ದೆಗಳು ಸೇರಿದಂತೆ, ಒಟ್ಟು 11 ವಿವಿಧ ಇಲಾಖೆಗಳ ನಿರ್ದಿಷ್ಟ ವೃಂದದ ಹುದ್ದೆಗಳ ವೇತನ ಶ್ರೇಣಿಯನ್ನು ಪರಿಷ್ಕರಿಸಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ. ಪರಿಷ್ಕೃತ ವೇತನ ಶ್ರೇಣಿ ಆಗಸ್ಟ್ ತಿಂಗಳಿನಿಂದಲೇ ಜಾರಿಗೆ ಬರಲಿದೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ಸಹಾಯಕ ಕ್ಯುರೇಟರ್ ಮತ್ತು ಸರ್ವೇಯರ್ಸ್, ಆರ್ಕಿಯಾಲಜಿಕ್ ಅಸಿಸ್ಟೆಂಟ್ ಶಾಸನ ತಜ್ಞರು, ಕ್ಯುರೇಟರ್ಸ್, ಸಹಾಯಕ ನಿರ್ದೇಶಕರು (ಪ್ರಾಚ್ಯವಸ್ತು), ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ ಮತ್ತು ಬುಡಕಟ್ಟು ಕಲ್ಯಾಣ ಇಲಾಖೆಗಳ ಆಶ್ರಮ ಶಾಲಾ ಶಿಕ್ಷಕರು, ಅಬಕಾರಿ ಇಲಾಖೆಯ ಅಬಕಾರಿ ಉಪ ಅಧೀಕ್ಷಕರು, ಪೊಲೀಸ್ ವಿಧಿ ವಿಜ್ಞಾನ ಪ್ರಯೋಗಾಲಯ ಇಲಾಖೆಯ ಜಮೇದಾರ್, ಪ್ರಯೋಗಾಲಯ ಸಹಾಯಕರು, ಕಾರ್ಮಿಕ ಇಲಾಖೆಯ ಕಾರ್ಮಿಕ ಅಧಿಕಾರಿ, ಕಾನೂನು ಮಾಪನಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕರು, ಮುದ್ರಣ, ಲೇಖನ, ಸಾಮಗ್ರಿ ಮತ್ತು ಪ್ರಕಟಣೆಗಳು ಇಲಾಖೆಯ ಸಹಾಯಕ ನಿರ್ದೇಶಕರು, ಭೂಮಾಪನ ಮತ್ತು ಭೂದಾಖಲೆಗಳು ಇಲಾಖೆಯ ಸಹಾಯಕ ನಿರ್ದೇಶಕರು (ಭೂದಾಖಲೆಗಳು) ಹುದ್ದೆಯ ವೇತನ ಶ್ರೇಣಿಯನ್ನು ಪರಿಷ್ಕರಿಸಲಾಗಿದೆ.

ಪಿಎಂಎಲ್‌ಎ ತಿದ್ದುಪಡಿ ಕಾಯ್ದೆ ಮರುಪರಿಶೀಲನೆಗೆ ಆಗ್ರಹ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ತಿದ್ದುಪಡಿಗಳು ಹಾಗೂ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಗಳನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್ ತೀರ್ಪಿನಿಂದ ದೀರ್ಘಕಾಲೀನ ಪರಿಣಾಮಗಳು ಉಂಟಾಗಲಿವೆ ಎಂದು ಆತಂಕ ವ್ಯಕ್ತಪಡಿಸಿರುವ ಪ್ರತಿಪಕ್ಷಗಳು, ತೀರ್ಪಿನ ಪುನರ್ ಪರಿಶೀಲನೆ ಅಗತ್ಯ ಎಂದು ಅಭಿಪ್ರಾಯಪಟ್ಟಿವೆ.

ಕಾಂಗ್ರೆಸ್, ಟಿಎಂಸಿ, ಎಎಪಿ ಸೇರಿದಂತೆ 17 ಪಕ್ಷಗಳ ನಾಯಕರು ಸಹಿ ಮಾಡಿರುವ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಗಿದೆ. 'ತಿದ್ದುಪಡಿಗಳಿಂದ ಸರ್ಕಾರಕ್ಕೆ ಇನ್ನಷ್ಟು ಬಲ ಬರಲಿದೆ. ಆದರೆ, ಇದನ್ನು ವಿರೋಧ ಪಕ್ಷಗಳನ್ನು ದುರುದ್ದೇಶಪೂರ್ವಕವಾಗಿ ಹಣಿಯಲು ಹಾಗೂ ರಾಜಕೀಯ ಷಡ್ಯಂತ್ರಕ್ಕೆ ಬಳಸಿಕೊಳ್ಳುವ ಅಪಾಯವಿದೆ' ಎಂದು ಪ್ರತಿಪಕ್ಷಗಳು ಆತಂಕ ವ್ಯಕ್ತಪಡಿಸಿವೆ. ಸುಪ್ರೀಂ ಕೋರ್ಟ್ ಬಗ್ಗೆ ಯಾವಾಗಲೂ ಅತಿಹೆಚ್ಚಿನ ಗೌರವವಿದೆ ಎಂಬುದನ್ನೂ ಪಕ್ಷಗಳು ಒತ್ತಿ ಹೇಳಿವೆ.

ಈ ತೀರ್ಪು ನೀಡುವ ಮುನ್ನ, ಹಣಕಾಸು ಕಾಯ್ದೆ ತಿದ್ದುಪಡಿಗಳ ಸಿಂಧುತ್ವವನ್ನು ಪರಿಶೀಲಿಸುತ್ತಿರುವ ವಿಸ್ತೃತ ಪೀಠದ ತೀರ್ಪು ಬರುವವರೆಗೂ ಸುಪ್ರೀಂಕೋರ್ಟ್ ಕಾಯಬಹುದಿತ್ತು ಎಂದು ಪ್ರತಿಪಕ್ಷಗಳು ಒಟ್ಟಾಗಿ ಅಭಿಪ್ರಾಯಪಟ್ಟಿವೆ. ಒಂದು ವೇಳೆ ತಿದ್ದುಪಡಿಗಳ ವಿರುದ್ಧವಾಗಿ ವಿಸ್ತೃತ ಪೀಠ ತೀರ್ಪು ನೀಡಿದರೆ, ಇಡೀ ಪ್ರಕ್ರಿಯೆ ಹಾಗೂ ಕೋರ್ಟ್‌ನ ಸಮಯ ವ್ಯರ್ಥವಾದಂತಾಗುವುದಿಲ್ಲವೇ ಎಂದು ಪ್ರಶ್ನಿಸಿವೆ.

'ಕಠಿಣ ಸ್ವರೂಪದ ತಿದ್ದುಪಡಿಗಳನ್ನು ಯಥಾವತ್ತಾಗಿ ಪ್ರಕಟಿಸಿರುವ ಕೋರ್ಟ್ ತೀರ್ಪಿನಿಂದ ಬೇಸರವಾಗಿದೆ. ಈ ಕಾಯ್ದೆಯು ಅಲ್ಪಾಯುವಾಗಲಿ ಹಾಗೂ ಸಾಂವಿಧಾನಿಕ ಅಂಶಗಳು ಮೇಲುಗೈ ಸಾಧಿಸಲಿ ಎಂದು ನಾವು ಆಶಿಸುತ್ತೇವೆ' ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಎಎಪಿ, ಎನ್‌ಸಿಪಿ, ಎಸ್‌ಪಿ, ಶಿವಸೇನಾ, ಸಿಪಿಐ, ಸಿಪಿಎಂ, ಐಯುಎಂಎಲ್, ಆರ್‌ಎಸ್‌ಪಿ, ಎಂಡಿಎಂಕೆ, ಆರ್‌ಜೆಡಿ ಮತ್ತು ಆರ್‌ಎಲ್‌ಡಿ ಪಕ್ಷಗಳ ಮುಖಂಡರು ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ. ಪ್ರತಿಪಕ್ಷ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ಶರದ್ ಪವಾರ್, ರಾಮ್‌ಗೋಪಾಲ್ ಯಾದವ್, ಡೆರೆಕ್ ಒಬ್ರಿಯಾನ್, ಟಿ.ಆರ್. ಬಾಲು, ಬಿನೊಯ್ ವಿಶ್ವಂ, ಕಪಿಲ್ ಸಿಬಲ್ ಹಾಗೂ ಇತರರೂ ಸಹಿ ಹಾಕಿದ್ದಾರೆ.

ಸರ್ಕಾರದಿಂದ ವಾಲ್ಮೀಕಿ ಶ್ರೀಗಳಿಗೆ ಅವಮಾನ: ಎಚ್‌ಡಿಕೆ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಧರಣಿ ನಡೆಸುತ್ತಿರುವ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರ ಬೇಡಿಕೆಯನ್ನು ಕಡೆಗಣಿಸುವ ಮೂಲಕ ರಾಜ್ಯ ಸರ್ಕಾರ ಅವರಿಗೆ ಅವಮಾನ ಮಾಡುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ವಾಲ್ಮೀಕಿ ಸ್ವಾಮೀಜಿ ಧರಣಿ ನಡೆಸುತ್ತಿರುವ ಸ್ಥಳಕ್ಕೆ ಬುಧವಾರ ಭೇಟಿನೀಡಿ ಅವರೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕುಮಾರಸ್ವಾಮಿ, '175 ದಿನಗಳಿಂದ ಸ್ವಾಮೀಜಿ ಧರಣಿ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಅಥವಾ ಯಾವುದೇ ಸಚಿವರು ಈವರೆಗೂ ಅವರನ್ನು ಭೇಟಿಮಾಡಿ ಚರ್ಚಿಸಿಲ್ಲ. ಸರ್ಕಾರವೊಂದು ಸ್ವಾಮೀಜಿ ಒಬ್ಬರನ್ನು ನಡೆಸಿಕೊಳ್ಳುವ ರೀತಿ ಇದೇನಾ' ಎಂದು ಪ್ರಶ್ನಿಸಿದರು.

'ಹಿಂದೆ ಬಿಜೆಪಿಯ ಕೆಲವು ನಾಯಕರು ವಾಲ್ಮೀಕಿ ಸ್ವಾಮೀಜಿಯವರನ್ನು ನನ್ನ ನೇತೃತ್ವದ ಸರ್ಕಾರದ ವಿರುದ್ಧ ಎತ್ತಿ ಕಟ್ಟಿದ್ದರು. ಈಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಸರ್ಕಾರದ ಕಡೆಯಿಂದ ಯಾರೂ ಸ್ವಾಮೀಜಿಯವರ ಜತೆ ಚರ್ಚಿಸಿಲ್ಲ. ತಕ್ಷಣವೇ ಸ್ವಾಮೀಜಿ ಜತೆ ಮಾತುಕತೆ ನಡೆಸಿ, ಧರಣಿ ಅಂತ್ಯಗೊಳಿಸಲು ಕ್ರಮ ಕೈಗೊಳ್ಳಬೇಕು' ಎಂದು ಕುಮಾರಸ್ವಾಮಿ ಒತ್ತಾಯಿಸಿದರು.

ಶಾಸಕ ರಾಜಾ ವೆಂಕಟಪ್ಪ ನಾಯಕ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಎಚ್.ಎಂ. ರಮೇಶ್ ಗೌಡ ಇದ್ದರು.

ಬ್ರಿಟನ್ ವಿದ್ಯಾರ್ಥಿವೇತನಕ್ಕೆ ಅರ್ಜಿ

ಬೆಂಗಳೂರು: ಬ್ರಿಟನ್ ಸರ್ಕಾರದ ಜಾಗತಿಕ ವಿದ್ಯಾರ್ಥಿವೇತನ ಕಾರ್ಯಕ್ರಮವಾದ, 'ಚೀವನಿಂಗ್ ವಿದ್ಯಾರ್ಥಿವೇತನ ಮತ್ತು ಫೆಲೋಶಿಪ್'ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸುಸ್ಥಿರ ಅಭಿವೃದ್ಧಿ, ಹವಾಮಾನ ಬದಲಾವಣೆ, ಶುದ್ಧ ಇಂಧನ, ತಂತ್ರಜ್ಞಾನ, ಸೈಬರ್ ಭದ್ರತೆ, ಕೃತಕ ಬುದ್ಧಿಮತ್ತೆ, ಅನ್ವೇಷಣೆ, ನಗರಾಭಿವೃದ್ಧಿ, ಶಿಕ್ಷಣ, ಸಾರ್ವಜನಿಕ ನೀತಿ, ಕಾನೂನು, ವಿದೇಶಾಂಗ ನೀತಿ, ಮಾಧ್ಯಮ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅಧ್ಯಯನ ನಡೆಸಲು ಈ ಕಾರ್ಯಕ್ರಮವು ಅನುವು ಮಾಡಿಕೊಡುತ್ತದೆ.

ನಾಗರಿಕರು, ಉದ್ಯೋಗಿಗಳು, ಸರ್ಕಾರಿ ನೌಕರರು–ಅಧಿಕಾರಿಗಳು, ಮಾಧ್ಯಮ ಪ್ರತಿನಿಧಿಗಳು, ಶಿಕ್ಷಣ ತಜ್ಞರು ಅರ್ಜಿ ಸಲ್ಲಿಸಬಹುದು. ವಯೋಮಿತಿಯ ನಿರ್ಬಂಧವಿಲ್ಲ.

ವಿದ್ಯಾರ್ಥಿವೇತನ ಕಾರ್ಯಕ್ರಮವು ಒಂದು ವರ್ಷದ ಅವಧಿಯಾಗಿದ್ದು, ಆಯ್ಕೆಯಾದ ವಿದ್ಯಾರ್ಥಿಗಳು ಬ್ರಿಟನ್ ವಿಶ್ವವಿದ್ಯಾಲಯದಲ್ಲಿ ಒಂದು ವರ್ಷದ ಸ್ನಾತಕೋತ್ತರ ಪದವಿ ಕೋರ್ಸ್‌ನಲ್ಲಿ ಅಧ್ಯಯನ ಮಾಡಬೇಕಾಗುತ್ತದೆ. ಫೆಲೋಶಿಪ್ ಕಾರ್ಯಕ್ರಮಕ್ಕೆ ಆಯ್ಕೆಯಾದವರು ಬ್ರಿಟನ್ ವಿಶ್ವವಿದ್ಯಾಲಯಗಳಲ್ಲಿ 8–11 ವಾರಗಳ ಕೋರ್ಸ್‌ಗಳಲ್ಲಿ ಅಧ್ಯಯನ ನಡೆಸಬೇಕಾಗುತ್ತದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆಗಸ್ಟ್ 2ರಿಂದಲೇ ಅವಕಾಶ ನೀಡಲಾಗಿದೆ.

ಹೆಚ್ಚಿನ ಮಾಹಿತಿಗೆ www.chevening.org/scholarship/india/ ಜಾಲತಾಣಕ್ಕೆ ಭೇಟಿ ನೀಡಬಹುದು.

ಪಾನ್ಸರೆ ಹತ್ಯೆ ಪ್ರಕರಣ ಎಟಿಎಸ್‌ಗೆ

ಮುಂಬೈ (ಪಿಟಿಐ): ಹೋರಾಟಗಾರ ಗೋವಿಂದ ಪಾನ್ಸರೆ ಹತ್ಯೆ ಪ್ರಕರಣದ ತನಿಖೆಯನ್ನು ಮಹಾರಾಷ್ಟ್ರ ಸಿಐಡಿಯಿಂದ ಎಟಿಎಸ್‌ಗೆ ವರ್ಗಾವಣೆ ಮಾಡಲಾಗಿದೆ. ಈ ಸಂಬಂಧ ಬಾಂಬೆ ಹೈಕೋರ್ಟ್ ಬುಧವಾರ ಆದೇಶ ಹೊರಡಿಸಿದೆ.

ಮಹಾರಾಷ್ಟ್ರ ಸಿಐಡಿಯ ವಿಶೇಷ ತನಿಖಾ ತಂಡವು (ಎಸ್‌ಐಟಿ) ಈವರೆಗೂ ಪ್ರಕರಣದ ತನಿಖೆ ನಡೆಸುತ್ತಿತ್ತು.

'ತನಿಖೆಯ ಹೊಣೆಯನ್ನು ಸಿಐಡಿಯಿಂದ ಎಟಿಎಸ್‌ಗೆ ವರ್ಗಾಯಿಸುವಂತೆ ಪಾನ್ಸರೆ ಕುಟುಂಬದವರು ಮಾಡಿರುವ ಮನವಿಯನ್ನು ನಾವು ಪುರಸ್ಕರಿಸುತ್ತಿದ್ದೇವೆ' ಎಂದು ನ್ಯಾಯಮೂರ್ತಿ ರೇವತಿ ಮೋಹಿತೆ ಡೆರೆ ಹಾಗೂ ಶರ್ಮಿಳಾ ದೇಶಮುಖ್ ಅವರನ್ನೊಳಗೊಂಡ ವಿಭಾಗೀಯ ಪೀಠ ಬುಧವಾರ ತಿಳಿಸಿದೆ.

'ಎಟಿಎಸ್ ಕೂಡ ರಾಜ್ಯ ಸರ್ಕಾರದ ಅಧೀನಕ್ಕೊಳಪಟ್ಟಿರುವ ತನಿಖಾ ಸಂಸ್ಥೆ. ಪ್ರಕರಣದ ತನಿಖೆಯ ಹೊಣೆಯನ್ನು ಆ ಸಂಸ್ಥೆಗೆ ವರ್ಗಾಯಿಸಲು ನಮ್ಮದೇನೂ ತಕರಾರಿಲ್ಲ. ಎಸ್‌ಐಟಿಯ ಕೆಲ ಅಧಿಕಾರಿಗಳು ಎಟಿಎಸ್ ಜೊತೆ ಇದ್ದು ತನಿಖೆಗೆ ಅಗತ್ಯ ಸಹಕಾರ ನೀಡಲಿದ್ದಾರೆ' ಎಂದು ಎಸ್‌ಐಟಿ ಪರ ವಕೀಲರು ನ್ಯಾಯಾಲಯಕ್ಕೆ ಹೇಳಿದರು.



ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಅಸ್ಸಾಂ ತೃಣಮೂಲ ಕಾಂಗ್ರೆಸ್‌ನ ಮಹಿಳಾ ಘಟಕದ ಕಾರ್ಯಕರ್ತರು ಗುವಾಹಟಿಯಲ್ಲಿ ಬುಧವಾರ ಖಾಲಿ ತಟ್ಟೆಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ನ್ಯಾಯಾಂಗ ಬಂಧನಕ್ಕೆ ಶಂಕಿತ ಉಗ್ರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿ ವಶದಲ್ಲಿದ್ದ ಶಂಕಿತ ಉಗ್ರರಾದ ಅಖ್ತರ್ ಹುಸೇನ್ ಲಷ್ಕರ್ ಹಾಗೂ ಅಬ್ದುಲ್ ಅಲೀಂ ಮಂಡಲ್‌ನನ್ನು ಬುಧವಾರ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

'ಮಂಗಳವಾರಕ್ಕೆ 10 ದಿನಗಳ ಕಸ್ಟಡಿ ಅವಧಿ ಮುಕ್ತಾಯವಾಗಿದ್ದು, ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಈ ಮಧ್ಯೆ ಮಂಡಲ್, ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಬುಧವಾರ ವಿಚಾರಣೆಗೆ ಬರಲಿದೆ' ಎಂದು ಮೂಲಗಳು ತಿಳಿಸಿವೆ.

'ಅಲ್ ಕೈದಾ' ಉಗ್ರ ಸಂಘಟನೆ ಸೇರಲು ಮುಂದಾಗಿದ್ದ ಹಾಗೂ ಆ ನಿಟ್ಟಿನಲ್ಲಿ ಕಾರ್ಯ ಚಟುವಟಿಕೆ ನಡೆಸುತ್ತಿದ್ದ ಆರೋಪದಲ್ಲಿ ಲಷ್ಕರ್‌ನನ್ನು ತಿಲಕ್‌ನಗರ ಹಾಗೂ ಮಂಡಲ್‌ನನ್ನು ಚೆನ್ನೈನಲ್ಲಿ ಬಂಧಿಸಿ, ವಿಚಾರಣೆ ನಡೆಸಿದ್ದರು.

'ಅಫ್ಗಾನಿಸ್ತಾನಕ್ಕೆ ಮತ್ತಷ್ಟು ಯುವಕರೊಂದಿಗೆ ತೆರಳಲು ಬಂಧಿತರು ಚಟುವಟಿಕೆ ನಡೆಸುತ್ತಿದ್ದರು. ಪಾಕ್ ಹಾಗೂ ಅಫ್ಗನ್‌ನ ಉಗ್ರ ಸಂಘಟನೆಯ ಮುಖಂಡರ ಜತೆಗೆ ವಾಟ್ಸ್‌ಆ್ಯಪ್‌ನಲ್ಲಿ ಚರ್ಚಿಸಿರುವುದು ವಿಚಾರಣೆ ವೇಳೆ ಗೊತ್ತಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಆಕ್ಷೇಪ

ಡಿ.ಪಿಯಲ್ಲಿ ತಿರಂಗ ಹಿಡಿದ ನೆಹರೂ ಚಿತ್ರ



ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮೊದಲಾದವರು ಸಾಮಾಜಿಕ ಜಾಲತಾಣಗಳ ತಮ್ಮ ಪ್ರೊಫೈಲ್‌ನ ಡಿ.ಪಿಯಲ್ಲಿ (ಡಿಸ್‌ಪ್ಲೇ ಪಿಕ್ಚರ್) ತ್ರಿವರ್ಣಧ್ವಜ ಹಿಡಿದಿರುವ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಚಿತ್ರವನ್ನು ಬಳಸಿಕೊಂಡಿದ್ದಾರೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಬಿಜೆಪಿ, ರಾಹುಲ್ ಗಾಂಧಿ ಅವರು ತಮ್ಮ ಕುಟುಂಬದ ಆಚೆಗೂ ಯೋಚಿಸಲಿ ಎಂದಿದೆ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ತಮ್ಮ ತಮ್ಮ ಚಿತ್ರಗಳನ್ನು ಡಿ.ಪಿಯಲ್ಲಿ ಹಾಕಿಕೊಳ್ಳಲು ಅವಕಾಶ ನೀಡಬೇಕು ಎಂದು ಸಲಹೆ ನೀಡಿದೆ.

ಪ್ರಧಾನಿ ಹಾಗೂ ಹಲವು ಬಿಜೆಪಿ ಮುಖಂಡರು ತಮ್ಮ ಸಾಮಾಜಿಕ ಜಾಲತಾಣಗಳ ಪ್ರೊಫೈಲ್‌ನಲ್ಲಿ ತ್ರಿವರ್ಣಧ್ವಜದ ಚಿತ್ರವನ್ನು ಬಳಸಿದ ಬಳಿಕ, ಕಾಂಗ್ರೆಸ್ ಮುಖಂಡರು ತ್ರಿವರ್ಣ ಧ್ವಜ ಹಿಡಿದಿರುವ ನೆಹರೂ ಅವರ ಚಿತ್ರವನ್ನು ಬಳಸಿದ್ದರು. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, 'ಪ್ರತೀ ಮನೆಯಲ್ಲೂ ತ್ರಿವರ್ಣಧ್ವಜ' ಎಂಬ ಸರ್ಕಾರದ ಕಾರ್ಯಕ್ರಮವು ರಾಜಕೀಯವನ್ನು ಮೀರಿದ್ದು. ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳೂ ಈ ಕಾರ್ಯಕ್ರಮ ಬೆಂಬಲಿಸಬೇಕೇ ವಿನಾ ರಾಜಕೀಯಗೊಳಿಸಬಾರದು' ಎಂದು ಸಲಹೆ ನೀಡಿದರು.

'ಎಲ್ಲದರಲ್ಲೂ ವಂಶಾಡಳಿತದ ರಾಜಕೀಯ ಮಾಡಬಾರದು. ಕಾಂಗ್ರೆಸ್ ಮುಖಂಡರು ತಮ್ಮ ಡಿ.ಪಿಯಲ್ಲಿ ದೇಶದ ಮೊದಲ ಪ್ರಧಾನಿ ನೆಹರೂ ಅವರ ಚಿತ್ರ ಬಳಸಿದ್ದಾರೆ. ತ್ರಿವರ್ಣಧ್ವಜವು ಕಡು ಬಡವರನ್ನೂ ಒಳಗೊಂಡಂತೆ ದೇಶದ 135 ಕೋಟಿ ಜನರಿಗೂ ಸೇರಿದ್ದು' ಎಂದು ಪಾತ್ರಾ ಹೇಳಿದ್ದಾರೆ.

'ಯಾರು ಬೇಕಾದರೂ ತ್ರಿವರ್ಣಧ್ವಜ ಹಿಡಿದ ಚಿತ್ರವನ್ನು ಡಿ.ಪಿಯಲ್ಲಿ ಬಳಸಬಹುದು. ರಾಹುಲ್ ಅವರ ಕುಟುಂಬ ಮೊದಲಿನಿಂದಲೂ ರಾಜಕೀಯದಲ್ಲಿದೆ. ರಾಹುಲ್ ಗಾಂಧಿ ಅವರು ಇತರರಿಗೂ ಅವಕಾಶ ನೀಡಬೇಕು. ಪಕ್ಷದ ಕಾರ್ಯಕರ್ತರು ತಮ್ಮ ತಮ್ಮ ಚಿತ್ರಗಳನ್ನು ಡಿ.ಪಿಯಲ್ಲಿ ಬಳಸಿಕೊಂಡರೆ ಚೆನ್ನಾಗಿರುತ್ತದೆ ಎಂದು ಪಾತ್ರಾ ಹೇಳಿದ್ದಾರೆ. ಸಾಮಾನ್ಯ ವ್ಯಕ್ತಿಯೊಬ್ಬ ತ್ರಿವರ್ಣ ಧ್ವಜವನ್ನು ಎತ್ತಿಹಿಡಿದರೆ, ಅದು ದೇಶದ ಗೌರವವನ್ನು ಹೆಚ್ಚಿಸುತ್ತದೆ ಎಂದರು.

ನಾಗಪುರ ಕಚೇರಿ ಆದೇಶ ಪಾಲಿಸುತ್ತದೆಯೇ: ಜೈರಾಮ್ ಪ್ರಶ್ನೆ

ಸಾಮಾಜಿಕ ಜಾಲತಾಣಗಳ ಪ್ರೊಫೈಲ್ ಡಿ.ಪಿಯಲ್ಲಿ ತ್ರಿವರ್ಣಧ್ವಜ ಹಿಡಿದಿರುವ ನೆಹರೂ ಅವರ ಚಿತ್ರವನ್ನು ಬಳಸಿರುವ ಕಾಂಗ್ರೆಸ್ ಮುಖಂಡರನ್ನು ಟೀಕಿಸಿರುವ ಬಿಜೆಪಿಗೆ ಕಾಂಗ್ರೆಸ್ ತಿರುಗೇಟು ನೀಡಿದೆ. '52 ವರ್ಷಗಳ ಕಾಲ ನಾಗಪುರದ ಕಚೇರಿಯಲ್ಲಿ ತ್ರಿವರ್ಣಧ್ವಜ ಹಾರಿಸದ ಸಂಸ್ಥೆಯು, ಪ್ರಧಾನಿ ಆದೇಶವನ್ನು ಪಾಲಿಸುತ್ತದೆಯೇ' ಎಂದು ಪಕ್ಷದ ಮುಖಂಡ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

'ನಾವು ನಮ್ಮ ಪ್ರೊಫೈಲ್‌ನಲ್ಲಿ ನೆಹರೂ ಅವರು ರಾಷ್ಟ್ರಧ್ವಜ ಹಿಡಿದಿರುವ ಚಿತ್ರ ಬಳಸಿದ್ದೇವೆ. ಆದರೆ, ಪ್ರಧಾನಿ ನೀಡಿರುವ ಕರೆಯು ಅವರ ಕುಟುಂಬವನ್ನು ತಲುಪಿದಂತೆ ಕಾಣುತ್ತಿಲ್ಲ. 52 ವರ್ಷಗಳ ಕಾಲ ನಾಗಪುರದ ಕಚೇರಿಯಲ್ಲಿ ತ್ರಿವರ್ಣಧ್ವಜ ಹಾರಿಸದ ವ್ಯಕ್ತಿಗಳು ಈಗ ಪ್ರಧಾನಿ ಅವರು ನೀಡಿರುವ ಸಂದೇಶವನ್ನು ಪಾಲಿಸುತ್ತಾರೆಯೇ?' ಎಂದು ಆರ್‌ಎಸ್‌ಎಸ್ ಅನ್ನು ಉಲ್ಲೇಖಿಸಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ಆರ್‌ಎಸ್‌ಎಸ್ ಸಂಘಟನೆ ಕಚೇರಿ ಹಾಗೂ ಅದರ ಮುಖ್ಯಸ್ಥ ಮೋಹನ್ ಭಾಗವತ್ ಅವರ ಟ್ವಿಟರ್ ಖಾತೆಗಳ ಪ್ರೊಫೈಲ್ ಚಿತ್ರದ ಸ್ಕ್ರೀನ್‌ಶಾಟ್‌ಗಳನ್ನು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಸೇರಿದಂತೆ ಇತರರು ಹಂಚಿಕೊಂಡಿದ್ದು, ತ್ರಿವರ್ಣಧ್ವಜದ ಚಿತ್ರ ಬಳಸಿಲ್ಲ ಎಂಬುದನ್ನು ಬೊಟ್ಟುಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಾರ್ಗರೆಟ್ ಆಳ್ವಗೆ ಎಎಪಿ ಬೆಂಬಲ

ನವದೆಹಲಿ:ಉಪರಾಷ್ಟ್ರಪತಿ ಚುನಾವಣೆಯಲ್ಲಿ ಪ್ರತಿಪಕ್ಷಗಳ ಅಭ್ಯರ್ಥಿಯಾಗಿರುವ ಮಾರ್ಗರೆಟ್ ಆಳ್ವ ಅವರನ್ನು ಬೆಂಬಲಿಸುವುದಾಗಿ ಆಮ್ ಆದ್ಮಿ ಪಕ್ಷ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಬುಧವಾರ ಘೋಷಿಸಿವೆ. ಎನ್‌ಡಿಎ ಅಭ್ಯರ್ಥಿಯಾಗಿರುವ ಜಗದೀಪ್ ಧನಕರ್ ಅವರಿಗೆ ಬೆಂಬಲ ನೀಡುವುದಾಗಿ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಹೇಳಿದೆ.

'ನಮ್ಮ ಪಕ್ಷದ ಎಲ್ಲ ಸಂಸದರು ಆಳ್ವಾ ಅವರಿಗೆ ಮತ ನೀಡಲಿದ್ದಾರೆ. ಪಕ್ಷವು ಸರ್ವಸಮ್ಮತಿಯಿಂದ ಈ ನಿರ್ಧಾರ ಕೈಗೊಂಡಿದೆ' ಎಂದು ಎಎಪಿ ನಾಯಕ ಸಂಜಯ್ ಸಿಂಗ್ ತಿಳಿಸಿದರು.

'ಸಾರ್ವಜನಿಕ ಹಿತಾಸಕ್ತಿ ಮತ್ತು ನಮ್ಮ ಪಕ್ಷದ ಹೋರಾಟದ ದೃಷ್ಟಿಯಿಂದ ಜಗದೀಪ್ ಧನಕರ್ ಅವರನ್ನು ಬೆಂಬಲಿಸುವ ನಿರ್ಧಾರ ಮಾಡಿದ್ದು ಈ ಬಗ್ಗೆ ಬುಧವಾರ ಔಪಚಾರಿಕವಾಗಿ ಘೋಷಣೆ ಮಾಡುತ್ತಿದ್ದೇನೆ' ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಟ್ವೀಟ್ ಮಾಡಿದ್ದಾರೆ.

ಅರ್ಜಿ ಹಿಂಪಡೆದ ಸಂಜೀವ್ ಭಟ್

ನವದೆಹಲಿ (ಪಿಟಿಐ): ಪ್ರಕರಣವೊಂದರಲ್ಲಿ ತಮಗೆ ವಿಧಿಸಲಾಗಿರುವ ಜೀವಾವಧಿ ಶಿಕ್ಷೆ ರದ್ದುಗೊಳಿಸುವಂತೆ ಕೋರಿ ಗುಜರಾತ್‌ನ ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಬುಧವಾರ ಹಿಂಪಡೆದಿದ್ದಾರೆ.

ಸಂಜೀವ್ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಕಪಿಲ್ ಸಿಬಲ್ ಅವರು ಅರ್ಜಿ ಹಿಂಪಡೆಯುತ್ತಿರುವ ವಿಚಾರವನ್ನು ನ್ಯಾಯಮೂರ್ತಿ ಎಂ.ಆರ್.ಶಾ ಹಾಗೂ ಬಿ.ವಿ.ನಾಗರತ್ನ ಅವರ ಗಮನಕ್ಕೆ ತಂದರು.

'ಶಿಕ್ಷೆಯನ್ನು ಪ್ರಶ್ನಿಸಿ ಗುಜರಾತ್ ಹೈಕೋರ್ಟ್‌ನಲ್ಲೂ ಅರ್ಜಿ ಸಲ್ಲಿಸಲಾಗಿದ್ದು, ಅಲ್ಲಿ ಅದರ ವಿಚಾರಣೆ ನಡೆಯುತ್ತಿದೆ. ಹೀಗಾಗಿ ಅರ್ಜಿ ಹಿಂಪಡೆಯಲು ತೀರ್ಮಾನಿಸಿದ್ದೇವೆ. ಕಾನೂನಿನ ಪ್ರಕಾರ ತ್ವರಿತವಾಗಿ ಅರ್ಜಿಯ ವಿಚಾರಣೆ ಕೈಗೊಳ್ಳುವಂತೆ ಹೈಕೋರ್ಟ್‌ಗೆ ಸೂಚಿಸಬೇಕು' ಎಂದು ಸಿಬಲ್ ಪೀಠಕ್ಕೆ ಮನವಿ ಮಾಡಿದರು.

ಪೊಲೀಸ್ ವಶದಲ್ಲಿದ್ದಾಗಲೇ ವ್ಯಕ್ತಿಯೊಬ್ಬರು ಮೃತಪಟ್ಟಿದ್ದ ಪ್ರಕರಣದಲ್ಲಿ ಸಂಜೀವ್ ಭಟ್‌ಗೆ 2019ರ ಜೂನ್‌ನಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ಬಿಷ್ಣೋಯಿ ಇಂದು ಬಿಜೆಪಿಗೆ ಸೇರ್ಪಡೆ

ಚಂಡೀಗಡ: ಹರಿಯಾಣದ ಕಾಂಗ್ರೆಸ್ ಶಾಸಕ ಕುಲದೀಪ್ ಬಿಷ್ಣೋಯಿ ಅವರು ಬುಧವಾರ ಪಕ್ಷ ಮತ್ತು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಗುರುವಾರ ಬಿಜೆಪಿ ಸೇರಲಿದ್ದಾರೆ.

ಸ್ಮಾರಕಗಳಿಗೆ ಉಚಿತ ಪ್ರವೇಶ

ನವದೆಹಲಿ (ಪಿಟಿಐ): ಭಾರತೀಯ ಪುರಾತತ್ವ ಸರ್ವೇಕ್ಷಣೆ ಅಡಿಯಲ್ಲಿ ಬರುವ ಎಲ್ಲಾ ಸ್ಮಾರಕಗಳು ಹಾಗೂ ಪ್ರವಾಸಿತಾಣಗಳಿಗೆ ಆಗಸ್ಟ್ 5ರಿಂದ 15ರವರೆಗೆ ಉಚಿತ ಪ್ರವೇಶವನ್ನು ಕೇಂದ್ರ ಸಂಸ್ಕೃತಿ ಇಲಾಖೆ ಬುಧವಾರ ಘೋಷಿಸಿದೆ.

'ಉಚಿತ ಕೊಡುಗೆ ಘೋಷಣೆ: ಚರ್ಚಿಸಿ ವರದಿ ನೀಡಿ'

ನವದೆಹಲಿ: 'ಚುನಾವಣೆ ವೇಳೆ ರಾಜಕೀಯ ಪಕ್ಷಗಳು ಘೋಷಿಸುವ ಉಚಿತ ಕೊಡುಗೆಗಳು ದೇಶದ ಆರ್ಥಿಕತೆಗೆ ಉತ್ತಮವೇ, ಇಲ್ಲವೇ ಎಂಬ ಬಗ್ಗೆ ಸಾಂವಿಧಾನಿಕ ಸಂಸ್ಥೆಗಳು, ವಿವಿಧ ರಾಜಕೀಯ ಪಕ್ಷಗಳು ಮತ್ತು ಕೇಂದ್ರ ಸರ್ಕಾರವು ಚರ್ಚಿಸಿ ವರದಿ ನೀಡಬೇಕು' ಎಂದು ಸುಪ್ರೀಂ ಕೋರ್ಟ್ ಬುಧವಾರ ಸಲಹೆ ನೀಡಿದೆ.

ನೀತಿ ಆಯೋಗ, ಹಣಕಾಸು ಆಯೋಗ, ಆರ್‌ಬಿಐ, ಚುನಾವಣಾ ಆಯೋಗಕ್ಕೆ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಕೃಷ್ಣ ಮುರಾರಿ ಅವರಿದ್ದ ಪೀಠವು ಸಲಹೆ ನೀಡಿದೆ. ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸುಪ್ರಿಂ ಕೋರ್ಟ್‌ಗೆ ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.



❦ ಸುಭಾಷಿತ ❦

ರೂಪ ಕಣ್ಣುಗಳಿಗೆ ಮಾತ್ರ ಸೀಮಿತ. ಗುಣ ಆತ್ಮದವರೆಗೆ ತಲುಪುವ ಸಾಧನ.

-ತ್ರಿವೇಣಿ

ಬಿಎಸ್‌ಎನ್‌ಎಲ್‌ಗೆ ನೆರವು ಅಗತ್ಯವಾಗಿದ್ದ ಉಪಕ್ರಮ

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ಪುನಶ್ಚೇತನಕ್ಕಾಗಿ ಕೇಂದ್ರ ಸರ್ಕಾರವು ಒಟ್ಟು ₹ 1.64 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್ ಘೋಷಣೆ ಮಾಡಿದೆ. ಸರ್ಕಾರಿ ಸ್ವಾಮ್ಯದ, ನಷ್ಟದಲ್ಲಿರುವ ಈ ಕಂಪನಿಗೆ ಇಷ್ಟು ಮೊತ್ತ ನೀಡಲು ಕೇಂದ್ರ ಸಂಪುಟವು ಒಪ್ಪಿಗೆ ನೀಡಿರುವುದು ಸ್ವಾಗತಾರ್ಹ. ಕಂಪನಿಯ ಈಗಿನ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ, ಈ ಪ್ಯಾಕೇಜ್ ಮೂಲಕ ಸಾಧಿಸಲು ಹೊರಟಿರುವ ಗುರಿಯು ಬಹುದೊಡ್ಡದು ಎಂದು ಅನ್ನಿಸುತ್ತದೆ. ಬಿಎಸ್‌ಎನ್‌ಎಲ್ ಕಂಪನಿಯನ್ನು 2026–27ರೊಳಗೆ ಲಾಭದಾಯಕ ಆಗಿಸುವ ಉದ್ದೇಶ ಕೇಂದ್ರಕ್ಕೆ ಇದೆ. ಈ ಪ್ಯಾಕೇಜ್ ಅನ್ನು ವಾಸ್ತವದಲ್ಲಿ ಇನ್ನೂ ಮೊದಲೇ ಘೋಷಣೆ ಮಾಡಿದ್ದಿದ್ದರೆ ಒಳ್ಳೆಯದಿತ್ತು. 2019ರಲ್ಲಿ ಕೇಂದ್ರ ಸರ್ಕಾರವು ಬಿಎಸ್‌ಎನ್‌ಎಲ್ ಕಂಪನಿಗಾಗಿ ₹ 74 ಸಾವಿರ ಕೋಟಿ ಮೊತ್ತದ ಪ್ಯಾಕೇಜ್ ಘೋಷಣೆ ಮಾಡಿತ್ತು. ಇದು ಒಂದಿಷ್ಟು ನೆರವಿಗೆ ಬಂದಿದೆ. ಪ್ಯಾಕೇಜ್‌ನ ಭಾಗವಾಗಿದ್ದ ಸಾಲದ ಮರುಹೊಂದಾಣಿಕೆ ಕ್ರಮಗಳು ಬಿಎಸ್‌ಎನ್‌ಎಲ್‌ಗೆ ಪ್ರಯೋಜನ ತಂದುಕೊಟ್ಟಿವೆ. ಹೀಗಿದ್ದರೂ, ಕಂಪನಿಗೆ ಇನ್ನಷ್ಟು ನೆರವಿನ ಅಗತ್ಯ ಇದೆ. ಬಿಎಸ್‌ಎನ್‌ಎಲ್ ಕಳೆದ ಹಲವು ವರ್ಷಗಳಿಂದ ಗ್ರಾಹಕರನ್ನು ಕಳೆದುಕೊಳ್ಳುತ್ತ ಬಂದಿದೆ. ಬ್ರಾಡ್‌ಬ್ಯಾಂಡ್ ಮಾರುಕಟ್ಟೆಯಲ್ಲಿ ರಿಲಯನ್ಸ್ ಜಿಯೊ ಕಂಪನಿಯು ಶೇಕಡ 52.18ರಷ್ಟು ಮಾರುಕಟ್ಟೆ ಪಾಲು ಹೊಂದಿದೆ. ಏರ್‌ಟೆಲ್ ಕಂಪನಿಯು ಶೇ 27.32ರಷ್ಟು ಪಾಲು ಹೊಂದಿದೆ. ಆದರೆ, ಈ ಮಾರುಕಟ್ಟೆಯಲ್ಲಿ ಬಿಎಸ್‌ಎನ್‌ಎಲ್ ಪಾಲು ಶೇ 3.21 ಮಾತ್ರ. ಕಳೆದ ಮೂರು ವರ್ಷಗಳಲ್ಲಿ ಕಂಪನಿ ಅನುಭವಿಸಿರುವ ಒಟ್ಟು ನಷ್ಟವು ಸರಿಸುಮಾರು ₹ 30 ಸಾವಿರ ಕೋಟಿ ಆಗುತ್ತದೆ. 2018–19ರಲ್ಲಿ ವಾರ್ಷಿಕ ನಷ್ಟ ₹ 13,804 ಕೋಟಿ ಇದ್ದುದು 2020–21ರಲ್ಲಿ ₹ 7,453 ಕೋಟಿಗೆ ಇಳಿಕೆ ಆಗಿದೆ. ಹೀಗಿದ್ದರೂ, ಈ ಕಂಪನಿಯು ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಹೊರೆಯೇ ಆಗಿದೆ.



ಕೇಂದ್ರ ಸರ್ಕಾರ ಘೋಷಣೆ ಮಾಡಿರುವ ಪ್ಯಾಕೇಜ್ ಅನ್ನು ಅತ್ಯಂತ ದಕ್ಷವಾಗಿ ಬಳಕೆ ಮಾಡಿಕೊಳ್ಳುವುದು ಹಾಗೂ ಕಂಪನಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಬಹುದೊಡ್ಡ ಸವಾಲು

ಬಿಎಸ್‌ಎನ್‌ಎಲ್ ಕಂಪನಿಗೆ ಸರ್ಕಾರದ ನೆರವಿನ ಅಗತ್ಯ ಇದೆ. ಏಕೆಂದರೆ, ಇದು ಸರ್ಕಾರದ ಉಪಸ್ಥಿತಿಯ ಅಗತ್ಯ ಇರುವ ಮಹತ್ವದ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ದೇಶದ ದೂರಸಂಪರ್ಕ ವಲಯದಲ್ಲಿ ಈಗ ಎರಡು ಪ್ರಮುಖ ಕಂಪನಿಗಳ ನಡುವೆ ನೇರ ಪೈಪೋಟಿ ಇದೆ. ಈ ವಲಯದಲ್ಲಿ ಆರೋಗ್ಯಕರ ಸ್ಪರ್ಧೆ ಇರಬೇಕು ಎಂದಾದರೆ ಬಿಎಸ್‌ಎನ್‌ಎಲ್ ಗಟ್ಟಿಯಾಗಿ ನೆಲೆ ಕಂಡುಕೊಳ್ಳುವ ಅಗತ್ಯ ಖಂಡಿತ ಇದೆ. ದೇಶದಲ್ಲಿನ ಡಿಜಿಟಲ್ ಕಂದಕವನ್ನು ಮುಚ್ಚಬೇಕು ಎಂದಾದರೆ ಅದಕ್ಕೂ ಬಿಎಸ್‌ಎನ್‌ಎಲ್‌ನ ನೆರವು ಬೇಕು. ಖಾಸಗಿ ಕಂಪನಿಗಳು ಪ್ರವೇಶ ಮಾಡಲು ಹಿಂದೇಟು ಹಾಕುವ ಗ್ರಾಮೀಣ ಮಾರುಕಟ್ಟೆಗಳಲ್ಲಿ, ನಗರಗಳಿಂದ ತೀರಾ ದೂರದಲ್ಲಿನ ಮಾರುಕಟ್ಟೆಗಳಲ್ಲಿ ಬಿಎಸ್‌ಎನ್‌ಎಲ್‌ಗೆ ಈಗಲೂ ಗಣನೀಯ ಸಂಖ್ಯೆಯಲ್ಲಿ ಗ್ರಾಹಕರು ಇದ್ದಾರೆ. ಗ್ರಾಮೀಣ ಭಾಗಗಳಲ್ಲಿ ಬಿಎಸ್‌ಎನ್‌ಎಲ್ ತನ್ನ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ವಿನಿಯೋಗ ಮಾಡಿದರೆ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರನ್ನು ಸಂಪಾದಿಸಬಹುದು ಎಂಬ ವಾದ ಇದೆ. ಈ ವಾದದಲ್ಲಿ ಖಂಡಿತ ಹುರುಳಿದೆ. ಮಹತ್ವಾಕಾಂಕ್ಷೆಯ ಭಾರತ್‌ನೆಟ್ ಯೋಜನೆಯನ್ನು 2025ರೊಳಗೆ ಅನುಷ್ಠಾನಕ್ಕೆ ತರುವ ಗುರಿಯನ್ನು ಬಿಎಸ್‌ಎನ್‌ಎಲ್ ಹೊಂದಿದೆ. ಕೇಂದ್ರ ಸರ್ಕಾರವು ಈಗ ಘೋಷಣೆ ಮಾಡಿರುವ ಪುನಶ್ಚೇತನ ಪ್ಯಾಕೇಜ್‌ನ ಭಾಗವಾಗಿ, ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿಮಿಟೆಡ್ (ಬಿಬಿಎನ್‌ಎಲ್) ಕಂಪನಿಯನ್ನು ಬಿಎಸ್‌ಎನ್‌ಎಲ್ ಜೊತೆ ವಿಲೀನ ಮಾಡಲಾಗುತ್ತದೆ. ಬಿಬಿಎನ್‌ಎಲ್‌ಗೆ ಭಾರತ್‌ನೆಟ್ ಫೈಬರ್ ನೆಟ್‌ವರ್ಕ್ ಜಾಲ ರೂಪಿಸುವ ಹೊಣೆ ಇದೆ. ಇದು ದೇಶದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲಿದೆ. ನಕ್ಸಲ್ ಸಮಸ್ಯೆ ಇರುವ ಪ್ರದೇಶಗಳು ಸೇರಿದಂತೆ ಅತ್ಯಂತ ದುರ್ಗಮ ಪ್ರದೇಶಗಳಲ್ಲಿಯೂ ಬ್ರಾಡ್‌ಬ್ಯಾಂಡ್ ಸೌಲಭ್ಯ ದೊರೆಯುವಂತೆ ಮಾಡಲಿದೆ.

ಕೇಂದ್ರ ಸರ್ಕಾರದ ಪ್ಯಾಕೇಜ್‌ನಲ್ಲಿ ಎರಡು ಭಾಗಗಳು ಇವೆ. ಅವುಗಳಲ್ಲಿ ಒಂದು ನಗದು ರೂಪದಲ್ಲಿ ಸಿಗುವ ₹ 43,964 ಕೋಟಿ. ಇತರ ನೆರವುಗಳ ರೂಪದಲ್ಲಿ ಸಿಗುವ ₹ 1.20 ಲಕ್ಷ ಕೋಟಿ ಇನ್ನೊಂದು ಭಾಗ. ಇವು ನಾಲ್ಕು ವರ್ಷಗಳ ಅವಧಿಯಲ್ಲಿ ಸಿಗಲಿವೆ. ಬಿಎಸ್‌ಎನ್‌ಎಲ್ ಸೇವೆಗಳನ್ನು ಉನ್ನತೀಕರಿಸಲು, ಕಂಪನಿಗೆ ತರಂಗಾಂತರ ಹಂಚಿಕೆ ಮಾಡಲು, ಕಂಪನಿಯ ಮೇಲಿನ ಹಣಕಾಸಿನ ಒತ್ತಡವನ್ನು ಕಡಿಮೆ ಮಾಡಲು ಹಾಗೂ ಫೈಬರ್ ಜಾಲವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಲು ನೆರವನ್ನು ಬಳಸಿಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರವು ಹೇಳಿದೆ. ಕೇಂದ್ರವು ಘೋಷಣೆ ಮಾಡಿರುವ ಪ್ಯಾಕೇಜ್ ಅನ್ನು ಅತ್ಯಂತ ದಕ್ಷವಾಗಿ ಬಳಕೆ ಮಾಡಿಕೊಳ್ಳುವುದು ಹಾಗೂ ಕಂಪನಿಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಬಹುದೊಡ್ಡ ಸವಾಲು. ನೆರವಿನ ಹಣವನ್ನು ಬಹಳ ವೃತ್ತಿಪರವಾಗಿ ಬಳಕೆ ಮಾಡಿಕೊಳ್ಳಬೇಕು. ಕಂಪನಿಯ ಸೇವೆಗಳನ್ನು ಉತ್ತಮಪಡಿಸಲು ಒಳ್ಳೆಯ ತಾಂತ್ರಿಕ ನೆರವು ಬೇಕು. ಮೊದಲು 1.65 ಲಕ್ಷ ಇದ್ದ ಕಂಪನಿಯ ಕೆಲಸಗಾರರ ಸಂಖ್ಯೆಯು ಈಗ 64,536ಕ್ಕೆ ಇಳಿಕೆ ಆಗಿದೆ. ಆದರೆ, ತಂತ್ರಜ್ಞಾನವನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆ. ದೂರಸಂಪರ್ಕ ವಲಯದ ಖಾಸಗಿ ಕಂಪನಿಗಳು ಐದನೆಯ ತಲೆಮಾರಿನ (5ಜಿ) ತರಂಗಾಂತರಗಳನ್ನು ಹರಾಜು ಮೂಲಕ ಖರೀದಿ ಮಾಡಿರುವ ಸಂದರ್ಭದಲ್ಲಿ, ತನ್ನ ಗ್ರಾಹಕರಿಗೆ 4ಜಿ ಸೇವೆಗಳನ್ನು ಯಾವಾಗ ಒದಗಿಸುವುದು ಎಂಬ ಚಿಂತನೆ ಬಿಎಸ್‌ಎನ್‌ಎಲ್‌ನಲ್ಲಿ ನಡೆದಿದೆ. ಇದು ಈ ಕಂಪನಿಯು ಸೇವೆಗಳನ್ನು ಒದಗಿಸುವ ವಿಚಾರದಲ್ಲಿ ಅದೆಷ್ಟು ಹಿಂದಕ್ಕೆ ಉಳಿದಿದೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ತೋರಿಸುತ್ತಿದೆ. ಇವನ್ನೆಲ್ಲ ಗಮನಿಸಿದರೆ, ಹಣಕಾಸಿನ ವಿಚಾರದಲ್ಲಿ ಬಿಎಸ್‌ಎನ್‌ಎಲ್ ತಕ್ಷಣಕ್ಕೆ ಬಹಳ ದೊಡ್ಡ ಸಾಧನೆಯನ್ನು ತೋರಲಿದೆ ಎಂದು ನಿರೀಕ್ಷೆ ಮಾಡುವುದು ಅತಿಯಾಗಬಹುದು. ಹೀಗಿದ್ದರೂ ಈ ಕಂಪನಿಯ ಬೆಂಬಲಕ್ಕೆ ಸರ್ಕಾರವು ನಿಲ್ಲಬೇಕು.

ದಿನದ ಟ್ವೀಟ್

ದೇವದತ್ತ ಎಲ್ಲಿದ್ದಾರೆ?



ಕರ್ನಾಟಕದ ಅಪಾರ ಪ್ರತಿಭಾವಂತ ಕ್ರಿಕೆಟಿಗ ದೇವದತ್ತ ಪಡಿಕ್ಕಲ್ ಎಲ್ಲಿದ್ದಾರೆ? ಎತ್ತರದ ಮತ್ತು ಕೌಶಲಯುತ ಆಟಗಾರ ಐಪಿಎಲ್‌ನಲ್ಲಿ ಅಮೋಘ ಬ್ಯಾಟಿಂಗ್ ಮಾಡಿದ್ದರು. ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯ ದೃಷ್ಟಿಯಲ್ಲಿ ಈ ಆಟಗಾರನಿಲ್ಲವೇ? ರಾಜ್ಯ ತಂಡದ ಆಯ್ಕೆಗಾರರೂ ಈ ಆಟಗಾರನನ್ನು ಕೈಬಿಡಬಾರದಾಗಿತ್ತು.

ಮಕರಂದ್ ವೈಂಗಣಕರ್, ಕ್ರೀಡಾ ಲೇಖಕ

ಕಿಡಿನುಡಿ

ಡಿಪಿ ಅಲ್ಲ ಬದಲಾಗಬೇಕಿರುವುದು, ನಾಯಕತ್ವ. ಬಾವುಟ ಅಲ್ಲ ಬೇಕಾಗಿರುವುದು, ಒಳ್ಳೆಯ ಆಡಳಿತ. ಪೊಳ್ಳು ಹೆಮ್ಮೆಯಲ್ಲ ನಮ್ಮನ್ನು ಬೆಳೆಸುವುದು, ಗಟ್ಟಿತನವುಳ್ಳ ಪ್ರಶ್ನೆಗಳು. #ChangeMindsetNotDp



ಮೈತ್ರೇಯಿ ಹೆಗಡೆ, ವಕೀಲೆ

25 ವರ್ಷಗಳ ಹಿಂದೆ

ಸೋಮವಾರ, 4-8-1997

• ಲಾಲೂ ಪಕ್ಷ ವಿಲೀನಕ್ಕೆ ದಳ ಸಮಾವೇಶ ಕರೆ

ನವದೆಹಲಿ, ಆ. 3– ತಾತ್ವಿಕ ಭಿನ್ನಾಭಿಪ್ರಾಯ ಇಲ್ಲದೆ ಕೇವಲ ವ್ಯಕ್ತಿ ನಿಷ್ಠೆಗಾಗಿ ಪಕ್ಷವನ್ನು ತೊರೆದಿರುವ ರಾಷ್ಟ್ರೀಯ ಜನತಾದಳದ ಸಂಸತ್ ಸದಸ್ಯರು, ಶಾಸಕರು ಮತ್ತು ಕಾರ್ಯಕರ್ತರಿಗೆ ಮತ್ತೆ ದಳಕ್ಕೆ ವಾಪಸ್ ಬರಲು ಮುಕ್ತ ಆಮಂತ್ರಣ ಮತ್ತು ದಳವನ್ನು 9 ವರ್ಷಗಳ ಹಿಂದೆ ಸ್ಥಾಪಿಸಿದ ದಿನಗಳಲ್ಲಿದ್ದ ಉತ್ಸಾಹವನ್ನು ತುಂಬುವ ಮೂಲಕ ದಳವನ್ನು ಪುನಶ್ಚೇತನಗೊಳಿಸಲು ಎರಡು ದಿನಗಳ ಕಾಲ ನಡೆದ ಜನತಾದಳದ ರಾಷ್ಟ್ರೀಯ ಮಂಡಳಿ ಸಮಾವೇಶ ಇಂದು ನಿರ್ಣಯ ಮಾಡಿತು.

ಕೋಮುವಾದದ ವಿರುದ್ಧ ಹೋರಾಡಲು ಮತ್ತೆ ಮಾತೃಪಕ್ಷಕ್ಕೆ ಮರಳುವ ಬಗೆಗೆ ಪುನರ್ ಪರಿಶೀಲನೆ ಮಾಡಬೇಕು ಎಂದು ನಿರ್ಣಯದ ಮೂಲಕ ಆರ್‌ಜೆಡಿಯ ಪ್ರತಿನಿಧಿಗಳು ಮತ್ತು ಕಾರ್ಯಕರ್ತರಿಗೆ ಮನವಿ ಮಾಡುವ ನಿರ್ಧಾರವನ್ನು ಅಂಗೀಕರಿಸಲಾಯಿತು.

• ಶರದ್ ರಾಜೀನಾಮೆಗೆ ಆಗ್ರಹ

ನವದೆಹಲಿ, ಆ. 3 (ಪಿಟಿಐ)– ಹವಾಲ ಹಗರಣದಲ್ಲಿ ವಿಚಾರಣಾ ನ್ಯಾಯಾಲಯವು ಆರೋಪ ಹೊರಿಸಲು ತೀರ್ಮಾನಿಸಿರುವ ಕಾರಣ ಜನತಾದಳದ ಅಧ್ಯಕ್ಷ ಸ್ಥಾನಕ್ಕೆ ಶರದ್ ಯಾದವ್ ರಾಜೀನಾಮೆ ನೀಡಬೇಕೆಂದು ಎಡಪಕ್ಷಗಳು ಒತ್ತಾಯಿಸಿವೆ.

50 ವರ್ಷಗಳ ಹಿಂದೆ

ಶುಕ್ರವಾರ, 4-8-1972

• ದಾವಣಗೆರೆ ಕಾಟನ್ ಮಿಲ್ಸ್‌ನಲ್ಲಿ ಕಾರ್ಮಿಕರ ಗಲಭೆ: ಮ್ಯಾನೇಜರ್, ಕಾರ್ಮಿಕ ಸಾವು

ದಾವಣಗೆರೆ, ಆ. 3– ಹಿಂಸಾಕೃತ್ಯಗಳಲ್ಲಿ ತೊಡಗಿದ್ದ ದಾವಣಗೆರೆ ಕಾಟನ್ ಮಿಲ್ಸ್‌ನ ಭಾರಿ ಗುಂಪನ್ನು ಚದುರಿಸಲು ಇಂದು ಮಧ್ಯಾಹ್ನ ಪೊಲೀಸರು ಗುಂಡು ಹಾರಿಸಿದ ಕಾರಣ ಇಬ್ಬರು ಸಾವಿಗೀಡಾಗಿ, ಐವರು ಗಾಯಗೊಂಡರೆಂದು ವರದಿಯಾಗಿದೆ.

ಗಾಯಗೊಂಡವರಲ್ಲಿ ಚಿತ್ರದುರ್ಗ ಆಸ್ಪತ್ರೆಗೆ ಸೇರಿಸಲ್ಪಟ್ಟವರಲ್ಲಿ ಒಬ್ಬ ಕಾರ್ಮಿಕ ಸತ್ತನೆಂದು ವರದಿಗಳು ತಿಳಿಸಿವೆ.

ದಾವಣಗೆರೆ ಕಾಟನ್ ಮಿಲ್ಸ್‌ನ ಮ್ಯಾನೇಜರ್ ಅವರ ಕಚೇರಿಯ ಮೇಲೆ ಮಿಲ್‌ನ ಸುಮಾರು ಮೂರು ಸಹಸ್ರ ಕಾರ್ಮಿಕರ ಗುಂಪು ದಾಳಿ ನಡೆಸಿ, ಮ್ಯಾನೇಜರ್ ಶ್ರೀ ಬಿ.ಪಿ. ಶೆಟ್ಟಿ ಅವರನ್ನು ಗಾಯಗೊಳಿಸಿತೆಂದೂ, ಶೆಟ್ಟಿ ಅವರು ಜೆ.ಜೆ.ಎಂ. ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಸಾವಿಗೀಡಾದರೆಂದೂ ವರದಿಯಾಗಿದೆ.

ಖಾಸಿಂ ಖಾನ್ ಎಂಬ ಮಿಲ್ ಕಾರ್ಮಿಕನನ್ನು ಮ್ಯಾನೇಜರ್ ಅವರು ಸಸ್ಪೆಂಡ್ ಮಾಡಿದರೆಂದೂ, ಸಸ್ಪೆನ್‌ಷನ್ ಆಜ್ಞೆ ಹಿಂತೆಗೆದುಕೊಳ್ಳಲು ಕಾರ್ಮಿಕರ ತಂಡ ಒತ್ತಾಯಪಡಿಸಿದಾಗ ಮ್ಯಾನೇಜರ್ ಅವರು ಒಪ್ಪದ ಕಾರಣ, ಕಾರ್ಮಿಕರ ಗುಂಪು ಅವರ ಕಚೇರಿಯ ಮೇಲೆ ದಾಳಿ ನಡೆಸಿತೆಂದೂ ತಿಳಿದುಬಂದಿದೆ.

ಆರೋಗ್ಯದ ಸವಾಲುಗಳ ಪರಿಹಾರಕ್ಕಾಗಿ ವಿವಿಧ ವಲಯಗಳ ತಜ್ಞರು ಕೈಜೋಡಿಸುವುದು ಅಗತ್ಯ

ಒಂದು ಆರೋಗ್ಯ, ಹತ್ತಾರು ‘ಭಾಗ್ಯ’!



ವಿಶ್ಲೇಷಣೆ

ಪ್ರೊ. ಶ್ರೀಲತಾ ರಾವ್ ಶೇಷಾದ್ರಿ

‘ಒಂದು ಆರೋಗ್ಯ’ (ಮಾನವ ಸೇರಿದಂತೆ ಜೀವಸಂಕುಲ ಹಾಗೂ ಪರಿಸರದ ಆರೋಗ್ಯ ಕಾಪಾಡುವಿಕೆ) ಎಂಬುದು ಸಕಲ ಜೀವಿಗಳ ಆರೋಗ್ಯದ ಕಡೆಗೂ ಲಕ್ಷ್ಯ ಹರಿಸುವಂತಹ ವಿಶಾಲ ದೃಷ್ಟಿಕೋನವನ್ನು ಹೊಂದಿದ ಒಂದು ಪರಿಕಲ್ಪನೆ. ಮಾನವನ ಆರೋಗ್ಯವು ಪ್ರಾಣಿಗಳ ಆರೋಗ್ಯ ಹಾಗೂ ಆರೋಗ್ಯಕರ ಪರಿಸರದ ಜತೆಯಲ್ಲಿ ಹೇಗೆ ನಿಕಟ ಸಂಪರ್ಕವನ್ನು ಹೊಂದಿದೆ ಎಂಬುದನ್ನೂ ಇದು ಪರಿಶೋಧಿಸುತ್ತದೆ. ಕೋವಿಡ್–19 ಕಾಯಿಲೆಯು ಹೇಗೆಲ್ಲ ಜಗತ್ತನ್ನು ಕಾಡಿದೆ ಎನ್ನುವುದು ನಮಗೆಲ್ಲ ಗೊತ್ತೇ ಇದೆ. ಇದನ್ನು ಪ್ರಾಣಿಜನ್ಯ ಕಾಯಿಲೆ ಎಂದು ಗುರುತಿಸಲಾಗಿದೆ. ಪ್ರಾಣಿಜನ್ಯ ಕಾಯಿಲೆಯೆಂದರೆ ಪ್ರಾಣಿಗಳಿಂದ ಮನುಷ್ಯರಿಗೆ ಹರಡುವಂತಹ ಕಾಯಿಲೆ. ಹಂದಿ ಜ್ವರ, ಹಕ್ಕಿ ಜ್ವರ ಮತ್ತು ವೆಸ್ಟ್ ನೇಲ್ ಸೋಂಕಿನಿಂದ ಬರುವ (ಸೊಳ್ಳೆಗಳಿಂದ ಹರಡುವ ಜ್ವರ) ಕಾಯಿಲೆಯ ಬಿಸಿಯನ್ನು ನಾವು ಇತ್ತೀಚೆಗಷ್ಟೆ ಅನುಭವಿಸಿದ್ದೇವೆ. ರೇಬಿಸ್ ಕಾಯಿಲೆಯಂತೂ ಬಹುಕಾಲದಿಂದ ನಮ್ಮನ್ನು ಕಾಡುತ್ತಿದೆ.


ಈಗ, ಮಂಕಿಪಾಕ್ಸ್ ಎಂಬ ಇನ್ನೊಂದು ಪ್ರಾಣಿಜನ್ಯ ಕಾಯಿಲೆಯ ಭಯ ನಮ್ಮನ್ನು ಆವರಿಸಿದೆ. ಈ ಕಾಯಿಲೆಯು ಜಗತ್ತಿನ 75 ದೇಶಗಳಲ್ಲಿ ಹರಡಿದೆ. ಹೀಗಾಗಿ ವಿಶ್ವ ಆರೋಗ್ಯ ಸಂಸ್ಥೆಯು ಜುಲೈ 23ರಂದು ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿಯನ್ನು (ಪಿಎಚ್‌ಇಐಸಿ) ಘೋಷಿಸಿದೆ. ಭಾರತದಲ್ಲಿ ಇದುವರೆಗೆ ‘ಮಂಕಿಪಾಕ್ಸ್’ನ ಎಂಟು ಪ್ರಕರಣಗಳು ಪತ್ತೆಯಾಗಿವೆ. ಆರೋಗ್ಯ ತುರ್ತು ಪರಿಸ್ಥಿತಿ ಘೋಷಣೆಯು ಆತುರದ ನಿರ್ಧಾರ ಎಂದು ತೋರಬಹುದಾದರೂ, ಇತ್ತೀಚಿನ ಕೋವಿಡ್–19ರ ಅನುಭವದ ಹಿನ್ನೆಲೆಯಲ್ಲಿ ಈ ಕ್ರಮದ ಹಿಂದೆ ಒಂದು ತರ್ಕ ಇದೆ. ಸೋಂಕು ಹರಡುವುದನ್ನು ತಡೆಗಟ್ಟಲು ಜಾಗೃತಿ ಮೂಡಿಸುವುದು, ಕಣ್ಗಾವಲು ಇಡುವುದು ಮತ್ತು ಚಿಕಿತ್ಸಾ ಸೌಲಭ್ಯವನ್ನು ಕಲ್ಪಿಸುವುದು ಮತ್ತು ಈ ಪ್ರಕ್ರಿಯೆಗಳ ಮೂಲಕ ಜಗತ್ತಿನ ರಾಷ್ಟ್ರಗಳು ಸಮಗ್ರವಾಗಿ ಸನ್ನದ್ಧಗೊಳ್ಳುವಂತೆ ಮಾಡುವುದು ಅದರ ಮುಖ್ಯ ಉದ್ದೇಶ. ಭಾರತ ಸರ್ಕಾರವೂ ಮಂಕಿಪಾಕ್ಸ್ ಕಾಯಿಲೆ ನಿರ್ವಹಣೆಗೆ ಮಾರ್ಗಸೂಚಿಯೊಂದನ್ನು ಹೊರಡಿಸಿದೆ.

ಇಷ್ಟಕ್ಕೂ ಮಂಕಿಪಾಕ್ಸ್ ಎಂದರೇನು? ನಮ್ಮಲ್ಲಿ ಬಹುತೇಕರಿಗೆ ಇದು ಹೊಸ ಪದವಾಗಿದೆ. ನಾವು ಈಗಾಗಲೇ ಸ್ಮಾಲ್‌ಪಾಕ್ಸ್ (ಸಿಡುಬು) ಮತ್ತು ಚಿಕನ್‌ಪಾಕ್ಸ್ ಹೆಸರುಗಳನ್ನು ಕೇಳಿದ್ದೇವೆ ಮತ್ತು ಆ ಕಾಯಿಲೆಗಳ ಸ್ವರೂಪ ಕೂಡ ತಕ್ಕಮಟ್ಟಿಗೆ ನಮಗೆ ಗೊತ್ತು. ವಿಶ್ವ ಆರೋಗ್ಯ ಸಂಸ್ಥೆಯ ಮಾಹಿತಿ ಪ್ರಕಾರ, ಈ ಕಾಯಿಲೆ 2–4 ವಾರಗಳವರೆಗೆ ಕಾಡುತ್ತದೆ ಮತ್ತು ಕಾಯಿಲೆಪೀಡಿತರಲ್ಲಿ ಸಾವಿನ ಪ್ರಮಾಣ ಶೇ 3ರಿಂದ ಶೇ 6ರಷ್ಟಿದೆ. ಸಿಡುಬಿನ ಹೋಲಿಕೆ ಇದ್ದರೂ ಇದರ ತೀವ್ರತೆ ಅಷ್ಟಿಲ್ಲ ಮತ್ತು ಮರಣದ ಅಪಾಯ ಕೂಡ ಕಡಿಮೆ. ಮಂಕಿಪಾಕ್ಸ್ ಪೀಡಿತರಲ್ಲೂ ಸಿಡುಬು ಪೀಡಿತರಿಗೆ ಆಗುವಂತೆಯೇ ಚರ್ಮದ ಮೇಲೆ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಹಾಗೆಯೇ ಊತ ಕಾಣಿಸಿಕೊಂಡು ಅದರಲ್ಲಿ ಕೀವು ತುಂಬಿಕೊಳ್ಳುತ್ತದೆ. ಜ್ವರ, ಚಳಿ, ತಲೆನೋವು, ಸ್ನಾಯು ಸೆಳೆತ, ಬಳಲಿಕೆ ಈ ಕಾಯಿಲೆಯ ಇತರ ಸಾಮಾನ್ಯ ಲಕ್ಷಣಗಳು.

ಚರ್ಮದ ಮೇಲಿನ ಗಾಯದ ಸಂಪರ್ಕ ಇಲ್ಲವೆ ಸೋಂಕುಪೀಡಿತ ವ್ಯಕ್ತಿ ಬಳಸಿದ ವಸ್ತುಗಳ ಸಂಪರ್ಕದಿಂದ ಈ ಕಾಯಿಲೆ ಹರಡುವ ಸಾಧ್ಯತೆ ಹೆಚ್ಚಾಗಿದೆ. ಇದುವರೆಗಿನ ಪ್ರಕರಣಗಳ ಪ್ರಸರಣಕ್ಕೆ ಅತ್ಯಂತ ನಿಕಟ ಸಂಪರ್ಕವೇ ಕಾರಣ ಎಂದು ಗೊತ್ತಾಗಿದೆ. ಸಾಮಾನ್ಯವಾಗಿ, ಸೋಂಕಿನ ಸಂಪರ್ಕಕ್ಕೆ ಬಂದು 5–21 ದಿನಗಳಲ್ಲಿ ಕಾಯಿಲೆಯ ಲಕ್ಷಣಗಳು ಗೋಚರಿಸಲು ಆರಂಭಿಸುತ್ತವೆ. ಚರ್ಮದ ಮೇಲೆ ಕೆಂಪು ಗುಳ್ಳೆಗಳು ಏಳುವುದು, ಬಾಯಲ್ಲಿ ಹುಣ್ಣು ಆಗುವುದು, ಕಣ್ಣುಗಳ ಸುತ್ತ ಊತ ಕಾಣಿಸಿಕೊಳ್ಳುವುದು– ಇವು ಮುಖ್ಯ ಲಕ್ಷಣಗಳು. ಚರ್ಮದ ಮೇಲಿನ ಗುಳ್ಳೆಗಳು ಊದಿಕೊಂಡು, ಕೀವು ತುಂಬಿಕೊಳ್ಳುವುದರಿಂದ ನೋವು ಉಲ್ಬಣಗೊಳ್ಳುತ್ತದೆ.

ಭಾರತ ಸರ್ಕಾರದ ಮಾರ್ಗಸೂಚಿ ಪ್ರಕಾರ, ಸೋಂಕಿನ ಸಂಪರ್ಕಕ್ಕೆ ಬಂದ ವ್ಯಕ್ತಿಗಳು 21 ದಿನಗಳವರೆಗೆ ಇತರರ ಸಂಪರ್ಕಕ್ಕೆ ಬಾರದಂತೆ ಬೇರೆಯಾಗಿ ಉಳಿಯಬೇಕು. ಮಾಸ್ಕ್ ಧರಿಸಬೇಕು ಮತ್ತು ಕೈಗಳನ್ನು ಆಗಾಗ ಸ್ವಚ್ಛಗೊಳಿಸುತ್ತಿರಬೇಕು. ಚರ್ಮದ ಮೇಲಿನ ಗುಳ್ಳೆಗಳು ಒಣಗುವವರೆಗೆ ಅವುಗಳ ಮೇಲೆ ಯಾವಾಗಲೂ ಹೊದಿಕೆ ಹಾಕಿರಬೇಕು. ಸಿಡುಬು ನಿರ್ಮೂಲನೆಗೆ ಬಳಸಲಾಗುತ್ತಿದ್ದ ಲಸಿಕೆಗಳೇ ಮಂಕಿಪಾಕ್ಸ್ ಕಾಯಿಲೆಗೂ ಪರಿಣಾಮಕಾರಿ ಮದ್ದು ಎಂದು ನಿರೂಪಿತವಾಗಿದೆ. ಆದರೆ, ಈ ಲಸಿಕೆಗಳು ಅಗತ್ಯ ಪ್ರಮಾಣದಲ್ಲಿ ಪೂರೈಕೆ ಆಗುತ್ತಿಲ್ಲ.

ಕೋವಿಡ್–19 ಇನ್ನೂ ಕಾಡುತ್ತಲೇ ಇರುವಾಗ ಹೊಸದೊಂದು ಕಾಯಿಲೆ ಬೇರೆ ದಾಂಗುಡಿ ಇಟ್ಟಿರುವುದರಿಂದ ಜನರಲ್ಲಿ ಆತಂಕ ಮೂಡಿರುವುದು ಸಹಜ. ಆಫ್ರಿಕಾದಿಂದ ಹೊರಗೆ, ಡೆನ್ಮಾರ್ಕ್‌ನ ಕೋಪನ್ ಹೇಗನ್‌ನಲ್ಲಿ ಮಂಗಗಳು ಹೆಚ್ಚಾಗಿದ್ದ ಪ್ರದೇಶದಲ್ಲಿ (1958) ಒಂದು ಬಾರಿ ಮಾತ್ರ ಈ ಕಾಯಿಲೆ ಕಾಣಿಸಿಕೊಂಡಿತ್ತು. ನಂತರದ ದಿನಗಳಲ್ಲಿ ಜಗತ್ತು ಈ ಕಾಯಿಲೆಯನ್ನು ಬಹುತೇಕ ಮರೆತೇಬಿಟ್ಟಿತ್ತು. ಆಫ್ರಿಕಾದ ಕೇಂದ್ರ ಹಾಗೂ ಪಶ್ಚಿಮ ಭಾಗದ ಮಳೆಕಾಡುಗಳ ಸುತ್ತಲಿನ ಪ್ರದೇಶಗಳಿಗೆ ಸೀಮಿತವಾಗಿದ್ದ ಈ ಕಾಯಿಲೆಯ ಪ್ರಕರಣಗಳ ಸಂಖ್ಯೆ 1986ರಿಂದ ಈಚೆಗೆ 20 ಪಟ್ಟು ವೃದ್ಧಿಯಾಗಿದೆ. ಹೀಗಾಗಿ, ಸದ್ಯ ಹರಡುತ್ತಿರುವ ಸೋಂಕು ಕಳವಳ ಉಂಟು ಮಾಡಿದೆ. ಕಾಯಿಲೆ ಈಗ ಕ್ಷಿಪ್ರವಾಗಿ ಹರಡುತ್ತಿರುವುದು ನಿಜವಾದರೂ ಅದರ ಅಸ್ತಿತ್ವ ಸಾವಿರಾರು ವರ್ಷಗಳಿಂದಲೂ ಇದೆ. ಈ ಕಾಯಿಲೆಯ ಕುರಿತು ಹಲವು ತಪ್ಪು ಕಲ್ಪನೆಗಳೂ ಇವೆ. ಹಾಗೆ ನೋಡಿದರೆ, ಈ ಕಾಯಿಲೆಗೂ ಹೆಸರಿಗೂ ಸಂಬಂಧವಿಲ್ಲ. ಏಕೆಂದರೆ, ಇದೇನು ಮಂಗಗಳಿಂದ ಬರುವ ಕಾಯಿಲೆ ಅಲ್ಲ. ಈ ಕಾಯಿಲೆಗೆ ದಂಶಕಗಳೇ ಕಾರಣ ಎಂದು ನಂಬಲಾಗಿದ್ದು, ಮಂಗಗಳು ಮತ್ತು ಮಾನವರು ಬಾಧಿತರು. ಅಲ್ಲದೆ, ಮೊದಲು ಆಫ್ರಿಕಾದಲ್ಲಿ ಕಾಣಿಸಿಕೊಂಡ ಕಾಯಿಲೆ ಕೂಡ ಇದಲ್ಲ. ಸಮರ್ಪಕ ಪ್ರಮಾಣದ ಲಸಿಕೆ ಪೂರೈಕೆಯಿಲ್ಲದೆ ಆ ಭಾಗದಲ್ಲಿ ಈ ಕಾಯಿಲೆ ಇನ್ನೂ ಉಳಿದುಕೊಂಡಿದೆ ಅಷ್ಟೆ. ಈಗಲೂ ಸಿಡುಬು ತಡೆಗಟ್ಟುವ 3.1 ಕೋಟಿ ಲಸಿಕೆಗಳ ದಾಸ್ತಾನಿದೆ ಎಂದು ವಿಶ್ವಸಂಸ್ಥೆ ಹೇಳುತ್ತದೆ. ಆದರೆ, ಆ ಲಸಿಕೆಗಳನ್ನು ಆರ್ಥಿಕವಾಗಿ ಬಲಾಢ್ಯವಾಗಿರುವ ಪಾಶ್ಚಿಮಾತ್ಯ ದೇಶಗಳು ಖರೀದಿಸುತ್ತವೆಯೇ ಹೊರತು ಅಲ್ಲಿಗಿಂತ ಮೂರು ಪಟ್ಟು ಹೆಚ್ಚು ಪ್ರಕರಣಗಳು ವರದಿಯಾದ ಆಫ್ರಿಕಾಕ್ಕೆ ಸಿಗುತ್ತಿಲ್ಲ.



ಮಂಕಿಪಾಕ್ಸ್ ಸೋಂಕು ಹರಡುತ್ತಿರುವ ಪ್ರಮಾಣ ಹೆಚ್ಚಾಗುತ್ತಿದ್ದು, ಪರಿಸರದ ಅವನತಿ ಹೆಚ್ಚುತ್ತಿರುವುದು ಮತ್ತು ಪ್ರಾಣಿಗಳಲ್ಲಿ ಈ ಸೋಂಕು ಇರುವ ಕಾಡುಗಳ ಸುತ್ತ ಜನವಸತಿ ಪ್ರದೇಶಗಳು ತಲೆ ಎತ್ತುತ್ತಿರುವುದು ಇದಕ್ಕೆ ಕಾರಣ. ವನ್ಯಜೀವಿಗಳ ಆವಾಸಸ್ಥಾನ ನಾಶಗೊಳಿಸುವ, ಕ್ಷಿಪ್ರವಾಗಿ ನಗರೀಕರಣಗೊಳಿಸುವ ಈ ಪ್ರವೃತ್ತಿ ಹೀಗೇ ಮುಂದುವರಿದರೆ ಜನವಸತಿ ಪ್ರದೇಶಗಳ ಜತೆ ಕಾಡುಪ್ರಾಣಿಗಳ ಸಂಪರ್ಕ ಹೆಚ್ಚಿ, ಪ್ರಾಣಿಜನ್ಯ ಕಾಯಿಲೆಗಳು ವೇಗವಾಗಿ ಹರಡುವ ಭೀತಿ ಇದೆ. ಪರಿಸರ ವ್ಯವಸ್ಥೆ ಹೀಗೆ ಛಿದ್ರವಾದಾಗ ಸೋಂಕುಗಳು ತಮ್ಮ ನೈಸರ್ಗಿಕ ಆತಿಥೇಯರಿಂದ ಹೊರಹೋಗುವುದು ಸಹಜವೇ. ಹೊಸ ಆತಿಥೇಯರ ಹುಡುಕಾಟದಲ್ಲಿರುವ ಅವುಗಳಿಗೆ ಮಾನವರು ಸುಲಭವಾಗಿ ಸಿಗುತ್ತಾರೆ. ಅದೇ ರೀತಿ, ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಮಾನವ ಚಟುವಟಿಕೆಗಳು ಹವಾಮಾನ ಬದಲಾವಣೆಗೆ ಕಾರಣವಾಗುತ್ತಿದ್ದು, ಇದರಿಂದ ಸೋಂಕುಗಳು ಕ್ಷಿಪ್ರ ಗತಿಯಲ್ಲಿ ಬೆಳೆಯಲು ಪೂರಕವಾದ ವಾತಾವರಣ ಸೃಷ್ಟಿಯಾಗುತ್ತಿದೆ. ಇದರಿಂದ, ಹಿಂದೆ ಕೇಳಿರದಿದ್ದ ಕಾಯಿಲೆಗಳು ಮಾನವನನ್ನು ಕಾಡುವ ಭೀತಿ ಇನ್ನೂ ಹೆಚ್ಚಾಗುತ್ತಿದೆ. ಸ್ಥಳೀಯ ಇಲ್ಲವೆ ಪ್ರಾದೇಶಿಕವಾಗಿ ಕಾಡುತ್ತಿದ್ದ ಸೋಂಕುಗಳು ಪ್ರವಾಸ ಮತ್ತು ವ್ಯಾಪಾರದ ತೀವ್ರ ವೃದ್ಧಿಯಿಂದಾಗಿ ಜಾಗತಿಕ ಮಟ್ಟದಲ್ಲಿ ಹರಡುವುದು ಕಷ್ಟವೇನಲ್ಲ.

ಒಂದು ಆರೋಗ್ಯದ ಪರಿಕಲ್ಪನೆಯು ಎಲ್ಲ ತಜ್ಞರನ್ನು ಒಂದೆಡೆಗೆ ತರುವಂಥದ್ದು. ಮನುಷ್ಯರ ವೈದ್ಯರು, ನರ್ಸ್‌ಗಳು, ಪ್ರಾಣಿಗಳ ವೈದ್ಯರು, ಕೃಷಿ ಕಾರ್ಯಕರ್ತರು, ಪರಿಸರವಾದಿಗಳು, ವನ್ಯಜೀವಿತಜ್ಞರು ಎಲ್ಲರೂ ಒಟ್ಟಾಗಿ ಕೆಲಸ ಮಾಡಿ, ಆರೋಗ್ಯದ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ವಿಧಾನ ಇದಾಗಿದೆ. ಇಂತಹ ಪ್ರಯತ್ನಗಳಿಗೆ ಜಾಗತಿಕ ಮಟ್ಟದಲ್ಲಿ ಬೆಂಬಲ ಸಿಕ್ಕರೆ ಪ್ರಾಣಿಜನ್ಯ ಕಾಯಿಲೆಗಳ ಹರಡುವಿಕೆ ತಡೆಗಟ್ಟಲು ಸಾಧ್ಯ.

ಚುರುಮುರಿ



ಹಬ್ಬದ ಹರಕೆ

• ನಾಗರಾಜು

‘ಈ ಬಾರಿ ಸಿಂಪಲ್ಲಾಗಿ ವರಮಹಾಲಕ್ಷ್ಮಿ ಹಬ್ಬ ಆಚರಿಸಲು ತೀರ್ಮಾನಿಸಿದ್ದೇನೆ...’ ಗಂಡನಿಗೆ ಕಾಫಿ ತಂದುಕೊಟ್ಟಳು ಶ್ರೀಮತಿ.

‘ಸಿಂಪಲ್ ಅಂದ್ರೆ ಕಾಯಿ ಒಡೆದು, ಬಾಳೆಹಣ್ಣು ಮುರಿದು, ಊದುಬತ್ತಿ ಹಚ್ಚಿ ಲಕ್ಷ್ಮಿ ಪೂಜೆ ಮಾಡಿ ಮುಗಿಸ್ತೀಯಾ?’ ಕಾಫಿ ಹೀರಿ ವಿಶ್ವ ಕೇಳಿದ.

‘ಅಷ್ಟು ಸಿಂಪಲ್ಲಾದ್ರೆ ಲಕ್ಷ್ಮಿ ಒಲಿದು ವರ ಕೊಡೋದಿಲ್ಲ... ನಮ್ಮ ಕುಟುಂಬದ ಘನತೆಗೆ ತಕ್ಕಹಾಗೆ ಮಾಡಬೇಕು’.

‘ಹೌದೌದು. ನೆರೆಹೊರೆಯವರ ಎದುರು ಕುಟುಂಬದ ಘನತೆ ಕಾಪಾಡಿಕೊಳ್ಳಬೇಕು’.

‘ಮನೆಗೆ ಬರುವ ಮಹಾಲಕ್ಷ್ಮಿಗೆ ಗ್ರ್ಯಾಂಡಾಗಿರುವ ರೇಷ್ಮೆ ಸೀರೆ ಉಡಿಸಬೇಕು...’

‘ಹಾಗೇ, ಮನೆಯ ಗೃಹಲಕ್ಷ್ಮಿಯಾದ ನಿನಗೂ ಹೊಸ ಸೀರೆ ಕೊಡಿಸಬೇಕು. ಎರಡು ಹೊಸ ಸೀರೆ ತರೋಣ’.

‘ಲಕ್ಷ್ಮಿಗೆ ಕಿವಿಗೆ, ಮೂಗಿಗೆ, ಕತ್ತಿಗೆ ಏನಾದ್ರೂ ಹಾಕಬೇಕಲ್ವೆ?’

‘ನಿನ್ನ ಒಡವೆಗಳನ್ನು ಹಾಕು’.

‘ಹಾಕ್ತೀನ್ರೀ, ಈ ಹಬ್ಬಕ್ಕೆ ಬಂಗಾರದ ಸರ ಮಾಡಿಸಿಕೊಡ್ತೀನಿ ಅಂತ ಲಕ್ಷ್ಮಿಗೆ ಹರಕೆ ಹೊತ್ತಿದ್ದೆ, ಸೀರೆ ಜೊತೆಗೆ ಸರವನ್ನೂ ಖರೀದಿಸಬೇಕು’.

‘ಸರಿ. ಆಗಬಹುದು’.

‘ಕುಂಕುಮಕ್ಕೆಂದು ಮನೆಗೆ ಬರುವ ನೆರೆಹೊರೆಯ ಹೆಂಗಸರು ಲಕ್ಷ್ಮಿ ಅಲಂಕಾರ ನೋಡುವಾಗ ಎದ್ದುಕಾಣುವಂತೆ ಕನಕಾಂಬರ ಕಲರ್ ನೋಟಿನ ಕಂತೆಗಳನ್ನು ಜೋಡಿಸಬೇಕು’.

‘ಯಾರನ್ನು ಬೇಕಾದ್ರೂ ಕರಿ, ಆದರೆ, ಪಕ್ಕದ ಬೀದಿಯಲ್ಲಿರುವ ಆದಾಯ ತೆರಿಗೆ ಅಧಿಕಾರಿಯ ಹೆಂಡ್ತಿಯನ್ನು ಮಾತ್ರ ಕುಂಕುಮಕ್ಕೆ ಕರೆಯಬೇಡ’.

‘ಯಾಕ್ರೀ? ಅವರು ತುಂಬಾ ಒಳ್ಳೆಯವರು, ನಮ್ಮ ಮಹಿಳಾ ಸಮಾಜಕ್ಕೆ ಬಹಳಷ್ಟು ಸಹಾಯ ಮಾಡಿದ್ದಾರೆ’.

‘ಹಾಗಲ್ಲಾ, ನಮ್ಮ ಮನೆ ದೇವರ ಅಲಂಕಾರಕ್ಕೆ ಇಟ್ಟ ಹಣ, ಒಡವೆ ಬಗ್ಗೆ ಅವರು ತಮ್ಮ ಗಂಡನಿಗೆ ವರದಿ ಮಾಡ್ತಾರೆ, ಗಂಡನ ಮೂಲಕ ಆಫೀಸ್‌ಗೆ ಸುದ್ದಿ ತಲುಪಿ ಅವರು ನಮ್ಮ ಮನೆ ಮೇಲೆ ತೆರಿಗೆ ದಾಳಿ ಮಾಡಿಬಿಟ್ಟರೆ?!...’ ವಿಶ್ವನಿಗೆ ಭಯ.

‘ಮಾಡಲಿಬಿಡ್ರೀ, ನಮ್ಮ ಹೆಸರೂ ಪೇಪರ್‌ನಲ್ಲಿ ಬರ್ತದೆ...’ ಎನ್ನುತ್ತಾ ಕಾಫಿ ಗ್ಲಾಸ್ ಎತ್ತಿಕೊಂಡು ಹೊರಟಳು.

ಸಂಗತ

ಗಾಳಕ್ಕೆ ಸಿಲುಕುವುದು ಬೇಡ

ಮನದ ನೋವಿಗೆ ಮುಲಾಮು ಹಚ್ಚುವ ಕೆಲಸ ಮಾಡೋಣ

• ರಾಜಕುಮಾರ ಕುಲಕರ್ಣಿ

‘ರೋಡೆಂಟ್ ಜಾತಿಯ ಕೆಲವು ಪ್ರಾಣಿಗಳನ್ನು ಬಿಟ್ಟರೆ ಕಶೇರುಕ ವರ್ಗದ ಯಾವ ಪ್ರಾಣಿಯೂ ತನ್ನದೇ ವರ್ಗದ ಇನ್ನೊಂದು ಪ್ರಾಣಿಯನ್ನು ಅಭ್ಯಾಸ ಬಲದಿಂದ ಕೊಲ್ಲುವ ಉದಾಹರಣೆಯಿಲ್ಲ. ಕೊಲ್ಲುವ ಸುಖಕ್ಕಾಗಿಯೇ ಕೊಲ್ಲುವ ಪ್ರಾಣಿ ಮನುಷ್ಯನನ್ನು ಬಿಟ್ಟು ಇನ್ನೊಂದಿಲ್ಲ...’ ಎಂದು ಮನೋವಿಶ್ಲೇಷಕ, ಲೇಖಕ ಆ್ಯಂಥೋನಿ ಸ್ಟೋರ್ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವ ಸರಣಿ ಹತ್ಯೆಗಳ ಬಗೆಗಿನ ವರದಿಗಳನ್ನು ಓದಿದಾಗ ಅವರ ಈ ಮಾತು ನೆನಪಾಯಿತು.


ಮನುಷ್ಯ ಮನುಷ್ಯನನ್ನೇ ಬೇಟೆಯಾಡುವ, ಕೊಲ್ಲುವ, ಹಿಂಸಿಸುವ, ಶೋಷಿಸುವ ಪ್ರವೃತ್ತಿ ಇಂದು ನಿನ್ನೆಯದಲ್ಲ. ಅನಾದಿ ಕಾಲದಿಂದಲೂ ಕಾಣಸಿಗುವ ಪ್ರವೃತ್ತಿ ಇದು. ಪ್ರೀತಿ, ಕರುಣೆ, ಅಂತಃಕರಣ ಇರಬೇಕಾದ ಜಾಗದಲ್ಲಿ ದ್ವೇಷ, ಸೇಡು, ಹಿಂಸೆ ವಿಜೃಂಭಿಸುತ್ತಿವೆ. ಮನುಷ್ಯ ಆಧುನಿಕನಾದಂತೆಲ್ಲ ಅವನ ಬುದ್ಧಿ, ಭಾವಗಳು ಸಂಕುಚಿತಗೊಳ್ಳುತ್ತಿವೆ. ಮನುಷ್ಯ ಸಂಬಂಧಗಳನ್ನು ತಕ್ಕಡಿಯಲ್ಲಿಟ್ಟು ಲಾಭ, ನಷ್ಟಗಳ ಲೆಕ್ಕಾಚಾರದಿಂದ ತೂಗಲಾಗುತ್ತಿದೆ. ಸಮಾಜದಲ್ಲಿ ಸಹಿಷ್ಣುತೆಯು ಮರೆಗೆ ಸರಿದಂತಿದೆ.

ಇನ್ನೊಬ್ಬರ ಮನಸ್ಸಿಗೆ ನೋವು ನೀಡುವ ಪ್ರವೃತ್ತಿ ಸಮಾಜದಲ್ಲಿ ಹೆಚ್ಚುತ್ತಿದೆ. ದೈಹಿಕ ನೋವಿಗಿಂತ ಮಾನಸಿಕ ನೋವು ಅತ್ಯಂತ ಅಪಾಯಕಾರಿ. ಮನುಷ್ಯ ತನ್ನ ದೇಹದ ಮೇಲಿನ ಗಾಯಗಳನ್ನು ಮರೆಯಬಹುದು. ಆದರೆ ಮನಸ್ಸಿಗಾಗುವ ಗಾಯ ಬೇಗ ಮಾಯುವಂತಹದ್ದಲ್ಲ. ಮನುಷ್ಯ, ನಗುವಿನ ಮುಖವಾಡದ ಹಿಂದೆ ಹಲ್ಲುಮಸೆತದ ಕ್ರೌರ್ಯವನ್ನು ಪ್ರದರ್ಶಿಸುತ್ತಿದ್ದಾನೆ.

ಮನಶಾಸ್ತ್ರಜ್ಞ ಎರಿಕ್ ಬರ್ನ್ ಪರಿಚಯಿಸಿದ ‘ಟ್ರಾನ್ಸಾಕ್ಷನಲ್ ಅನ್ಯಾಲಿಸಿಸ್’ (Transactional Analysis) ಎನ್ನುವ ಪರಿಕಲ್ಪನೆಯು ಮನುಷ್ಯನೇ ಸೃಷ್ಟಿಸಿಕೊಂಡಿರುವ ಈ ಕ್ರೂರ ವ್ಯವಸ್ಥೆಯಲ್ಲಿ ಮನುಷ್ಯ ಮನುಷ್ಯನಂತೆ ಬದುಕುವುದನ್ನು ಹೇಳಿಕೊಡುತ್ತದೆ. ಈ ಪರಿಕಲ್ಪನೆ ಅನ್ವಯ ಮನುಷ್ಯ ಬೇರೆಯವರೊಂದಿಗೆ ಮಾತನಾಡುವ ಪೂರ್ವದಲ್ಲಿ ವರ್ತನೆ, ಆಲೋಚನೆ, ತನ್ನೊಳಗಿನ ಸಂಘರ್ಷ ಇವುಗಳ ಬಗ್ಗೆ ವಿಶೇಷ ಎಚ್ಚರ ವಹಿಸಬೇಕು ಎನ್ನುತ್ತಾರೆ ಮನೋವಿಜ್ಞಾನಿಗಳು. ಸಂಭಾಷಣೆಯ ಸಂದರ್ಭ ತನ್ನ ಮಾತು ಮತ್ತು ವರ್ತನೆ ಎದುರಿಗಿರುವ ವ್ಯಕ್ತಿಗೆ ನೋವನ್ನು ಉಂಟುಮಾಡದಂತೆ ಪೂರ್ವಸಿದ್ಧತೆಯೊಂದಿಗೆ ಮಾತಿಗಿಳಿಯುವುದೇ ‘ಟ್ರಾನ್ಸಾಕ್ಷನಲ್ ಅನ್ಯಾಲಿಸಿಸ್’ನ ಪ್ರಮುಖ ಲಕ್ಷಣ. ನಾಗರಿಕತೆಯ ವೇಷ ತೊಟ್ಟು ಅನಾಗರಿಕರಂತೆ ಮನುಷ್ಯರು ವರ್ತಿಸುತ್ತಿರುವ ಇವತ್ತಿನ ದಿನಗಳಲ್ಲಿ ಎರಿಕ್ ಪರಿಚಯಿಸಿದ ಈ ಪರಿಕಲ್ಪನೆ ಬಗೆಗೆ ಅರಿಯುವುದು ಅಗತ್ಯ.

ನನ್ನ ಪರಿಚಯದ ಹಿರಿಯರೊಬ್ಬರು ಆಗಾಗ ಹೇಳುವ ಮಾತಿದು- ‘ನನ್ನ ಮನಸ್ಸಿಗೆ ನೋವಾದಾಗ ಅಥವಾ ಮಾಡಬೇಕೆಂದಿರುವ ಕೆಲಸದಲ್ಲಿ ಸೋಲು ಎದುರಾದಾಗ ನಾನು ಶಿವರಾಮ ಕಾರಂತರ ‘ಹುಚ್ಚು ಮನಸ್ಸಿನ ಹತ್ತು ಮುಖಗಳು’ ಕೃತಿಯನ್ನು ಓದುತ್ತೇನೆ. ನೋವು ಮತ್ತು ಸೋಲನ್ನು ಮೆಟ್ಟಿ ನಿಲ್ಲುವ ಶಕ್ತಿಯನ್ನು ಈ ಕೃತಿಯ ಓದು ನನಗೆ ತಂದು ಕೊಡುತ್ತದೆ...’ ಈ ಮಾತು, ಸಾಹಿತ್ಯಕ್ಕೆ ಇರುವ ಶಕ್ತಿಗೆ ಒಂದು ದೃಷ್ಟಾಂತ. ಅನುದಿನದ ಅಂತರಗಂಗೆಯಂತೆ ಸಾಹಿತ್ಯವು ಜನಮಾನಸದಲ್ಲಿ ಹಾಸುಹೊಕ್ಕಾಗಿ ಪ್ರವಹಿಸುತ್ತಲೇ ಇದೆ. ಅದಕ್ಕಾಗಿಯೇ ಓದು ಬಹು ಮುಖ್ಯ. ಅದನ್ನು ಎಲ್ಲರೂ ರೂಢಿಸಿಕೊಳ್ಳಬೇಕು.

ಸಾರ್ವಜನಿಕ ಜೀವನದಲ್ಲಿ ಟೀಕೆ– ಟಿಪ್ಪಣಿಗಳ ಗುಣಮಟ್ಟ ಕುಸಿದಿರುವುದಕ್ಕೆ ಓದಿನ ಕೊರತೆಯೂ ಒಂದು ಪ್ರಮುಖ ಕಾರಣ. ಶಾಸನಸಭೆ ಕಲಾಪದ ಗುಣಮಟ್ಟ ಕೆಟ್ಟಿರುವುದಕ್ಕೆ ಕೂಡ ಇದೇ ಕಾರಣ. ಭಾಷೆಗೆ ಇರುವ ಸೊಬಗು ಮತ್ತು ಘನತೆಯನ್ನು ಅರಿಯದವರು ಅದನ್ನು ಹೇಗೆ ಬೇಕಾದರೂ ಬಳಸಬಲ್ಲರು. ‘ನುಡಿದರೆ ಮುತ್ತಿನ ಹಾರದಂತಿರಬೇಕು...’ ಎನ್ನುವ ಬಸವಣ್ಣನವರ ವಚನವು ನಮ್ಮ ನುಡಿ ಹೇಗಿರಬೇಕು ಮತ್ತು ಮನುಷ್ಯ ಹೇಗೆ ಬಾಳಬೇಕು ಎನ್ನುವುದನ್ನು ಸೂಚಿಸುತ್ತದೆ. ದಿನಕರ ದೇಸಾಯಿ ಅವರ ‘ಹಚ್ಚುವುದಾದರೆ ದೀಪ ಹಚ್ಚು, ಬೆಂಕಿ ಹಚ್ಚಬೇಡ. ಆರಿಸುವುದಾದರೆ ಬೆಂಕಿ ಆರಿಸು, ದೀಪ ಆರಿಸಬೇಡ’ ಎಂಬ ಈ ಸಾಲು, ಬದುಕಿನ ಸಾರ್ಥಕ್ಯದ ಬಗೆಗೆ, ಬದುಕನ್ನು ಗ್ರಹಿಸುವ ದೃಷ್ಟಿಕೋನ ಹೇಗಿರಬೇಕು ಎಂಬುದರ ಕುರಿತು ಹೇಳುತ್ತದೆ.



ಕಾಮನ್‌ವೆಲ್ತ್ ಕ್ರೀಡಾಕೂಟ ನಡೆಯುತ್ತಿದೆ. ಅಲ್ಲಿನ ಆಟೋಟಗಳಿಂದ ಸ್ಫೂರ್ತಿ ಪಡೆಯೋಣ. ಮಕ್ಕಳನ್ನು ಆ ದಾರಿಯಲ್ಲಿ ನಡೆಯುವಂತೆ ಹುರಿದುಂಬಿಸೋಣ. ಕನ್ನಡದ ಸಿನಿಮಾಗಳು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುತ್ತಿವೆ. ಒಳ್ಳೆಯ ಸಿನಿಮಾ ನೋಡಿ ಖುಷಿಪಡೋಣ. ರಾಜಕಾರಣವನ್ನು ಸಹನೀಯಗೊಳಿಸಿದ ಮಹನೀಯರನ್ನು ನೆನೆದು ಅಂತಹವರಿಗಾಗಿ ಹುಡುಕೋಣ. ಇದು, ಈ ಕ್ಷಣದ ಅಗತ್ಯ.

‘ನಾವು ಎಷ್ಟೇ ಸಮರ್ಥಿಸಿಕೊಂಡರೂ ನಮ್ಮ ಬೈಗುಳಕ್ಕೆ- ದ್ವೇಷಕ್ಕೆ ಪಾತ್ರವಾದ ವ್ಯಕ್ತಿಯಾಗಲಿ, ವಸ್ತುವಾಗಲಿ ಜಗತ್ತಿನಲ್ಲಿ ಇಲ್ಲ. ದ್ವೇಷಕ್ಕೆ ಅಧಿಕಾರಿ ಇದ್ದಾನೆ, ವಸ್ತು ಇಲ್ಲ. ಇಲ್ಲಿ ಎಲ್ಲವೂ ಪ್ರೀತಿಗೆ ಯೋಗ್ಯವಾದದ್ದೇ ಪ್ರೀತಿಸುವ ತಾಕತ್ತು ನಮಗೆ ಇದ್ದಲ್ಲಿ’ ಎಂದಿರುವವರು ಯಶವಂತ ಚಿತ್ತಾಲ. ರಾಜಕೀಯ ಲಾಭಕ್ಕಾಗಿ ಕೆಲವರು ಒಡಕಿನ ಬೀಜಗಳನ್ನು ಬಿತ್ತುತ್ತಾರೆ. ಚುನಾವಣೆ ಸಮೀಪಿಸುತ್ತಿರುವುದರಿಂದ ಇಂತಹ ರಾಜಕೀಯದಾಟಗಳು ಮತ್ತೂ ಹೆಚ್ಚಬಹುದು. ಮತ ಗಳಿಕೆಯ ಗಾಳಕ್ಕೆ ನಾವು ಸಿಲುಕುವುದು ಬೇಡ. ಮನದ ನೋವಿಗೆ ಮುಲಾಮು ಹಚ್ಚುವ ಕೆಲಸ ಮಾಡೋಣ.

ವಾಚಕರ ವಾಣಿ

ಕೀಳರಿಮೆ ಹೋಗಲಾಡಿಸುವ ಕೆಲಸವಾಗಲಿ

ಹಳ್ಳಿಯ ಮಕ್ಕಳಲ್ಲಿ ಕೆಲವೊಂದು ವಿಷಯಗಳಲ್ಲಿ ಸಹಜವಾಗಿ ಕೀಳರಿಮೆ ಇರುತ್ತದೆ. ಈ ಬಗ್ಗೆ ಸದಾಶಿವ್ ಸೊರಟೂರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ (ಸಂಗತ, ಆ. 3). ಸರಿಯಾದ ರೀತಿಯಲ್ಲಿ ಮಕ್ಕಳಿಗೆ ಮಾರ್ಗದರ್ಶನ ನೀಡಿ, ಅವರ ಕೀಳರಿಮೆಯನ್ನು ಹೋಗಲಾಡಿಸುವ ಗುರುತರ ಜವಾಬ್ದಾರಿ ಶಿಕ್ಷಕರದ್ದು ಮತ್ತು ಪೋಷಕರದ್ದು. ನಗರಗಳ ಬಗ್ಗೆ, ಖಾಸಗಿ ಶಾಲೆಗಳ ವಿಷಯದಲ್ಲಿ ಮತ್ತು ಇಂಗ್ಲಿಷ್ ಮಾಧ್ಯಮ ಹಾಗೂ ಸಿಬಿಎಸ್‌ಇ, ಐಸಿಎಸ್‌ಇ ಪಠ್ಯ ಕುರಿತು ಮಕ್ಕಳಲ್ಲಿ ಅಷ್ಟೇ ಏಕೆ, ಪೋಷಕರಲ್ಲೂ ಮನೆ ಮಾಡಿಕೊಂಡಿರುವ ಮೇಲರಿಮೆಯನ್ನು ಕಳಚುವ ಕೆಲಸವನ್ನು ಶಿಕ್ಷಕರು ಮಾಡಬೇಕಿದೆ.

ಹಳ್ಳಿಯಲ್ಲಿ ಹುಟ್ಟಿ ಬೆಳೆದ, ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ, ಕನ್ನಡ ನಾಡಿಗೆ, ಕನ್ನಡ ಭಾಷೆಗೆ ಗಣನೀಯ ಸೇವೆ ಸಲ್ಲಿಸಿದ ಮಹನೀಯರ ಕುರಿತು ಶಿಕ್ಷಕರು ತರಗತಿಗಳಲ್ಲಿ ಮಕ್ಕಳಿಗೆ ಹೇಳಬೇಕಿದೆ. ಕರ್ನಾಟಕ ಸರ್ಕಾರದ ಆಡಳಿತದ ಚುಕ್ಕಾಣಿ ಹಿಡಿದು ರಾಜ್ಯವನ್ನು ಮುನ್ನಡೆಸಿದ ಬಹುತೇಕರು ಹಳ್ಳಿಯವರು ಮತ್ತು ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರು ಎಂಬ ಸತ್ಯವನ್ನು ಮಕ್ಕಳಿಗೆ ಮನವರಿಕೆ ಮಾಡಬೇಕಿದೆ. ಸರ್ಕಾರದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದವರು ಮತ್ತು ಸೇವೆ ಸಲ್ಲಿಸುತ್ತಿರುವ ಬಹಳ ಮಂದಿ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಓದಿದವರು ಎಂಬ ವಾಸ್ತವದ ಅರಿವನ್ನು ಮಕ್ಕಳಿಗೆ ಮೂಡಿಸುವುದರ ಮೂಲಕ ಅವರಲ್ಲಿ ಅನಗತ್ಯವಾಗಿ ತುಂಬಿಕೊಂಡಿರುವ ಕೀಳರಿಮೆಯನ್ನು ಹೋಗಲಾಡಿಸಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಕೋಟ್ಯಂತರ ಹಣ ರೈಟ್‌ಆಫ್?

ಕಳೆದ ಐದು ಹಣಕಾಸು ವರ್ಷಗಳಲ್ಲಿ ಬ್ಯಾಂಕುಗಳು ಒಟ್ಟು ₹ 9.91 ಲಕ್ಷ ಕೋಟಿ ಮೊತ್ತದ ಸಾಲವನ್ನು ‘ರೈಟ್‌ಆಫ್’ ಮಾಡಿವೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮಾಹಿತಿ ನೀಡಿದೆ ಎಂದು ವರದಿಯಾಗಿದೆ. ಈ ವರದಿ ಓದಿದೊಡನೆ ದಿಗ್ಭ್ರಮೆಯಾಯಿತು. ಸಾಲ ಕೊಟ್ಟ ನಂತರ ಅದನ್ನು ವಸೂಲು ಮಾಡುವುದು ಬ್ಯಾಂಕಿನ ಆದ್ಯ ಕರ್ತವ್ಯವಲ್ಲವೇ? ಸಣ್ಣ ಮನೆ ಕಟ್ಟಿಕೊಳ್ಳಲು ಸಾಲ ಪಡೆಯಲು ಬ್ಯಾಂಕ್‌ಗೆ ಹೋದಾಗ ಯಾಕಾದರೂ ಸಾಲಕ್ಕೆ ಬಂದೆವೋ ಎಂಬಷ್ಟು ನಿಯಮಗಳು ನಿಮ್ಮೆದುರು ತೆರೆದುಕೊಳ್ಳುತ್ತವೆ. ಸಾಲ ಮಾಡಿ ವಾಹನ ಕೊಂಡವರು ಒಂದೆರಡು ಕಂತು ಸಾಲ ಕಟ್ಟದಿದ್ದರೆ ನೋಟಿಸ್ ಮೇಲೆ ನೋಟಿಸ್ ನೀಡಿ ಮನೆಗೇ ಬರುತ್ತಾರೆ. ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಮನೆಯ ವಿದ್ಯುತ್ ಬಿಲ್ ಪಾವತಿಸುವಲ್ಲಿ ತಡವಾದರೆ ಸಂಪರ್ಕವನ್ನೇ ಕಡಿಯುತ್ತಾರೆ.

ಇಂತಹವೆಲ್ಲಾ ಇರುವಾಗ ಹತ್ತಾರು ಕೋಟಿ ಸಾಲ ಪಡೆದವರಲ್ಲಿ ಕೆಲವರು ಸಾಲ ಬೇಕೆಂದೇ ಕಟ್ಟದೆ ನುಂಗಿ ನೀರು ಕುಡಿದು ನಿರಾಳವಾಗಿರುತ್ತಾರೆ. ಅಂತಹವರಿಂದ ಸಾಲ ಮರುಪಾವತಿ ಮಾಡಿಸಿಕೊಳ್ಳಲು ಬ್ಯಾಂಕ್‌ಗಳಿಗೆ ಸಾಧ್ಯವಾಗದಿರುವುದು ಏಕೆ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಡೆಂಗಿ ಜ್ವರ: ಇರಲಿ ಮುನ್ನೆಚ್ಚರಿಕೆ

ಮಳೆಗಾಲದ ಈ ದಿನಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಡೆಂಗಿ ಜ್ವರದ ಹಾವಳಿ ಹೆಚ್ಚಾಗಿದೆ. ರಾಜ್ಯದಲ್ಲಿ ಜುಲೈ ತಿಂಗಳೊಂದರಲ್ಲೇ ಸಾವಿರಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಹಾಗಾಗಿ, ಸಾರ್ವಜನಿಕರು ತಮ್ಮ ಮನೆ ಮತ್ತು ಮನೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು.

ಕೆಲ ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ತಗ್ಗು ಪ್ರದೇಶ ಮತ್ತು ಹೊಂಡಗಳಲ್ಲಿ ನಿಂತ ನೀರು ಸೊಳ್ಳೆಗಳ ಉತ್ಪತ್ತಿಯ ತಾಣಗಳಾಗಿವೆ. ಇದು ರೋಗದ ಭೀತಿಯನ್ನು ಹೆಚ್ಚಿಸುವುದರಿಂದ ಸರ್ಕಾರವು ಡೆಂಗಿ ತಡೆಗಟ್ಟಲು ಕ್ರಮ ವಹಿಸಬೇಕಿದೆ. ಅಂತೆಯೇ ಸರ್ಕಾರಿ ಆಸ್ಪತ್ರೆಗಳಲ್ಲಿ ಅವ್ಯವಸ್ಥೆಯನ್ನು ಸರಿಪಡಿಸಿ ರೋಗ ಬಾಧಿತರಿಗೆ ಅನುಕೂಲ ಕಲ್ಪಿಸಿಕೊಡಲಿ.

ರಿಯಾಝ್ ಅಹ್ಮದ್, ರೋಣ

ಕಾಮನ್‌ವೆಲ್ತ್ ಕ್ರೀಡೆ: ಮಹಿಳೆಯರ ಚಾರಿತ್ರಿಕ ಸಾಧನೆ

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದ ಲಾನ್ ಬಾಲ್ಸ್ ರಿಂಕ್ಸ್‌ನಲ್ಲಿ ಭಾರತದ ಮಹಿಳಾ ತಂಡವು ಚಿನ್ನದ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ. ಈ ಕ್ರೀಡಾಕೂಟದಲ್ಲಿ ವೇಟ್ ಲಿಫ್ಟಿಂಗ್ ಹೊರತುಪಡಿಸಿ ದೊರೆತ ಮೊದಲ ಚಿನ್ನ ಇದಾಗಿರುವುದು ಮತ್ತೊಂದು ವಿಶೇಷ.

ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಭಾರತೀಯ ಕ್ರೀಡಾರಂಗದಲ್ಲಿ ಮಹಿಳಾ ಕ್ರೀಡಾಪಟುಗಳ ಸಂಖ್ಯೆ ಹೆಚ್ಚುತ್ತಿದ್ದು, ಅವರ ಸಾಧನೆಗೆ ಮತ್ತಷ್ಟು ಬೆಂಬಲ ದೊರೆತಿದೆ. ಬಾಲ್ಯದಲ್ಲೇ ಹೆಣ್ಣುಮಕ್ಕಳಿಗೆ ಅವರ ಆಸಕ್ತಿಯ ಕ್ರೀಡಾ ಕ್ಷೇತ್ರದಲ್ಲಿ ಪ್ರೋತ್ಸಾಹ ನೀಡಿದರೆ ದೇಶಕ್ಕೆ ಹೆಮ್ಮೆ ತರಬಲ್ಲರು ಎಂಬುದಕ್ಕೆ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿನ ಮಹಿಳೆಯರ ಸಾಧನೆಯೇ ಸಾಕ್ಷಿ.

ಮೇರಿ ಜಾರ್ಜ್, ಚಿತ್ರದುರ್ಗ

ಭೀಮ, ದುರ್ಯೋಧನ ಅಪ್ರಸ್ತುತರಲ್ಲ

‘ಭೀಮ, ದುರ್ಯೋಧನ ಸೇರಿ ರಾಮಾಯಣ ಮತ್ತು ಮಹಾಭಾರತದಲ್ಲಿನ ಪಾತ್ರಗಳನ್ನು ಒಳಗೊಂಡ ಪೌರಾಣಿಕ ನಾಟಕಗಳು ಈಗ ಅಪ್ರಸ್ತುತ’ ಎಂದು ಕವಿ ಪ್ರೊ.ನಾರಾಯಣ ಘಟ್ಟ ಹೇಳಿರುವುದು ವರದಿಯಾಗಿದೆ (ಪ್ರ.ವಾ., ಆ. 3). ಭಾರತೀಯರ ಪಾಲಿಗೆ ಮಹಾಕಾವ್ಯಗಳಾಗಿರುವ ಮಹಾಭಾರತ ಮತ್ತು ರಾಮಾಯಣದಲ್ಲಿನ ಪಾತ್ರಗಳು ಸದಾ ಕಾಲಕ್ಕೂ ಪ್ರಸ್ತುತವೇ. ಮಕ್ಕಳಿಗಷ್ಟೇ ಅಲ್ಲ, ದೊಡ್ಡವರೂ ಈ ಪಾತ್ರಗಳ ಮೂಲಕ ಕಲಿಯುವುದು ಬಹಳಷ್ಟಿದೆ.

ಈ ಕಾವ್ಯಗಳಲ್ಲಿನ ಪಾತ್ರಗಳ ಮೂಲಕ ಒಳಿತು– ಕೆಡುಕು, ಜೀವನ ಮೌಲ್ಯಗಳನ್ನು ಮನಗಾಣಬಹುದು. ಇವು ಅಪ್ರಸ್ತುತವಾಗಿದ್ದರೆ ಎಂದೋ ಇವು ಜನಮಾನಸದಿಂದ ಕಣ್ಮರೆಯಾಗಬೇಕಿತ್ತು. ಆದರೆ, ಜನಪದರಿಂದ ಹಿಡಿದು ಇಂದಿನವರೆಗೆ ಈ ಕಾವ್ಯಗಳು ಇನ್ನೂ ಜನರ ನಾಲಿಗೆಯ ಮೇಲಿರುವುದೇ ಅವುಗಳ ಪ್ರಸ್ತುತತೆಗೆ ಸಾಕ್ಷಿ.

ರಾಘವೇಂದ್ರ ಎಚ್., ಕುಕ್ಕವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿರೋಧಕ್ಕೆ ತರಾತುರಿಯೇಕೆ?

ಪಶ್ಚಿಮ ಘಟ್ಟ: ಪರಿಸರ ಸೂಕ್ಷ್ಮ ವಲಯ ಘೋಷಣೆ ಕರಡು ಅಧಿಸೂಚನೆ



• ಸಹದೇವ ಶಿವಪುರ



ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಲು ಕೇಂದ್ರ ಅರಣ್ಯ ಸಚಿವಾಲಯವು ಹೊರಡಿಸಿರುವ ಕರಡು ಅಧಿಸೂಚನೆಗೆ ರಾಜ್ಯದಲ್ಲಿ ಭಾರಿ ವಿರೋಧ ವ್ಯಕ್ತವಾಗಿದೆ. ರಾಜ್ಯದ ಮಲೆನಾಡು ಭಾಗದ ಶಾಸಕರು ಮತ್ತು ಸಂಸದರು ಪಕ್ಷಾತೀತವಾಗಿ ಈ ಕರಡು ಅಧಿಸೂಚನೆಯ ವಿರುದ್ಧ ಧ್ವನಿ ಎತ್ತಿದ್ದಾರೆ. ಕರಡು ಅಧಿಸೂಚನೆ ಬಂದು, ಅದಕ್ಕೆ ಆಕ್ಷೇಪಗಳನ್ನು ಸಲ್ಲಿಸಲು 60 ದಿನಗಳವರೆಗೆ (ಸೆಪ್ಟೆಂಬರ್ 6ರವರೆಗೆ) ಕಾಲಾವಕಾಶವಿತ್ತು. ಆದರೆ ಮಲೆನಾಡಿನ ರಾಜಕಾರಣಿಗಳೆಲ್ಲರೂ ಅತ್ಯಂತ ತರಾತುರಿಯಲ್ಲಿ ದೆಹಲಿಗೆ ಓಡಿಹೋಗಿದ್ದಾರೆ ಮತ್ತು ತಮ್ಮ ಆಕ್ಷೇಪಗಳನ್ನು ದಾಖಲಿಸಿದ್ದಾರೆ. ಕರಡು ಅಧಿಸೂಚನೆಯಲ್ಲಿ ಏನಿದೆ ಎಂಬುದನ್ನು ಪರಿಶೀಲಿಸುವ ಮತ್ತು ಅವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನೂ ಚುನಾಯಿತ ಜನಪ್ರತಿನಿಧಿಗಳು ಮಾಡಿಲ್ಲ.

ಕರಡು ಅಧಿಸೂಚನೆಗೆ ಇಷ್ಟೊಂದು ತರಾತುರಿಯಲ್ಲಿ ವಿರೋಧ ವ್ಯಕ್ತಪಡಿಸಲು ರಾಜಕಾರಣಗಳು, 'ಇದು ಜನರ ಪರವಾಗಿಲ್ಲ. ಹೀಗಾಗಿ ಜನರಿಗೆ ಒಳ್ಳೆಯದಾಗಲಿ ಎಂದು ವಿರೋಧ ವ್ಯಕ್ತಪಡಿಸುತ್ತಿದ್ದೇವೆ' ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಆದರೆ, ಈ ಕರಡು ಅಧಿಸೂಚನೆಯು ಹೇಗೆ ಜನ ವಿರೋಧಿಯಾಗಿದೆ ಎಂಬುದನ್ನು ವಿವರಿಸುವ ಗೋಜಿಗೆ ಯಾವ ರಾಜಕಾರಣಿಯೂ ಹೋಗಿಲ್ಲ. ಇದರಿಂದಲೇ ಕರಡು ಅಧಿಸೂಚನೆಯ ಬಗ್ಗೆ ಜನರಲ್ಲಿ ಗೊಂದಲ ಮೂಡಿದೆ.

ಶಾಸಕರು ಮತ್ತು ಸಂಸದರು ಜನರ ಒಳಿತಿಗಾಗಿಯೇ ಈ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದುಕೊಂಡರೆ, ಮಲೆನಾಡಿನ ಜನರಿಗೆ ಸಂಬಂಧಿಸಿದ ಇತರ ಸಮಸ್ಯೆಗಳ ಬಗ್ಗೆ ಇಷ್ಟೇ ಕಾಳಜಿ ಏಕಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಿದರೆ ಆ ಪ್ರದೇಶದಲ್ಲಿ ಇರುವ ಕಲ್ಲು ಮತ್ತು ಮರಳು ಗಣಿಗಾರಿಕೆಗಳನ್ನು ಹಂತಹಂತವಾಗಿ ಮುಚ್ಚಬೇಕಾಗುತ್ತದೆ. ಆ ಗಣಿಗಳಿಂದ ಇರುವ ಕೋಟ್ಯಂತರ ರೂಪಾಯಿ ಆದಾಯ ಖೋತಾ ಆಗುತ್ತದೆ. ಈ ಆದಾಯದಲ್ಲಿ ಸ್ಥಳೀಯ ರಾಜಕಾರಣಗಳಿಗೂ ಪಾಲು ಇದೆ ಮತ್ತು ಅವರಿಗೆ ಆದಾಯ ನಷ್ಟವಾಗುತ್ತದೆ ಎಂಬುದನ್ನು, ಅವರ ಈ ತರಾತುರಿಯು ತೋರಿಸುತ್ತದೆ. ರಾಜಕಾರಣಿಗಳು ಇದೇ ಕಾರಣಕ್ಕೆ ಈ ಕರಡು ಅಧಿಸೂಚನೆಯನ್ನು ವಿರೋಧಿಸುತ್ತಿದ್ದಾರೆ ಎಂದು ಪ್ರತಿಪಾದಿಸಲು ಹಲವು ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಪರಿಸರ ಸೂಕ್ಷ್ಮ ಪ್ರದೇಶ ಕರಡು ಅಧಿಸೂಚನೆಯನ್ನು ಸರ್ಕಾರವೇ ಕನ್ನಡಕ್ಕೆ ಭಾಷಾಂತರಿಸಿ ಜನರಿಗೆ ಹಂಚಬೇಕು ಎಂದು ಮಲೆನಾಡಿನ ಆಳುವ ವರ್ಗವು ಏಕೆ ಒತ್ತಾಯಿಸುತ್ತಿಲ್ಲ? ಕರಡು ಅಧಿಸೂಚನೆಯಲ್ಲಿರುವ ಯಾವ ಅಂಶವನ್ನು ಮುಚ್ಚಿಡಲು ಇವರು ಯತ್ನಿಸುತ್ತಿದ್ದಾರೆ? ಕನ್ನಡಕ್ಕೆ ಭಾಷಾಂತರಿಸಿ ಜನರಿಗೆ ಹಂಚಿದರೆ, ಅವರೇ ಓದಿಕೊಂಡು ಪ್ರಶ್ನಿಸುತ್ತಾರೆ ಎಂಬ ಭಯವೇ?
2. ಜಾಗತಿಕ ತಾಪಮಾನ ಮತ್ತು ಹವಾಮಾನ ವೈಪರೀತ್ಯದ ಬಿಸಿ ಈಗಾಗಲೇ ಮಲೆನಾಡಿಗರಿಗೆ ತಟ್ಟುತ್ತಿದೆ. ನಿಜವಾಗಿಯೂ ನಮ್ಮ ಶಾಸಕರು ಮತ್ತು ಸಂಸದರು ಜನಪರ ಕಾಳಜಿ ಹೊಂದಿದ್ದರೆ ಪಶ್ಚಿಮ ಘಟ್ಟದಲ್ಲಿ ತುರ್ತಾಗಿ ಈ ವಿಷಯದ ಬಗ್ಗೆ ಸ್ಥಳೀಯರಲ್ಲಿ ಯಾಕೆ ಅರಿವು ಮೂಡಿಸುತ್ತಿಲ್ಲ?
3. ಅತಿಯಾದ ವಾಣಿಜ್ಯೀಕರಣ ಮಾಡಬಾರದು ಎಂಬ ಉದ್ದೇಶದಿಂದ ಕೃಷಿ ಮತ್ತು ಸರ್ಕಾರಿ ಜಾಗಗಳನ್ನೂ ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸೇರಿಸಲಾಗಿದೆ. ರಕ್ಷಿತಾರಣ್ಯಗಳಿಗೆ ಅರಣ್ಯ ಮತ್ತು ವನ್ಯಜೀವಿ ಕಾಯ್ದೆಯ ರಕ್ಷಣೆ ಈಗಾಗಲೇ ಇದೆ. ಪರಿಸರ ಸೂಕ್ಷ್ಮ ಪ್ರದೇಶವನ್ನು ಬರೀ ಅರಣ್ಯ ಪ್ರದೇಶಗಳಿಗೆ ಸೀಮಿತವಾಗಿಡಿ ಎಂದು ರಾಜಕಾರಣಿಗಳು ಹೇಳುತ್ತಿರುವುದೇ ಹಾಸ್ಯಾಸ್ಪದ. ಅರಣ್ಯ ಪ್ರದೇಶದಲ್ಲಿ ಮರಳು ಮತ್ತು ಕಲ್ಲುಗಣಿಗಾರಿಕೆ ಮಾಡಲು ಅವಕಾಶವಿಲ್ಲ ಎಂಬುದು ರಾಜಕಾರಣಿಗಳಿಗೆ ಗೊತ್ತಿದೆ. ಅವರಿಗೆ ಸೇರಿರುವ ಗಣಿಗಾರಿಕೆಗಳ ಜಾಗಗಳೆಲ್ಲಾ ಇರುವುದು ಕೃಷಿ ಮತ್ತು ಸರ್ಕಾರಿ ಭೂಮಿಯಲ್ಲಿ. ಅದನ್ನು ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸೇರಿಸಿದರೆ ಇವರ ಆದಾಯ ಶೂನ್ಯವಾಗುತ್ತದೆ. ಆದ್ದರಿಂದ ಅವರು ದೆಹಲಿಗೆ ತರಾತುರಿಯಲ್ಲಿ ಓಡಿಹೋಗಿದ್ದಾರೆ. ಬದಲಿಗೆ ಇವರ್‍ಯಾರೂ ಜನರ ಪರವಾಗಿಯೂ ಇಲ್ಲ, ಪರಿಸರದ ಪರವಂತೂ ಇಲ್ಲವೇ ಇಲ್ಲ
4. ಜನರ ಹಿತಕ್ಕಾಗಿ ಈ ಕರಡು ಅಧಿಸೂಚನೆಯನ್ನು ವಿರೋಧಿಸುತ್ತಿದ್ದೇವೆ ಎಂದು ರಾಜಕಾರಣಿಗಳು ಹೇಳುತ್ತಿದ್ದಾರೆ. ಆದರೆ ಜನರ ಹಿತಕ್ಕಾಗಿ ತುರ್ತಾಗಿ ಆಗಬೇಕಿದ್ದ ಕೆಲಸಗಳನ್ನು ನಿರ್ಲಕ್ಷಿಸಲಾಗಿದೆ. ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ನಡೆದ ಭೂಕುಸಿತಕ್ಕೆ ಇನ್ನೂ ಪರಿಹಾರ ಬಂದಿಲ್ಲ. ಮಲೆನಾಡಿನಲ್ಲಿ ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲೆಗಳು ಮತ್ತು ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಮಂಗನ ಕಾಯಿಲೆಗೆ ಕಳೆದ ಹತ್ತು ವರ್ಷದಿಂದ ನೂರಾರು ಜನ ಸತ್ತರೂ, ಅಗತ್ಯ ಪ್ರಮಾಣದ ಲಸಿಕೆಗಳು ಪೂರೈಕೆಯಾಗುತ್ತಿಲ್ಲ. ಭೂರಹಿತರಿಗೆ ಭೂಮಿ ಒದಗಿಸುವ ಬಗ್ಗೆ ಚಿಂತನೆಯೇ ನಡೆದಿಲ್ಲ. ಅಡಿಕೆಯ ಹಳದಿ ರೋಗಕ್ಕೆ ಪರಿಹಾರ ಕಂಡುಕೊಂಡಿಲ್ಲ. ಇವು ಯಾವುವೂ ಜನರ ಹಿತಕಾಯುವ ವಿಷಯವಲ್ಲವೇ? ಇವುಗಳ ಪರಿಹಾರಕ್ಕೆ ತರಾತುರಿ ಏಕಿಲ್ಲ?
5. ಪಶ್ಚಿಮ ಘಟ್ಟವನ್ನು ಹಾದು ಹೋಗುವ ಕೆಲವು ಹೆದ್ದಾರಿಗಳ ವಿಸ್ತರಣೆ ಯೋಜನೆಗಳು ಚಾಲ್ತಿಯಲ್ಲಿವೆ. ಹಲವು ಯೋಜನೆಗಳು ಕಾರ್ಯಸಾಧ್ಯತಾ ಅಧ್ಯಯನದ ಹಂತದಲ್ಲಿವೆ. ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಿದರೆ, ಒಟ್ಟು 18 ಬೃಹತ್ ಯೋಜನೆಗಳು ನಿಂತು ಹೋಗುತ್ತವೆ. ಇಂತಹ ಯೋಜನೆಗಳ ಜಾರಿಯಲ್ಲಿ ಸ್ಥಳೀಯ ಶಾಸಕರು ಮತ್ತು ಸಂಸದರ ಪಾತ್ರ ಮಹತ್ವದ್ದಾಗಿರುತ್ತದೆ. ಯೋಜನೆ ರದ್ದಾದರೆ ಅದು ರಾಜಕಾರಣಿಗಳಿಗೆ ಹಿನ್ನಡೆಯಾಗುತ್ತದೆ

ಪಶ್ಚಿಮ ಘಟ್ಟ ಪ್ರದೇಶದ ಪ್ರಮುಖ ಯೋಜನೆಗಳು

1.	ಬೆಳಗಾವಿ –ಗೋವಾ ರಾಷ್ಟ್ರೀಯ ಹೆದ್ದಾರಿ ***(NH4A)*** ವಿಸ್ತರಣೆ
2.	ಕಾಳಿ ಹುಲಿ ಸಂರಕ್ಷಿತ ಅರಣ್ಯದಲ್ಲಿ ತಿನಾಯ್ ಘಾಟ್–ಕ್ಯಾಸಲ್ ರಾಕ್–ವಾಸ್ಕೋ (ಗೋವಾ) ಜೋಡಿ ರೈಲು ಮಾರ್ಗ
3.	ಕೈಗಾ ಅಣು ಸ್ಥಾವರದ ಐದನೇ ಹಾಗೂ ಆರನೇ ಘಟಕಗಳ ವಿಸ್ತರಣೆ
4.	ಹುಬ್ಬಳ್ಳಿ ಅಂಕೋಲಾ ರೈಲ್ವೆ ಯೋಜನೆ
5.	ಶಿರಸಿ – ಕುಮಟಾ ಹೆದ್ದಾರಿ ***(NH766E)*** ವಿಸ್ತರಣೆ
6.	ಶರಾವತಿ ಸಿಂಹಬಾಲದ ಸಿಂಗಳೀಕ ವನ್ಯಜೀವಿ ಅಭಯಾರಣ್ಯದಲ್ಲಿ 2000 ಮೆಗಾವಾಟ್ ಅಂತರ್ಗತ ಜಲವಿದ್ಯುತ್ ಯೋಜನೆ
7.	ಶರಾವತಿ ಕಣಿವೆಯಲ್ಲಿ ಸರ್ವಋತು ಜಲಪಾತ ಮತ್ತು ಪಂಚತಾರಾ ಹೋಟೆಲ್ ಇತ್ಯಾದಿ ಯೋಜನೆಗಳು
8.	ಸಾಗರ-ಸಿಗಂದೂರು-ಕೊಲ್ಲೂರು ರಸ್ತೆ ***(NH369E)*** ವಿಸ್ತರಣೆ
9.	ಶಿಕಾರಿಪುರ–ಹೊಸನಗರ–ನಗರ–ನಿಟ್ಟೂರು–ಬೈಂದೂರು ಮಾರ್ಗವಾಗಿ ಸಾಗುವ ***(NH766C)*** ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ
10.	ಆಗುಂಬೆ ಮತ್ತು ಸೋಮೇಶ್ವರ ವನ್ಯಜೀವಿ ಅಭಯಾರಣ್ಯವನ್ನು ಹಾದು ಹೋಗುವ ತೀರ್ಥಹಳ್ಳಿ–ಮಲ್ಪೆ 2 ಪಥಗಳ ರಾಷ್ಟ್ರೀಯ ಹೆದ್ದಾರಿ ***(NH169A)*** ವಿಸ್ತರಣೆ
11.	ಶಿವಮೊಗ್ಗ-ತೀರ್ಥಹಳ್ಳಿ-ಶೃಂಗೇರಿ-ಕಾರ್ಕಳ-ಮಂಗಳೂರು ರಾಷ್ಟ್ರೀಯ ಹೆದ್ದಾರಿ ***(NH169)*** ವಿಸ್ತರಣೆ
12.	ಚಾರ್ಮಾಡಿ ಘಾಟ ವಿಸ್ತರಣೆ
13.	ಪಣತ್ತೂರು (ಕೇರಳ)-ಭಾಗಮಂಡಲ-ಮಡಿಕೇರಿ-ಮೈಸೂರು ರಸ್ತೆ ವಿಸ್ತರಣೆ
14.	ಮೈಸೂರು-ಕುಶಾಲನಗರ-ಮಡಿಕೇರಿ ರೈಲ್ವೆ ಯೋಜನೆ

'ಜೀವಸಂಕುಲದ ಉಳಿವಿಗೆ ಬೇಕು ಪಶ್ಚಿಮ ಘಟ್ಟ'



ಪಶ್ಚಿಮ ಘಟ್ಟವನ್ನು ಪಾರಂಪರಿಕ ತಾಣ ಎಂದು ಘೋಷಿಸಬೇಕು ಎಂಬ ನಮ್ಮ ಬೇಡಿಕೆ ಹಲವು ವರ್ಷಗಳಿಂದಲೂ ಬೇಡಿಕೆಯಾಗಿಯೇ ಇದೆ. ವರದಿಗಳು ಕಡತದಲ್ಲಿ ಉಳಿದವೇ ಹೊರತು ಕಾರ್ಯರೂಪಕ್ಕೆ ಬರಲಿಲ್ಲ. ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವ ವಿಚಾರದಲ್ಲೂ ವಿಳಂಬವಾಗುತ್ತಿದೆ. ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಿದರೆ ಅಭಿವೃದ್ಧಿ ಕಾರ್ಯಕ್ಕೆ ಅವಕಾಶ ಇಲ್ಲ ಎಂಬುದು ವಿರೋಧ ವ್ಯಕ್ತಪಡಿಸುವವರು ಹೇಳುವ ಮಾತು.

ಕಾಡಿನ ಆರೋಗ್ಯವನ್ನು ಹದಗೆಡಿಸಿ ಅಭಿವೃದ್ಧಿ ಮಾಡಲು ಹೊರಟರೆ ಆ ಪ್ರದೇಶದಲ್ಲಿರುವ ಜನರು ತೊಂದರೆ ಅನುಭವಿಸುವುದು ಖಚಿತ. ಕೊಡಗು, ಉತ್ತರ ಕನ್ನಡದ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಎರಡು ವರ್ಷಗಳಲ್ಲಿ ಈ ಜಿಲ್ಲೆಗಳಲ್ಲಿ ಹಲವು ಕಡೆ ಗುಡ್ಡಗಳು ಕುಸಿದು ಅನಾಹುತಗಳೇ ಉಂಟಾಗಿವೆ. ಪ್ರಕೃತಿಯನ್ನು ಹಾಳು ಮಾಡಿ ಅಭಿವೃದ್ಧಿ ಮಾಡಿದರೆ ಮನುಕುಲಕ್ಕೆ ಬದುಕಲು ಸಾಧ್ಯವೇ? ಇರುವ ಅರಣ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಅಪರೂಪದ, ವೈವಿಧ್ಯಮಯ ಜೀವ ಸಂಕುಲಕ್ಕೆ ಆಶ್ರಯ ಒದಗಿಸಿರುವ ಪಶ್ಚಿಮ ಘಟ್ಟವನ್ನು ಉಳಿಸಲು ಕಸ್ತೂರಿರಂಗನ್ ವರದಿ ಜಾರಿಗೆ ಬರಬೇಕು.

ಆರ್.ಕೆ.ಮಧು, ವನ್ಯಜೀವಿ ಛಾಯಾಗ್ರಾಹಕ, ಗುಂಡ್ಲುಪೇಟೆ

ಸಂರಕ್ಷಣೆಯ ಇತರ ಸಾಧ್ಯತೆಗಳು

ಪಶ್ಚಿಮ ಘಟ್ಟದ ಸಂರಕ್ಷಣೆಗೆ ಸಂಬಂಧಿಸಿದಂತೆ ನೀಡಲಾಗಿರುವ ಯಾವುದೇ ವರದಿಗಳನ್ನು ಅನುಷ್ಠಾನ ಮಾಡದೇ ಇದ್ದರೂ, ಸಂರಕ್ಷಣೆಯ ಬೇರೆ ಸಾಧ್ಯತೆಗಳೂ ಇವೆ. ಅವು ಈ ಮುಂದಿನಂತಿವೆ.

1. ಸಂವಿಧಾನದ 371 (ಎ) ವಿಧಿಯ ಅಡಿ ಈಶಾನ್ಯ ರಾಜ್ಯಗಳಿಗೆ ನೀಡಿರುವಂತಹ ವಿಶೇಷ ಸ್ಥಾನವನ್ನು ಪಶ್ಚಿಮ ಘಟ್ಟಗಳಿಗೂ ನೀಡಬಹುದು.
2. ಹೊರಗಿನವರು ಅಥವಾ ಹೊರರಾಜ್ಯದವರು ಪಶ್ಚಿಮ ಘಟ್ಟದಲ್ಲಿ ಭೂಹಕ್ಕು ಪಡೆಯದಂತೆ ಕರ್ನಾಟಕ ಭೂ ಸುಧಾರಣೆ ಕಾನೂನಿಗೆ ತಿದ್ದುಪಡಿ ತರಬಹುದು. ಇದಕ್ಕಾಗಿ ವಲಸೆ ನೀತಿಯನ್ನೂ ರಚಿಸಬಹುದು.
3. ಪಟ್ಟಣಗಳ ಕಲುಷಿತ ನೀರು ಪಶ್ಚಿಮ ಘಟ್ಟ ಸೇರಿ, ಗಣನೀಯ ಹಾನಿಯನ್ನುಂಟು ಮಾಡುತ್ತಿವೆ. ಹೀಗಾಗಿ ಮಲಿನಯುಕ್ತ ನೀರನ್ನು ಪಟ್ಟಣಗಳಲ್ಲೇ ಸಂಸ್ಕರಿಸಿ ಮರುಬಳಕೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.
4. ಪರಿಸರ ಸೂಕ್ಷ್ಮ ಪ್ರದೇಶದ ರೈತರುಗಳಿಗೆ ಹೆಚ್ಚುವರಿ ಭದ್ರತೆ ನೀಡುವ ಸಲುವಾಗಿ ಗರಿಷ್ಠ ಬೆಂಬಲ ಬೆಲೆಯನ್ನು ನೀಡುವುದು ಹಾಗೂ ಸಂರಕ್ಷಣೆಯ ಸಲುವಾಗಿ ನೈಸರ್ಗಿಕ ಸೇವೆಗಳಿಗೆ ಬೆಲೆ ನೀಡುವಂತೆ ತಿದ್ದುಪಡಿ ಮಾಡಬೇಕು.
5. ಮಾನವ-ವನ್ಯಜೀವಿ ಸಂಘರ್ಷದಲ್ಲಿ ನಷ್ಟವಾಗುವ ರೈತರಿಗೆ ಇನ್ನೂ ಹೆಚ್ಚಿನ ಪರಿಹಾರವನ್ನು ತ್ವರಿತವಾಗಿ ನೀಡುವ ವ್ಯವಸ್ಥೆಯಾಗಬೇಕು.
6. ಪಾರಂಪರಿಕವಾಗಿ ಬೆಳೆಯುವ ಭತ್ತದ ತಳಿಗಳ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವಂತೆ ನರೇಗಾ ಯೋಜನೆಯನ್ನು ವಿಸ್ತರಿಸಬೇಕು. ಈ ಮೂಲಕ ರಾಸಾಯನಿಕ ಗೊಬ್ಬರಗಳ ಬಳಕೆ ಕಡಿಮೆ ಮಾಡಬೇಕು.
7. ಗುಡ್ಡಗಾಡುಗಳಿಗೆ ಸೂಕ್ತವಾಗುವಂತೆ ವೈಜ್ಞಾನಿಕ ಆಧಾರಿತ ನಿಯಮಗಳಿಗೆ ಒಳಪಟ್ಟು ಮನೆಗಳನ್ನು ನಿರ್ಮಿಸುವುದು ಹಾಗೂ ಯಾವುದೇ ಕಾರಣಕ್ಕೂ ನೆಲ ಕುಸಿಯದಂತಹ ಪೂರಕ ಅಂದರೆ, ಅರಣ್ಯ ಬೆಳೆಸುವಂತೆ ನೋಡಿಕೊಳ್ಳಬೇಕು.
8. ಪರಿಸರ ಸೂಕ್ಷ್ಮ ಪ್ರದೇಶದ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಹಾಗೂ ಉಪ ವಿಭಾಗಾಧಿಕಾರಿಗಳಿಗೆ ಮತ್ತು ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ಮಟ್ಟದ ಅಧಿಕಾರಿಗಳಿಗೆ ಇಲ್ಲಿನ ಜೀವಿವೈವಿಧ್ಯದ ಕುರಿತಾಗಿ ಜಾಗೃತಿ ಮೂಡಿಸಬೇಕು ಮತ್ತು ಆ ಮೂಲಕ ಬೇಕಾಬಿಟ್ಟಿ ಭೂಪರಿವರ್ತನೆಯಾಗದಂತೆ ನೋಡಿಕೊಳ್ಳುವುದು.

ಪರಿಸರವನ್ನು ಕಾಪಾಡಿಕೊಳ್ಳುವ ಮೂಲಕ ಶುದ್ಧಗಾಳಿ, ನೀರು, ಆಹಾರ ಭದ್ರತೆ ನೀಡುವುದು ಆಳುವ ವರ್ಗದ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿರುತ್ತದೆ. ಹೀಗಾಗಿ ಪಶ್ಚಿಮ ಘಟ್ಟಗಳ ರಕ್ಷಣೆಗೆ ರಾಜಕಾರಣಿಗಳು ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಬದಲಿಗೆ ಅಭಿವೃದ್ಧಿಯ ಹೆಸರಿನಲ್ಲಿ ಪಶ್ಚಿಮ ಘಟ್ಟಗಳನ್ನು ಕಳೆದುಕೊಂಡರೆ, ಈ ಎಲ್ಲಾ ಭದ್ರತೆಗಳ ತಳಪಾಯವೇ ಕುಸಿದುಹೋಗುತ್ತದೆ.

ಲೇಖಕ: ಪಶ್ಚಿಮಘಟ್ಟ ಜಾಗೃತಿ ವೇದಿಕೆಯ ಮುಂದಾಳು, ಕೊಪ್ಪ, ಚಿಕ್ಕಮಗಳೂರು

'ಕೆಲವು ಬದಲಾವಣೆ ಅಗತ್ಯ'


ಪ್ರಪಂಚದಲ್ಲಿ ಇರುವುದೊಂದೇ ಪಶ್ಚಿಮ ಘಟ್ಟ ಅದರ ರಕ್ಷಣೆ ನಮ್ಮೆಲ್ಲರ ಹೊಣೆ. ಮುಂದಿನ ಜನಾಂಗಕ್ಕೆ ನಾವು ರಕ್ಷಿಸದೇ ಹೋದರೆ, ಅವರ ಶಾಪ ನಮಗೆ ತಟ್ಟುತ್ತದೆ. ಅದರಿಂದ ಭೀಕರ ಪರಿಣಾಮಗಳಾಗುವುದರಲ್ಲಿ ಸಂದೇಹವಿಲ್ಲ. ಆದರೆ, ಪಶ್ಚಿಮ ಘಟ್ಟ ಸಂರಕ್ಷಣೆಗಾಗಿ ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ ಕೆಲವು ಬದಲಾವಣೆಗಳ ಅಗತ್ಯವಿದೆ. ಅವು ಈ ಮುಂದಿನಂತಿವೆ

1. ಬೃಹತ್ ಗಣಿಗಾರಿಕೆ, ಬೃಹತ್ ಉಷ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶ ನೀಡಬಾರದು.
2. ಪರಿಸರ ಸೂಕ್ಷ್ಮ ಪ್ರದೇಶದ ಹಳ್ಳಿಗಳು ರೈತರನ್ನು, ವನವಾಸಿಗಳನ್ನು, ಬುಡಕಟ್ಟು ಜನಾಂಗದವರನ್ನು ಒಕ್ಕಲೆಬ್ಬಿಸಬಾರದು. ರೈತರ ಪಾರಂಪರಿಕ ಉದ್ಯೋಗಕ್ಕೆ ಯಾವುದೇ ತೊಂದರೆಯಿಲ್ಲವೆಂದು ಘೋಷಿಸಬೇಕು.
3. ಹಳ್ಳಿಗಳಲ್ಲಿನ ಕೆರೆ, ನಿಸರ್ಗ, ಅರಣ್ಯ ಸಮೃದ್ಧಿಗಳು, ಕಾಡು, ಡೀಮ್ಡ್ ಅರಣ್ಯ ಯಥಾಸ್ಥಿತಿಯಲ್ಲಿ ಮುಂದುವರೆಯಬೇಕು ಎಂದು ನಮೂದಿಸಬೇಕು.
4. ಪಶ್ಚಿಮ ಘಟ್ಟದಲ್ಲಿ ಹಸಿರುಬೆಳೆಗೆ ಉತ್ತೇಜಿಸುವುದು. ಬೆಳೆಗಾರರನ್ನು ಸಾವಯುವ ಕೃಷಿಯೆಡೆಗೆ ಸೆಳೆಯುವುದು. ಉತ್ಪನ್ನಗಳನ್ನು ವಿಶ್ವ ಮಾರುಕಟ್ಟೆಯಲ್ಲಿ ಬೇರೆ ಬೇರೆ ಬ್ರ್ಯಾಂಡ್ ಸೃಷ್ಟಿಸಲು ಪ್ರೋತ್ಸಾಹಿಸಬೇಕು.
5. ಪರಿಸರ ಸೂಕ್ಷ್ಮ ಹಳ್ಳಿಗಳೆಂದು ಘೋಷಿಸಿದ ಗ್ರಾಮದ ರೈತರ ಬದುಕಿಗೆ ಯಾವುದೇ ತೊಂದರೆ ಇರಬಾರದು.
6. ಗ್ರಾಮ ಸಭೆಗಳ ಮತ್ತು ಸಮುದಾಯ ಅಭಿಪ್ರಾಯ ಕೇಳದೇ ಯಾವುದೇ ಯೋಜನೆಗಳನ್ನು ಜಾರಿ ಮಾಡಬಾರದು.
7. ಪಾರಂಪರಿಕ ಸೇವೆಗಳನ್ನು ನೀಡುವ ಹಳ್ಳಿಗಳಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರವು ಈ ಹಳ್ಳಿಗಳ ಅಭಿವೃದ್ಧಿಗಾಗಿ ಅತಿ ಹೆಚ್ಚಿನ ಅನುದಾನಗಳನ್ನು ನೀಡಬೇಕು.
8. ಗ್ರಾಮ ಪಂಚಾಯಿತಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪರಿಸರ ಸೂಕ್ಷ್ಮ ಹಳ್ಳಿಗಳಲ್ಲಿ ಕನ್ನಡದಲ್ಲಿ ಕರಡು ಅಧಿಸೂಚನೆ ಪ್ರಕಟಿಸಿ ಗ್ರಾಮದ ಜನರಿಗೆ ತಿಳಿಸಿ ಅವರ ಅಭಿಪ್ರಾಯ ಪಡೆದು ಜನರಿಗೆ ಅನುಕೂಲವಾಗುವಂತೆ ಪಶ್ಚಿಮ ಘಟ್ಟವನ್ನು ಸಂರಕ್ಷಿಸಿ ಕಾಪಾಡುವ ನಿರ್ಣಯವಿರಬೇಕು.
9. ಪಶ್ಚಿಮ ಘಟ್ಟವಿರುವ ಸೂಕ್ಷ್ಮ ಪ್ರದೇಶದ ಅಭಿವೃದ್ಧಿಗೆ ಸ್ಥಳೀಯರನ್ನೊಳಗೊಂಡ ಉನ್ನತ ಮಟ್ಟದ ಸಮಿತಿ ರಚಿಸಬೇಕು.



ಕವಲಕೋಡು ಕೆ.ವೆಂಕಟೇಶ.,
ಸದಸ್ಯ, ಕರ್ನಾಟಕ ಜೀವ ವೈವಿಧ್ಯ ಮಂಡಳಿ


ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು



ಕನ್ಸರ್ವೇಟಿವ್ ಪಕ್ಷದ ನಾಯಕ ರಿಷಿ ಸುನಕ್ ಬ್ರಿಟನ್‌ನ, ಭಾರತೀಯ ಮೂಲದ ಮೊದಲ ಪ್ರಧಾನ ಮಂತ್ರಿಯಾಗುತ್ತಾರೆ ಎಂದು ನೀವು ಭಾವಿಸುತ್ತೀರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 190


ಶಿವನ ಕ್ಷಮೆ ಕೋರಿದ ದೇವತೆಗಳು

ದೇವತೆಗಳು ಶಿವನಲ್ಲಿ ಕ್ಷಮೆ ಯಾಚಿಸಲು ಕೈಲಾಸಕ್ಕೆ ಬಂದು ಪ್ರಾರ್ಥಿಸುತ್ತಾರೆ: 'ಓ ಮಹಾದೇವನೆ, ಲೋಕಾಚಾರದಂತೆ ಓರ್ವ ಸಾಮಾನ್ಯದೇವನಂತೆ ನೀನು ಕಂಡರೂ, ವಾಸ್ತವದಲ್ಲಿ ನೀನು ಬ್ರಹ್ಮವಸ್ತು, ಅಖಂಡ ಜಗತ್ತಿನ ಒಡೆಯ. ನೀನೇ ಪರಮೇಶ್ವರನೆಂದು ನಮಗೂ ತಿಳಿದಿದೆ. ಹೀಗಿದ್ದರೂ, ನಿನ್ನ ಮಹಾಮಾಯೆಯಿಂದ ನಮ್ಮನ್ನು ಸುಮ್ಮನೆ ಏಕೆ ಮೋಹಗೊಳಿಸಿ, ನಿನ್ನ ದ್ವೇಷಿಸುವಂತೆ ಮಾಡುವೆ. ವೃಥಾ ಪರೀಕ್ಷೆಗಳನ್ನೊಡ್ಡಿ ನಮ್ಮನ್ನು ಸಂಕಷ್ಟಕ್ಕೆ ಸಿಲುಕಿಸಬೇಡ. ಜಗತ್ತಿಗೆ ಆದಿ ಮತ್ತು ಅಂತ್ಯ ಎಲ್ಲವೂ ನೀನೆ. ಪ್ರಕೃತಿ ಮತ್ತು ಪುರುಷರುಗಳ ಕರ್ತ. ನಿನ್ನ ಸ್ವರೂಪವು ಮನಸ್ಸು ಮತ್ತು ವಾಕ್ಕುಗಳಿಗೆ ನಿಲುಕದಂತಹುದು. ರೇಶಿಮೆಹುಳುವು ದಾರವನ್ನು ನೇಯ್ದು, ಅದರೊಳಗೆ ತಾನೇ ಸೇರಿ, ಕೊನೆಗೆ ತೂರಿ ಬರುವಂತೆ ನಿನ್ನ ಇಚ್ಛೆಯಿಂದಲೇ ಜಗತ್ತನ್ನು ಸೃಜಿಸುವೆ, ಪಾಲಿಸುವೆ, ಮತ್ತೆ ನೀನೆ ಸಂಹರಿಸುವೆ.

'ಓ ಪ್ರಭು, ದೇವತೆಗಳಿಗಾಗಿ ಯಜ್ಞಾದಿಕರ್ಮಗಳನ್ನು ನೀನೇ ದಯೆಯಿಂದ ಸೃಜಿಸಿರುವೆ. ಲೋಕಾಚಾರಗಳು ನಿನ್ನಿಂದಲೇ ನಿಂತಿವೆ. ಅವುಗಳನ್ನು ವೇದವಿತ್ತುಗಳಾದ ನಾವು ಶ್ರದ್ಧೆಯಿಂದ ಆಚರಿಸುವೆವು. ಯಾಗದಲ್ಲಿ ಮಂಗಳವನ್ನೋ ಅಮಂಗಳವನ್ನೋ ಅಥವಾ ಮಿಶ್ರಫಲವನ್ನೋ, ಅವರವರ ಕರ್ಮಕ್ಕೆ ತಕ್ಕಂತೆ ಕೊಡುವವನು ನೀನೇ ಆಗಿರುವೆ. ನಿನ್ನನ್ನು ವೇದವೂ ಹೊಗಳುವುದು. ಆದರೆ ಕೆಲವರು ಮೂಢರು ಅಸೂಯೆಯಿಂದ ಮಹಾತ್ಮರನ್ನು ನಿಂದಿಸುವರು. ಅಂಥವರನ್ನ ನೀನೇ ಶಿಕ್ಷಿಸುವೆ. ಓ ಪರಮೇಶ್ವರ, ನಮ್ಮಲ್ಲಿ ಅನುಗ್ರಹವನ್ನು ಮಾಡು. ನೀನು ಜಗತ್ತನ್ನು ಸೃಜಿಸುವ ಪ್ರಜಾಪತಿಗಳನ್ನೇ ಸೃಷ್ಟಿಸುವವನು. ಮಾಯಿಕವಾದ ತ್ರಿಗುಣಸ್ವರೂಪನಾದ ಪರಮೇಶ್ವರನಾದ ನಿನಗೆ, ನಿಜವಾಗಿ ಗುಣಗಳ ಸಂಬಂಧವಿಲ್ಲ. ಪ್ರಕೃತಿಪುರುಷರಿಗಿಂತಲೂ ಉತ್ಕೃಷ್ಟನಾದವನು. ಸಂಸಾರರೂಪನೂ ಭೂರೂಪನೂ ಜಲರೂಪನೂ ಸುಖರೂಪನೂ ಗಂಧಸ್ವರೂಪನೂ ಅಗ್ನಿರೂಪನೂ ವಾಯುರೂಪನೂ ಸ್ಪರ್ಶರೂಪನೂ ಚಂದ್ರರೂಪನೂ ಕರ್ಮರೂಪನೂ ಯಜಮಾನಸ್ವರೂಪನೂ ಆಕಾಶಸ್ವರೂಪನೂ ಶಬ್ದಸ್ವರೂಪನೂ ಪಾಪಿಗಳಿಗೆ ಭಯಂಕರನೂ ಪುಣ್ಯವಂತರಿಗೆ ಸೌಮ್ಯರೂಪನು. ನಿನಗೆ ಜನ್ಮವಿಲ್ಲ, ಜಗತ್ತಿಗೆ ನೀನೇ ಆದಿಕಾರಣನು. ನೀನು ಒಬ್ಬನೇ; ಜಗತ್ತಿನಲ್ಲಿ ಅನೇಕ ಜೀವರೂಪಗಳಿಂದ ಜನಿಸಿರುವೆ.

'ಓ ದೇವ, ಈ ಜಗತ್ತನ್ನು ಎಂಟು ಮೂರ್ತಿಗಳಾಗಿ ನೀನು ಧರಿಸಿರುವೆ. ಆದಕಾರಣ ನಿನಗೆ ಅಷ್ಟಮೂರ್ತಿ ಎಂದು ಹೆಸರು. ನೀನು ಆದಿಪುರುಷನು, ದಯಾಮಯನು, ನಿನ್ನ ಭಯದಿಂದ ಗಾಳಿಯು ಬೀಸುವನು, ನಿನ್ನ ಭಯದಿಂದಲೇ ಅಗ್ನಿಯೂ ಉರಿಯುವನು. ನಿನ್ನ ಭಯದಿಂದಲೇ ಸೂರ್ಯನು ಬೆಳಗುವನು. ಮೃತ್ಯುವು ನಿನ್ನ ಹೆದರಿಕೆಯಿಂದ ದೂರ ಓಡುವನು. ದಯಾಮಯ, ಪ್ರಸನ್ನನಾಗು. ದುಃಖಿತರೂ ಮೂಢರೂ ಆದ ನಮ್ಮನ್ನು ಸಲಹುವವನಾಗು. ಅನೇಕ ಆಪತ್ತುಗಳಲ್ಲಿ ಹಿಂದೆ ನೀನೇ ನಮ್ಮನ್ನು ಸಲಹಿರುವೆ. ಈಗಲೂ ನಮ್ಮನ್ನು ಸಲಹಬೇಕು. ದಕ್ಷಯಜ್ಞವನ್ನು ಉದ್ಧರಿಸಿ ಸಮಾಪ್ತಗೊಳಿಸು. ಭಗನು ತನ್ನ ಕಣ್ಣುಗಳನ್ನು ತಿರುಗಿ ಪಡೆಯಲಿ, ದಕ್ಷನು ಬದುಕುವಂತೆ ಮಾಡು. ಪೂಷನ ಹಲ್ಲುಗಳು ತಿರುಗಿ ಬೆಳೆಯಲಿ. ಭೃಗುಮುನಿಯ ಕೂದಲುಗಳು ಮೊದಲಿನಂತೆ ಬೆಳೆಯಲಿ. ನಿನ್ನ ಅನುಗ್ರಹದಿಂದ ದೇವತೆಗಳು ಮುಂತಾದವರು ಆರೋಗ್ಯವನ್ನು ಹೊಂದಲಿ. ಅವರಿಗೆ ವೀರಭದ್ರನ ಆಯುಧಪ್ರಹಾರಗಳ ನೋವುಗಳು ಶಮನವಾಗಲಿ. ಮುಂದೆ ಎಲ್ಲಾ ಯಜ್ಞದಲ್ಲೂ ನಿನಗೆ ಅಗ್ರವಾದ, ಪೂರ್ಣಭಾಗವನ್ನು ಕಲ್ಪಿಸುವೆವು. ಹಿಂದೆ ಮಾಡಿರುವ ತಪ್ಪನ್ನು ಮುಂದೆಂದೂ ಮಾಡುವುದಿಲ್ಲ' ಎಂದು ಬ್ರಹ್ಮ, ವಿಷ್ಣು ಮತ್ತು ಇಂದ್ರಾದಿ ದೇವತೆಗಳು ಅಂಜಲಿಬದ್ಧರಾಗಿ ಪ್ರಾರ್ಥಿಸುತ್ತಾ, ತಮ್ಮನ್ನು ಕ್ಷಮಿಸುವಂತೆ ಶಿವನನ್ನು ಬೇಡಿಕೊಂಡರು ಎಂಬಲ್ಲಿಗೆ ಸತೀಖಂಡದ ನಲವತ್ತೊಂದನೆ ಅಧ್ಯಾಯ ಮುಗಿಯುತ್ತದೆ. •

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸಲ್ಲದ ಉತ್ಸಾಹ

ಎಲ್ಲ ಬರಿ ಗೊಣಗಾಟ, ತಿಣಕಾಟ, ತಡಕಾಟ |
ಇಲ್ಲ ನಮಗೂರೆಕೋಲ್, ತಿಳಿಬೆಳಕುಮಿಲ್ಲ ||
ಬಲ್ಲತನ ಮಬ್ಬಿನಲಿ ನಿದ್ರಿಸದೆ ತೆವಳುವುದು |
ಸಲ್ಲದುಬ್ಬಟೆ ನಮಗೆ – ಮಂಕುತಿಮ್ಮ || 686 ||

ಪದ-ಅರ್ಥ: ನಮಗೂರೆಕೋಲ್ = ನಮಗೆ + ಊರೆಕೋಲ್(ಊರುಗೋಲು), ತಿಳಿಬೆಳಕುಮಿಲ್ಲ = ತಿಳಿಬೆಳಕುಂ + ಇಲ್ಲ, ಬಲ್ಲತನ = ತಿಳುವಳಿಕೆ,

ಸಲ್ಲದುಬ್ಬಟೆ = ಸಲ್ಲದ + ಉಬ್ಬಟೆ(ಉತ್ಸಾಹ, ಮೆರೆತ)

ವಾಚ್ಯಾರ್ಥ: ನಮ್ಮ ಜೀವನದಲ್ಲಿ ಬರೀ ಗೊಣಗಾಟ, ತಿಣಕಾಟ ಮತ್ತು ತಡಕಾಟಗಳೇ ಆಗಿವೆ. ಗಟ್ಟಿಯಾಗಿ ಬದುಕು ಸಾಗಿಸಲು ನಮಗೊಂದು ಊರುಗೋಲಾಗಲೀ, ತಿಳಿಬೆಳಕಾಗಲಿ ಇಲ್ಲ.

ತಿಳಿದಿದ್ದೇವೆ ಎಂಬ ಭ್ರಮೆಯ ಮಬ್ಬಿನಲ್ಲಿ, ನಿದ್ರಿಸದೆ, ಜೀವನ ತೆವಳಿಕೊಂಡು ಸಾಗುತ್ತಿದೆ. ಮೈಮರೆತು ಮೆರೆಯುವುದು ಬೇಡ.

ವಿವರಣೆ: ಪ್ರತಿಯೊಬ್ಬ ಮನುಷ್ಯನಿಗೂ ಅವನದೇ ಆದ ಒಂದು ವ್ಯಕ್ತಿತ್ವವಿದೆಯೆಂದು ನಂಬುತ್ತೇವೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಒಂದು ಎಂದು ತೋರಿದ ವ್ಯಕ್ತಿತ್ವದಲ್ಲಿ ನೂರಾರು ವ್ಯಕ್ತಿತ್ವಗಳು ಅಡಗಿವೆ. ಒಬ್ಬ ವ್ಯಕ್ತಿ ಏನೋ ಮಾಡಬೇಕೆಂದು ನಿರ್ಧರಿಸುತ್ತಾನೆ. ಸ್ವಲ್ಪ ಸಮಯದ ನಂತರ ತೀರ್ಮಾನವನ್ನು ಬದಲಾಯಿಸುತ್ತಾನೆ ನಿರ್ಧರಿಸಿದಾಗ ಒಂದು ವ್ಯಕ್ತಿತ್ವ, ಅದರ ವಿರುದ್ಧವಾಗಿ ತೀರ್ಮಾನಿಸಿದಾಗ ಮತ್ತೊಂದು ವ್ಯಕ್ತಿತ್ವ. ಒಂದೊಂದು ಸನ್ನಿವೇಶದಲ್ಲಿ ಒಂದೊಂದು ವ್ಯಕ್ತಿತ್ವ ಕಾಣುತ್ತದೆ. ಮನೆಯಲ್ಲಿ ಜೋರು ಮಾಡುವ ಯಜಮಾನ ಆಫೀಸಿನಲ್ಲಿ ಗುಲಾಮನಂತಿರುತ್ತಾನೆ. ದೇವಾಲಯದಲ್ಲಿ ಭಕ್ತ. ಆದರೆ ವ್ಯಾಪಾರದಲ್ಲಿ ವಂಚಕ. ಅತ್ಯಂತ ಪ್ರೀತಿಯ ಹೆಂಡತಿಯಾಗಿದ್ದವಳು, ಗಂಡನನ್ನು ಕೊಲ್ಲಿಸಿದಾಗ ಬೇರೆಯೇ ವ್ಯಕ್ತಿ. ಇಂದಿನ ಸಂಕೀರ್ಣವಾದ ಸಾಮಾಜಿಕ ಪರಿಸ್ಥಿತಿಯಲ್ಲಿ, ಹಲವು ಪ್ರಭಾವಗಳ ಒತ್ತಡದಿಂದ, ಆದರ್ಶಗಳ ಸೆಳೆತಗಳಿಂದ, ವ್ಯಕ್ತಿ ಕ್ಷಣಕ್ಷಣಕ್ಕೆ ಬದಲಾಗುತ್ತಾನೆ. ಇವು ಮಾನಸಿಕ ಸಂಘರ್ಷವನ್ನುಂಟು ಮಾಡುತ್ತವೆ. ಆಗ ತಲೆ ಎತ್ತುವುವು ಗೊಣಗಾಟ, ತಿಣಕಾಟ ಮತ್ತು ತಡಕಾಟಗಳು. ಮನ ನೊಂದು, ಕುದಿದು ಕುಲುಮೆಯಾಗುತ್ತದೆ. ದಾರಿ ತಪ್ಪುತ್ತದೆ. ಆ ಸಂದರ್ಭದಲ್ಲಿ ತಿಳುವಳಿಕೆಯ ಬೆಳಕು ತೋರದು. ಧೈರ್ಯ ನೀಡಲು ಯಾವ ಊರುಗೋಲೂ ಸಿಗದೆ ಜೀವ ತಡಕಾಡುತ್ತದೆ. ಹಂಪೆಯ ಹೇಮಗಲ್ಲಿನ ವಚನಕಾರ ಹೇಮಗಲ್ಲ ಹಂಪ, ಸಿದ್ಧಮಲ್ಲಿನಾಥನೆಂಬ ಅಂಕಿತದಲ್ಲಿ ಬರೆದ ವಚನ ಹೀಗಿದೆ.

ನೊಂದೆನೀ ಮನದಿಂದಲಿ,
ಬೆಂದೆನೀಮನದಿಂದಲಿ, ಕಂದಿದೆನೀ ಮನದಿಂದಲಿ,
ಕುಂದಿದೆನೀ ಮನದಿಂದಲಿ, ಮನವೆಂಬ ಸಂದೇಹದ
ಕೀಲ ಕಳೆದು, ನಿಸ್ಸಂದೇಹಿಯಾಗಿಪ್ಪ ನಿರಾಭಾರಿ
ಶರಣಂಗೆ ನಮೋ ನಮೋ ಎಂಬೆನಯ್ಯಾ,
ಪರಮಗುರು ಪಡುವಿಡಿ ಸಿದ್ಧಮಲ್ಲಿನಾಥಪ್ರಭುವೆ

ನನಗೆ ತಿಳಿದಿದೆ ಎಂಬ ಅಹಂಕಾರದ ಭ್ರಮೆ ಬಂದಾಗ, ಮನದ ಕೀಲ ಸಡಲಿ, ಬದುಕು ಕತ್ತಲಲ್ಲಿ ತೆವಳಿ ಸಾಗುತ್ತದೆ. ಆದ್ದರಿಂದ ಅನವಶ್ಯಕವಾದ ಹಾರಾಟ, ಉಬ್ಬಟೆ ಬೇಕಿಲ್ಲ. ಚಾರಿತ್ರ್ಯದ ಜೀವನ, ಧನಾತ್ಮಕ ಚಿಂತನೆಗಳು ಬದುಕಿಗೆ ಒಂದು ಬೆಳಕನ್ನು ನೀಡಿ, ಸರಿದಾರಿಗೆ ತರುತ್ತವೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 4, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುದ್ಧ ಷಷ್ಠಿ ಗಂ. 05-41, ಸಪ್ತಮಿ ಗಂ. 29-07 ನಕ್ಷತ್ರ: ಚಿತ್ತಾ ಗಂ. 18-48 ಯೋಗ: ಸಾಧ್ಯ ಗಂ. 16-34, ಕರಣ: ತೈತಿಲ ಗಂ. 05-41, ಕರ್ಕಾಟಕ ಮಾಸದ 18 ನೇ
ದಿನ.ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 06-20 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 05 ಮೊಹರಮ್
ದಿನ ವಿಶೇಷ : ಗೋಸ್ವಾಮಿ ತುಳಸಿದಾಸ ಜಯಂತಿ, ಅದೃಷ್ಟ ಸಂಖ್ಯೆ : 9, 12

ಮೇಷ: ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ಭರವಸೆಯನ್ನು ಮರೆಯದಿರಿ. ಪಾಲುದಾರಿಕೆಯು ಹಂತ ಹಂತವಾಗಿ ಲಾಭ ತರಲಿದೆ.

ವೃಷಭ: ನೀವು ಮತ್ತು ನಿಮ್ಮ ಹಾವಾಭಾವ, ನಿಮ್ಮ ಸ್ನೇಹಪರವಾದ ಸ್ವಭಾವವು ಇತರರ ಮೇಲೆ ಹೆಚ್ಚಿನ ಪ್ರಭಾವ ಬೀರಲಿದೆ. ಸರ್ಕಾರಿ ಪತ್ರಗಳಿಗೆ ಸಂಬಂಧಿಸಿದ ಕಾರ್ಯಗಳು ಈ ದಿನ ಪೂರ್ಣಗೊಳ್ಳುತ್ತವೆ.

ಮಿಥುನ: ವಿವಾಹದ ವಿಚಾರದ ಕಾರ್ಯಗಳಲ್ಲಿನ ವಿಫಲತೆಯಿಂದ ಮನಸ್ಸಿಗೆ ಬೇಸರವಾಗಬಹುದು. ಅನೇಕ ಸಮಸ್ಯೆಗಳಿಗೆ ನೀವು ಮಾನವೀಯ ಪರಿಹಾರ ಕಂಡುಹಿಡಿಯುತ್ತೀರಿ. ದುರ್ಜನರ ಸಹವಾಸದಿಂದ ಹೊರಬನ್ನಿ

ಕರ್ಕಾಟಕ: ಉದ್ಯೋಗದಲ್ಲಿರುವ ಒತ್ತಡವನ್ನು ಬಗೆಹರಿಸಿಕೊಳ್ಳಲು ಹೋಗಿ ಪುನಃ ದೊಡ್ಡ ಸಮಸ್ಯೆಗೆ ಸಿಲುಕಿದಂತಾಗಬಹುದು. ಬಹಳ ದಿನದ ನಂತರದಲ್ಲಿ ಗುರು ಹಿರಿಯರ ದರ್ಶನ ಭಾಗ್ಯ ದೊರಕುತ್ತದೆ.

ಸಿಂಹ: ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಅವರ ಪ್ರಯತ್ನಕ್ಕೆ ಯಾವುದೇ ರೀತಿಯ ಚ್ಯುತಿ ಬರುವುದಿಲ್ಲ. ವಸ್ತ್ರಾಭರಣಗಳನ್ನು ಖರೀದಿಸುವ ಯೋಗವಿದೆ.

ಕನ್ಯಾ: ನೀವು ನಿಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆ ಉಂಟು ಮಾಡಲಿದ್ದೀರಿ. ಅದನ್ನು ಸಹಿಸಲಾಗದ ಜನರಿಂದ ಅಪವಾದದ ಮಾತುಗಳನ್ನು ಕೇಳಬೇಕಾಗಬಹುದು.

ತುಲಾ: ಕಂಪನಿಯ ಸರ್ವತೋಮುಖ ಬೆಳವಣಿಗೆಗೆ ನಿಮ್ಮ ಪಾತ್ರ ಬಹಳ ಮುಖ್ಯ ಎಂಬುದು ನಿಮ್ಮ ಸಂಸ್ಥೆಯ ಅಧಿಕಾರಿ ವರ್ಗಕ್ಕೆ ಮನದಟ್ಟಾಗುವುದು. ಅದರಿಂದಾಗಿ ಕೀರ್ತಿ ಹೆಚ್ಚಲಿವೆ.

ವೃಶ್ಚಿಕ: ಕೊಟ್ಟ ಮಾತನ್ನು ಉಳಿಸಿ ಕೊಳ್ಳುವುದರಿಂದ ನಿಮಗೆ ಕ್ಷೇಮ ಉಂಟಾಗುತ್ತದೆ. ಬಾಹ್ಯಾಕಾಶ ಸಂಶೋಧನಾರ್ಥಿಗಳಿಗೆ ಸರ್ಕಾರದಿಂದ ಪ್ರಶಂಸೆ ದೊರೆಯುವುದು. ವರ್ತಕರಿಗೆ ನಿರೀಕ್ಷಿತ ಲಾಭ ಉಂಟಾಗಲಿದೆ.

ಧನು: ಸಗಟು ವ್ಯಾಪಾರಿಗಳಿಗೆ ಅಧಿಕ ಲಾಭವಾಗಲಿದೆ, ವ್ಯವಹಾರಕ್ಕೆ ಸಹಾಯವಾಗುವಂತಹ ವಾಹನ ಖರೀದಿಯ ಬಗ್ಗೆ ಗಮನಹರಿಸಿ. ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಇದು ಸೂಕ್ತ ಕಾಲ.

ಮಕರ: ಅತಿಯಾದ ಆಲಸ್ಯ, ನಿದ್ದೆಯಂತಹ ಸಮಸ್ಯೆ ನಿಮ್ಮನ್ನು ಕಾಡಲಿದೆ. ಪಾಲುದಾರಿಕೆಯಲ್ಲಿ ಲಾಭ ಗಳಿಸುವಿರಿ. ಆಸ್ತಿ ಲಭ್ಯವಾಗಲಿದೆ. ಅಭಿವೃದ್ಧಿಯ ವಿಚಾರದಲ್ಲಿ ವದಂತಿಗಳಿಗೆ ಕಿವಿಗೊಡದೆ ಪ್ರಯತ್ನ ಮುಂದುವರಿಸಿ.


ಕುಂಭ: ಶುಭ ಕಾರ್ಯಗಳು ಸುಲಲಿತವಾಗಿ ನೆರವೇರುವುದು. ಶಿಕ್ಷಕ ವೃತ್ತಿಯಲ್ಲಿ ಸಾಧನೆ ತೋರಿ ಪ್ರಶಸ್ತಿ ಪಡೆಯುವಿರಿ. ಹೂಡಿಕೆ ಯೋಜನೆಗಳಿಗೆ ಸಿದ್ಧತೆ ನಡೆಯಲಿದೆ. ಶ್ರೀ ಮನ್ನಾರಾಯಣನ ಸೇವೆಯಿಂದ ಕಾರ್ಯ ಸಿದ್ಧಿಯಾಗುವುದು.

ಮೀನ: ರಾಜಕೀಯ ರಂಗ ಪ್ರವೇಶಿಸಲು ತೀರ್ಮಾನಿಸುವುದಕ್ಕೆ ಈ ದಿನ ಸೂಕ್ತ ಕಾಲ. ವೈಯಕ್ತಿಕ ಜೀವನದ ಬೆಳವಣಿಗೆ ಬಗ್ಗೆ ಗಮನಹರಿಸಿ. ಸ್ವಂತ ಪ್ರಯತ್ನ ಬಲದಿಂದ ಹಣ ಸಂಪಾದನೆಯಾಗುವುದು.

ಪದಬಂಧ 5039 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತ ಘಟನೆಯಿದು (4)
3.ನೀರು ಧುಮ್ಮಿಕ್ಕುವ ಸ್ಥಳ (4)
5.ದಾಯಾದಿಯ ಬೀಳ್ಕೊಡುವಿಕೆ! (3)
7.ಗಾರುಡಿಗ ಎರಚಿದ ಕೆಸರು (2)
8.ಆದರ ತೋರಿಸಿ ಹೇಳಿದ ಬೆಲೆ! (2)
11.ಪುಢಾರಿ ಜೊತೆಯಲ್ಲಿರುವ ಶತ್ರು (2)
13.ಈತ ಸ್ನೇಹಿತ (2)
14. ಆನೆಯನ್ನು ಹತೋಟಿಯಲ್ಲಿಡಲು ಬಳಸುವ ಸಾಧನ (3)
16.ಗಳಿಕೆ ಕೊನೆಗಿದ್ದರೂ ಸಿಕ್ಕಿರುವ ನಿಂದೆ! (4)
17.ಈತ ಸೂರ್ಯನ ಮಗ (4)

ಮೇಲಿಂದ ಕೆಳಕ್ಕೆ
1.ಭಾರತೀಯ ವೈದ್ಯಶಾಸ್ತ್ರ (4)
2.ಕವಿತೆ ಬರೆಯುವವನು (2)
3.ಯಜಮಾನನಿಗೆ ದೊರೆತಿರುವ ಗೆಲುವು (2)
4.ವಸ್ತುಗಳನ್ನು ತೂಗುವ ಸಾಧನ (3)
6.ದಾನ ಕೊಡುತ್ತಿರುವ ಅಸುರ (3)
7.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
9.ಪುಸ್ತಕದ ಮೇಲು ಹೊದಿಕೆ (4)
10.ತಪರಾಕು ಸಿಕ್ಕ ಮೇಲೆ ಈ ಹೊಗಳಿಕೆಯೇ? (3)
12. ಪುರಕ್ಕೆ ಬಂದಿರುವವನು ಗೌರವಿಸಲ್ಪಟ್ಟ ವ್ಯಕ್ತಿ (4)
13.ಶಿವನ ಕುದುರೆ ಇಲ್ಲಿಗೆ ಬಂದಿದೆ (3)
14.ಹತೋಟಿಯನ್ನು ಹೀಗೆನ್ನಿ (2)
15.ಶರಧಿಯಲ್ಲಿ ಬಿದ್ದಿರುವ ಬಾಣ (2)



5038ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸ್ತಿಭಾರ 2.ಅಭಿಜಾತ
4.ವಿನಾಶ 6.ಪಲ್ಲವಿ
8.ಮರುಕ
9.ಲೋಕಕಲ್ಯಾಣ
10.ಗುಲಾಮ 11.ಕಡಸು
13.ಕಣಕ 14.ಹಿತಶತ್ರು
15.ಅನುಲೇಪ

ಮೇಲಿಂದ ಕೆಳಕ್ಕೆ:
1.ಅಪರೂಪ 3.ತಲೆಹೋಕ
5.ನಾಮಕರಣ 7.ವಿಲೋಮ
8.ಮಣಕ 10.ಗುಣಾಗ್ರಹಿ
12.ಸುರಚಾಪ

ಸುಡೊಕು 5425

		5		8		4		
	8		7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5424 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

6432 ಬ್ಯಾಂಕ್ ಅಧಿಕಾರಿಗಳ ಹುದ್ದೆಗಳಿಗೆ ಅಧಿಸೂಚನೆ

ಉದ್ಯೋಗ ವಾರ್ತೆ

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಐಬಿಪಿಎಸ್) 2022–23ನೇ ಸಾಲಿನಲ್ಲಿ ದೇಶದ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ 6432 ಪ್ರೊಬೆಷನರಿ ಆಫೀಸರ್ಸ್/ ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಸಾಮಾನ್ಯ ನೇಮಕಾತಿ ಪ್ರಕ್ರಿಯೆ ಮೂಲಕ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಪೂರ್ವಭಾವಿ ಮತ್ತು ಮುಖ್ಯಪರೀಕ್ಷೆ ಹಾಗೂ ಸಂದರ್ಶನಗಳ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಅಭ್ಯರ್ಥಿಗಳು ಅಧಿಕೃತ ಐಬಿಪಿಎಸ್ ಸಂಸ್ಥೆಯ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಆಗಸ್ಟ್ 2 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಆಗಸ್ಟ್ 22 ಅರ್ಜಿ ಸಲ್ಲಿಸಲು ಕೊನೆ ದಿನ.

ಇದೇ ವರ್ಷದ ಅಕ್ಟೋಬರ್‌ನಲ್ಲಿ ಪೂರ್ವಭಾವಿ ಪರೀಕ್ಷೆ ಹಾಗೂ ನವೆಂಬರ್ ತಿಂಗಳಲ್ಲಿ ಮುಖ್ಯ ಪರೀಕ್ಷೆ ಹಾಗೂ ಮುಂದಿನ ವರ್ಷ(2023) ಜನವರಿ ಅಥವಾ ಫೆಬ್ರವರಿಯಲ್ಲಿ ಸಂದರ್ಶನ ನಡೆಸುವುದಾಗಿ (ತಾತ್ಕಾಲಿಕವಾಗಿ ನಿಗದಿಪಡಿಸಿರುವ ದಿನಾಂಕಗಳು) ಐಬಿಪಿಎಸ್ ಬಿಡುಗಡೆ ಮಾಡಿರುವ ಅಧಿಸೂಚನೆಯಲ್ಲಿ ತಿಳಿಸಿದೆ.

ವಿದ್ಯಾರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಯಾವುದೇ ಪದವಿ ಪಡೆದಿರಬೇಕು.

ವಯೋಮಿತಿ : ಕನಿಷ್ಠ 20 ರಿಂದ ಗರಿಷ್ಠ 30 ವರ್ಷಗಳು. ಎಸ್.ಸಿ / ಎಸ್.ಟಿ ಹಾಗೂ ಮಾಜಿ ಸೈನಿಕರಿಗೆ 5 ವರ್ಷಗಳು ಹಾಗೂ ಒಬಿಸಿ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ ಹಾಗೂ ಅಂಗವಿಕಲರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಮಾಡಲಾಗಿದೆ.

ಅರ್ಜಿ ಶುಲ್ಕ: ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹ 850. ಎಸ್.ಸಿ/ ಎಸ್.ಟಿ/ ಅಂಗವಿಕಲ ಅಭ್ಯರ್ಥಿಗಳಿಗೆ ₹150.

ಹೆಚ್ಚಿನ ಮಾಹಿತಿಗೆ: www. ibps.in ಜಾಲತಾಣಕ್ಕೆ ಭೇಟಿ ನೀಡಿ ❖



ಸಹಾಯಕ ಕಮಾಂಡೆಂಟ್ ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ಕೊನೆಕ್ಷಣ ಪುನರ್‌ಮನನ

ಆರ್.ಬಿ.ಗುರುಬಸವರಾಜ

ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯು ಸಹಾಯಕ ಕಮಾಂಡೆಂಟ್ ಹುದ್ದೆಗೆ (Central Armed Police force-Assistant Commondent) ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ. ಈ ಪರೀಕ್ಷೆ ಇದೇ ತಿಂಗಳ 7ರಂದು (ಭಾನುವಾರ) ದೇಶದ ವಿವಿಧ ಆಯ್ದ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ.

ಕೆಲವು ಅಭ್ಯರ್ಥಿಗಳು ಈಗಾಗಲೇ ಪರೀಕ್ಷೆಗಾಗಿ ಉತ್ತಮ ತಯಾರಿ ಮಾಡಿಕೊಂಡಿರುತ್ತಾರೆ. ಆದರೂ, ಪರೀಕ್ಷಾ ದಿನಗಳು ಸಮೀಪವಾದಾಗ ಸ್ವಲ್ಪ ಗಲಿಬಿಲಿಯಾಗುವುದು ಸಾಮಾನ್ಯ. ಕೊನೆ ಗಳಿಗೆಯ ಈ ಗೊಂದಲಗಳನ್ನು ನಿವಾರಿಸಲು ಅಭ್ಯರ್ಥಿಗಳು ನಿಗದಿತ ಪಠ್ಯವನ್ನು ಪುನರಾವಲೋಕಿಸಬೇಕು. ಕೊನೆ ಕ್ಷಣದ ಸಿದ್ಧತೆ ಕುರಿತ ಕೆಲವೊಂದು ತಂತ್ರಗಳು ಇಲ್ಲಿವೆ.

ಪರೀಕ್ಷೆಯ ಮಾದರಿ

ಸಿಎಪಿಎಫ್–ಎಸಿ ಪರೀಕ್ಷೆಯನ್ನು ಎದುರಿಸಲು, ಮೊದಲು ಆ ಪರೀಕ್ಷೆಯ ಮಾದರಿ ತಿಳಿದಿರಬೇಕು. ಈ ಪರೀಕ್ಷೆಯಲ್ಲಿ 2 ಪತ್ರಿಕೆಗಳಿರುತ್ತವೆ(ಪೇಪರ್). ಪತ್ರಿಕೆ- 1 ರಲ್ಲಿ ಬಹುಆಯ್ಕೆಯ ಪ್ರಶ್ನೆಗಳನ್ನು(Objective) ಕೇಳಲಾಗಿರುತ್ತದೆ. ಪತ್ರಿಕೆ-2 ನಲ್ಲಿ ವಿವರಣಾತ್ಮಕವಾಗಿರುತ್ತದೆ(Descriptive). ಪೇಪರ್-1 ರಲ್ಲಿ 125 ಬಹುಆಯ್ಕೆಯ ಪ್ರಶ್ನೆಗಳಿದ್ದು, 250 ಅಂಕಗಳಿರುತ್ತವೆ. ಇದಕ್ಕೆ ಎರಡು ಗಂಟೆಗಳ ಅವಧಿ ಮೀಸಲು. ಪತ್ರಿಕೆ-2 ರಲ್ಲಿ 200 ಅಂಕಗಳಿಗೆ 3 ಗಂಟೆಗಳ ಅವಧಿಯಲ್ಲಿ 6 ವಿವರಣಾತ್ಮಕ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಪತ್ರಿಕೆ-1 ರ ಒ.ಎಂ. ಆರ್ ಹಾಗೂ ಪತ್ರಿಕೆ-2 ರ ವಿವರಣಾತ್ಮಕ ಉತ್ತರ ಬರೆಯಲು ಕೇವಲ ಕಪ್ಪು ಬಾಲ್ ಪಾಯಿಂಟ್ ಪೆನ್ ಮಾತ್ರ ಬಳಸುವುದು ಕಡ್ಡಾಯ. ಇತರೆ ಯಾವುದೇ ಬಣ್ಣದ ಪೆನ್‌ಗಳಿಗೆ ಅವಕಾಶವಿಲ್ಲ. ನೆನಪಿಡಿ; ಈ ಲಿಖಿತ ಪರೀಕ್ಷೆಯು ಮೊದಲ ಸುತ್ತಿನ ಪರೀಕ್ಷೆಯಾಗಿದೆ. ಮುಂದಿನ ಸುತ್ತಿಗೆ ಅರ್ಹತೆ ಪಡೆಯಲು ಅಭ್ಯರ್ಥಿಗಳು ಎರಡೂ ಪತ್ರಿಕೆಗಳಲ್ಲಿ ಉತ್ತೀರ್ಣರಾಗಬೇಕು.

> ಸಿಎಪಿಎಫ್–ಎಸಿ ಹುದ್ದೆಗಳ ಭರ್ತಿಗಾಗಿ ಇದೇ ವಾರಾಂತ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆಗೆ ನಡೆಸುವ ಅಂತಿಮ ಹಂತದ ಸಿದ್ಧತೆಯಲ್ಲಿ ನಿಗದಿತ ಪಠ್ಯಗಳ ಪುನರಾವಲೋಕನಕ್ಕೆ ಆದ್ಯತೆ ಕೊಡಿ.

ಪಠ್ಯಕ್ರಮದ ಕಡೆ ಗಮನ ಇರಲಿ

ಎರಡೂ ಪ್ರಶ್ನೆ ಪತ್ರಿಕೆಗಳ ವಿಷಯಗಳು ಬೇರೆ ಬೇರೆ. ಹಾಗಾಗಿ ಪ್ರತ್ಯೇಕ ತಯಾರಿ ಅಗತ್ಯ. ಪತ್ರಿಕೆ-1ರಲ್ಲಿ ಸಾಮಾನ್ಯ ಜ್ಞಾನ ಮತ್ತು ಬುದ್ಧಿವಂತಿಕೆ ಪರೀಕ್ಷಿಸುವ ಪ್ರಶ್ನೆಗಳಿರುತ್ತವೆ. ಅದಕ್ಕಾಗಿ ಮಾನಸಿಕ ಸಾಮರ್ಥ್ಯ, ಪ್ರಚಲಿತ ವಿದ್ಯಮಾನ, ಸಾಮಾನ್ಯ ವಿಜ್ಞಾನ, ಇತಿಹಾಸ, ರಾಜಕೀಯ ಮತ್ತು ಆರ್ಥಿಕತೆ ಮತ್ತು ಭೂಗೋಳಶಾಸ್ತ್ರ ವಿಷಯಗಳ ಪಠ್ಯಕ್ರಮವಿದೆ. ಈ ಸಂಬಂಧ ಅಭ್ಯರ್ಥಿಗಳು ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ಆರ್ಥಿಕ ವ್ಯವಹಾರಗಳು, ರಕ್ಷಣಾ ಸಂಬಂಧಿತ ಪ್ರಮುಖ ಘಟನೆಗಳು, ಮಿಲಿಟರಿ ವ್ಯವಸ್ಥೆಗಳು, ಇತ್ತೀಚಿನ ಪ್ರಶಸ್ತಿಗಳು ಮತ್ತು ಕ್ರೀಡಾ ಕಾರ್ಯಕ್ರಮಗಳು, ರಾಷ್ಟ್ರೀಯ ಉದ್ಯಾನವನಗಳು, ಅಣೆಕಟ್ಟುಗಳು, ನದಿಗಳು ಮತ್ತು ಉಪನದಿಗಳು, ಮರುಭೂಮಿಗಳು, ಅಂತರರಾಷ್ಟ್ರೀಯ ಸಂಸ್ಥೆ, ಇತ್ಯಾದಿಗಳಿಗೆ ಸಂಬಂಧಿಸಿದ ಪ್ರಚಲಿತ ಮಾಹಿತಿಗಳನ್ನು ಪರಾಮರ್ಶಿಸಬೇಕು.

ಪತ್ರಿಕೆ-2 ರಲ್ಲಿ ಬರಹ ಮತ್ತು ಭಾಷಾ ಕೌಶಲ ಪರೀಕ್ಷಿಸಲಾಗುತ್ತದೆ. ಇದರಲ್ಲಿ ಎ ಮತ್ತು ಬಿ ವಿಭಾಗಗಳಿವೆ. ಎ ವಿಭಾಗದಲ್ಲಿ 80 ಅಂಕಗಳಿಗೆ ಪ್ರಬಂಧಗಳು ಹಾಗೂ ಬಿ ವಿಭಾಗದಲ್ಲಿ 120 ಅಂಕಗಳಿಗೆ ಭಾಷೆಯ ಗ್ರಹಿಕೆ, ನಿಖರವಾದ ಬರವಣಿಗೆ, ಇತರ ಭಾಷಾ ಕೌಶಲಗಳು ಮತ್ತು ಸಂವಹನಗಳಿಗೆ ಉತ್ತರಿಸಬೇಕು. ಪತ್ರಿಕೆ-2ರ ಉತ್ತರಗಳನ್ನು ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಮಾತ್ರ ಬರೆಯಬೇಕು. ಪ್ರಬಂಧಗಳು ಆಧುನಿಕ ಭಾರತೀಯ ಇತಿಹಾಸ, ವಿಶೇಷವಾಗಿ ಸ್ವಾತಂತ್ರ್ಯ ಹೋರಾಟದ ಸೂಚಕ ವಿಷಯಗಳು, ಭೌಗೋಳಿಕತೆ, ರಾಜಕೀಯ ಮತ್ತು ಆರ್ಥಿಕತೆ, ಭದ್ರತೆ ಮತ್ತು ಮಾನವ ಹಕ್ಕುಗಳ ಸಮಸ್ಯೆಗಳನ್ನು ಒಳಗೊಂಡಿರುತ್ತವೆ. ಅದಕ್ಕಾಗಿ ಅಭ್ಯರ್ಥಿಗಳು ವಿಷಯದ ಆಳ ಜ್ಞಾನ ಮತ್ತು ವಿಶ್ಲೇಷಣಾತ್ಮಕ ಸಾಮರ್ಥ್ಯವನ್ನು ಮತ್ತೊಮ್ಮೆ ಪರಾಮರ್ಶಿಸಿಕೊಳ್ಳಬೇಕು.

ಟಿಪ್ಪಣಿಗಳನ್ನು ನಕ್ಷೆಗಳಾಗಿ ಪರಿವರ್ತಿಸಿ

ವಿಷಯಗಳಿಗೆ ಪೂರಕವಾಗಿ ಸಂಗ್ರಹಿಸಿದ ಮಾಹಿತಿಗಳನ್ನು ಟೈಮ್‌ಲೈನ್‌ಗಳು, ಫ್ಲೋಚಾರ್ಟ್‌ಗಳು ಮತ್ತು ರೇಖಾಚಿತ್ರಗಳ ರೂಪದಲ್ಲಿ ಮರುಜೋಡಿಸಿಕೊಳ್ಳಿ. ಐತಿಹಾಸಿಕ ಘಟನೆಗಳು, ಜೈವಿಕ ಮತ್ತು ಭೌಗೋಳಿಕ ವರ್ಗೀಕರಣದಂತಹ ವಿಷಯಗಳನ್ನು ಘಟನೆಗಳು/ ಸರಣಿಯ ರೂಪದಲ್ಲಿ ವರ್ಗೀಕರಿಸಿಕೊಳ್ಳಿ. ಈ ತಂತ್ರಗಳು ಪರೀಕ್ಷೆಯ ಅಂತಿಮ ಸಿದ್ಧತೆಗೆ ಸಹಾಯ ಮಾಡುತ್ತವೆ. ಮೈಂಡ್ ಮ್ಯಾಪ್‌ಗಳನ್ನು ರಚಿಸುವುದು ಆರಂಭದಲ್ಲಿ ಬೇಸರ ಎನಿಸಿದರೂ ಅಂತಿಮ ಹಂತದ ತಯಾರಿಕೆಯಲ್ಲಿ ಇವು ಉತ್ತಮ ಸ್ನೇಹಿತರಂತೆ ಕಾರ್ಯನಿರ್ವಹಿಸುತ್ತವೆ.

ಹೊಸ ವಿಷಯಗಳ ಓದು ನಿಲ್ಲಿಸಿ

ಪರೀಕ್ಷೆಯ ಅಂತಿಮ ಸಮಯದಲ್ಲಿ ಹೊಸ ಓದು ಫಲ ನೀಡುವುದಿಲ್ಲ. ಬದಲಿಗೆ ಗೊಂದಲ ಮೂಡಿಸುವ ಸಾಧ್ಯತೆ ಇರುತ್ತದೆ. ಹೊಸ ವಿಷಯ ಓದಿ ಗ್ರಹಿಸಲು ಹೆಚ್ಚಿನ ಶಕ್ತಿ, ಸಮಯ ಬೇಕಾಗುತ್ತದೆ. ಹೊಸ ಓದಿನ ಬದಲಾಗಿ ಕಳೆದ ಕೆಲವು ತಿಂಗಳುಗಳಲ್ಲಿ ಓದಿದ್ದನ್ನು ಪರಿಷ್ಕರಿಸುವತ್ತ ಗಮನಹರಿಸಿ.

ಉತ್ತರ ಆಯ್ಕೆಯಲ್ಲಿ ಜಾಗರೂಕರಾಗಿರಿ

ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭವಲ್ಲ. ಹಾಗಾಗಿ, ಉತ್ತರಗಳನ್ನು ಜಾಗರೂಕತೆಯಿಂದ ಆಯ್ಕೆ ಮಾಡಿ. ಏಕೆಂದರೆ ಪ್ರತಿ ಮೂರು ತಪ್ಪು ಉತ್ತರಗಳಿಗೆ ಒಂದು ಅಂಕ ಕಡಿತವಾಗುತ್ತದೆ. ಅದಕ್ಕಾಗಿ ಹೆಚ್ಚು ಅಣಕು ಪರೀಕ್ಷೆಗಳನ್ನು ನಡೆಸಿದ್ದರೆ ಒಳ್ಳೆಯದು. ಪರೀಕ್ಷೆಯ ಸಮಯದಲ್ಲಿ ಒಂದೇ ಪ್ರಶ್ನೆಗೆ ಹೆಚ್ಚು ಸಮಯ ವ್ಯರ್ಥ ಮಾಡುವುದನ್ನು ತಪ್ಪಿಸಿ. ಉಳಿದ ಪ್ರಶ್ನೆಗಳತ್ತ ಚಿತ್ತ ಹರಿಸಿ. ❖

ಜಿ–20 ದೇಶಗಳು



ಯು. ಟಿ. ಆಯಿಶ ಫರ್ಝಾನಾ

> ಯುಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3, ಕೆಪಿಎಸ್‌ಸಿ-ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-3 ಸೇರಿದಂತೆ ಎಲ್ಲಾ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ವಿದ್ಯಮಾನ ಕುರಿತ ಮಾಹಿತಿ ಇಲ್ಲಿದೆ.

ನೀತಿ ಆಯೋಗದ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಮಿತಾಬ್ ಕಾಂತ್ ಅವರನ್ನು ಇತ್ತೀಚೆಗೆ 20 ರಾಷ್ಟ್ರಗಳ ಸಂಘಟನೆಯಾದ 'ಜಿ-20'ಗೆ ಭಾರತದ ಹೊಸ ಶೆರ್ಪಾ ಆಗಿ ನೇಮಿಸಲಾಯಿತು. ಹಿಂದೆ ಈ ಸ್ಥಾನದಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಇದ್ದರು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಪೀಯೂಷ್ ಅವರನ್ನು ನೇಮಕ ಮಾಡಲಾಗಿತ್ತು.

ಈ ವರ್ಷದ ಕೊನೆಯಲ್ಲಿ ಭಾರತವು ಜಿ-20ಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಲಿದೆ. ಅದಕ್ಕೂ ಮುನ್ನವೇ ಅಮಿತಾಬ್ ಕಾಂತ್ ಅವರನ್ನು ನೇಮಿಸಲಾಗಿದೆ. ಭಾರತವು ಇದೇ ವರ್ಷ ಡಿಸೆಂಬರ್ 1 ರಂದು 'ಜಿ–20'ಯ ಅಧ್ಯಕ್ಷ ಸ್ಥಾನ ವಹಿಸಲಿದೆ. ಈ ಅಧಿಕಾರಾವಧಿ 2023ರ ನವೆಂಬರ್ 30ರವರೆಗೆ ಇರಲಿದೆ. ಭಾರತ ಮುಂದಿನ ವರ್ಷ ಜಿ- 20 ಶೃಂಗಸಭೆಯ ಅತಿಥ್ಯ ವಹಿಸಲಿದೆ.

ಜಿ-20 ರಚನೆ ಹೇಗೆ ?

ಇದು 19 ದೇಶಗಳು ಮತ್ತು ಯುರೋಪಿಯನ್ ಒಕ್ಕೂಟ ಸೇರಿ 20 ರಾಷ್ಟ್ರಗಳನ್ನೊಳಗೊಂಡ ಒಂದು ಅಂತರರಾಷ್ಟ್ರೀಯ ವೇದಿಕೆ. ಇದು 1999 ರಲ್ಲಿ ರಚನೆಯಾಯಿತು. ಅಂತರಾಷ್ಟ್ರೀಯ ಹಣಕಾಸು ಸ್ಥಿರತೆಯನ್ನು ಸಾಧಿಸಲು ನೀತಿನಿಯಮಗಳನ್ನು ಚರ್ಚಿಸುವುದಕ್ಕಾಗಿ ರಚಿಸಲಾದ ವೇದಿಕೆಯಾಗಿದೆ.

- 1997-1999ರಲ್ಲಿ ತಲೆದೋರಿದ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದ ಭಾಗವಾಗಿ ಇಂಡೋನೇಷ್ಯಾ ಸೇರಿದಂತೆ ಮಧ್ಯಮ-ಆದಾಯ ಹೊಂದಿರುವ ಹಲವು ರಾಷ್ಟ್ರಗಳನ್ನು ಒಳಗೊಂಡಂತೆ ಈ ವೇದಿಕೆಯನ್ನು ರಚಿಸಲಾಗಿದೆ.
- ಪ್ರಾರಂಭದಲ್ಲಿ ಜಿ 7 ರಾಷ್ಟ್ರಗಳ ಹಣಕಾಸು ಸಚಿವಾಲಯಗಳ ಸಲಹೆಯ ಮೇರೆಗೆ, ಜಿ–20 ಹಣಕಾಸು ಸಚಿವರು ಮತ್ತು ಬ್ಯಾಂಕ್ ಗವರ್ನರ್‌ಗಳು, ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಅದರ ಪರಿಣಾಮಗಳ ಬಗ್ಗೆ ಚರ್ಚಿಸುವ ಸಲುವಾಗಿ ಸಭೆಗಳನ್ನು ನಡೆಸಿದ್ದರು. ಮುಂದೆ ನಿಯಮಿತವಾಗಿ ಚಳಿಗಾಲದ ಅವಧಿಯಲ್ಲಿ ಹಣಕಾಸು ಸಚಿವರ ಮಟ್ಟದ ಸಭೆ ನಡೆಸುವ ಪರಿಪಾಠ ನಡೆದುಕೊಂಡು ಬಂದಿದೆ.
- 2008ರ ನವೆಂಬರ್ 14 ಮತ್ತು15 ರಂದು, ಜಿ–20 ರಾಷ್ಟ್ರಗಳ ನಾಯಕರು ಮೊದಲ ಬಾರಿಗೆ ಈ ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ಅಮೆರಿಕದಲ್ಲಿ ಉಂಟಾಗಿದ್ದ ಆರ್ಥಿಕ ಬಿಕ್ಕಟ್ಟಿನ ಪ್ರಭಾವ ಮತ್ತು ಜಾಗತಿಕ ಪರಿಣಾಮಗಳ ಕುರಿತು ಎಲ್ಲ ನಾಯಕರು ಚರ್ಚಿಸಿದ್ದರು. ಸಭೆಯಲ್ಲಿ ಚರ್ಚೆಯಾದ ವಿಷಯವನ್ನು ಸಂಯೋಜಿಸಿ, ಅದರ ಪ್ರಕಾರ ಮುಂದಿನ ಸಭೆಗಳನ್ನು ನಡೆಸುವುದಾಗಿ ಒಪ್ಪಿಕೊಂಡರು.

ಜಿ-20 ಎಂದರೇನು?

- ಜಿ–20, ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ವಿಶ್ವದ ಪ್ರಮುಖ ದೇಶಗಳನ್ನು ಒಳಗೊಂಡಿರುವ ಬಹುಪಕ್ಷೀಯ ವೇದಿಕೆ. ಇದು ಒಂದು ನಿರ್ದಿಷ್ಟ ಕಾರ್ಯತಂತ್ರ ರೂಪಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ. ಈ ವೇದಿಕೆ ಭವಿಷ್ಯದ ಜಾಗತಿಕ ಆರ್ಥಿಕ ಬೆಳವಣಿಗೆ ಮತ್ತು ಸಮೃದ್ಧಿಯನ್ನು ಭದ್ರಪಡಿಸುವಲ್ಲಿ ಕಾರ್ಯತಂತ್ರ ರೂಪಿಸುವ ಪಾತ್ರ ನಿರ್ವಹಿಸುತ್ತದೆ.
- ಒಟ್ಟಾಗಿ ಜಿ–20 ಸದಸ್ಯರು ವಿಶ್ವದ ಜಿಡಿಪಿಯ ಸರಿಸುಮಾರು ಶೇ 85ರಷ್ಟು, ಅಂತರರಾಷ್ಟ್ರೀಯ ವ್ಯಾಪಾರದ ಶೇ 75ರಷ್ಟು ಮತ್ತು ವಿಶ್ವ ಜನಸಂಖ್ಯೆಯ ಶೇ 60 ರಷ್ಟು ಭಾಗವನ್ನು ಪ್ರತಿನಿಧಿಸುತ್ತಾರೆ.
- 1999 ರಲ್ಲಿ ಹಣಕಾಸು ಸಚಿವರ ಮತ್ತು ಕೇಂದ್ರೀಯ ಬ್ಯಾಂಕ್ ಗವರ್ನರ್‌ಗಳ ಸಭೆಯಾಗಿ ಪ್ರಾರಂಭವಾದ ಜಿ–20 ಶೃಂಗಸಭೆ ಮುಂದೆ, ಅನೇಕ ರಾಷ್ಟ್ರಗಳು ಮತ್ತು ಸರ್ಕಾರದ ಮುಖ್ಯಸ್ಥರನ್ನು ಒಳಗೊಂಡ ವಾರ್ಷಿಕ ಶೃಂಗಸಭೆಯಾಗಿ ವಿಕಸನಗೊಂಡಿದೆ.
- ಜೊತೆಗೆ, ಶೆರ್ಪಾ ಸಭೆಗಳು (ಮಾತುಕತೆಗಳನ್ನು ನಡೆಸುವ ಮತ್ತು ನಾಯಕರ ನಡುವೆ ಒಮ್ಮತವನ್ನು ಮೂಡಿಸುವ ಉಸ್ತುವಾರಿ), ಕಾರ್ಯಪಡೆಗಳು ಮತ್ತು ಅನೇಕ ವಿಶೇಷ ಸಮಾವೇಶಗಳನ್ನು ವರ್ಷವಿಡೀ ಆಯೋಜಿಸಲಾಗುತ್ತದೆ.

ಜಿ–20 ಸದಸ್ಯರು


- ಅರ್ಜೆಂಟೀನಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಚೀನಾ, ಫ್ರಾನ್ಸ್, ಜರ್ಮನಿ, ಭಾರತ, ಇಂಡೋನೇಷ್ಯಾ, ಇಟಲಿ, ಜಪಾನ್, ದಕ್ಷಿಣ ಕೊರಿಯಾ, ಮೆಕ್ಸಿಕೊ, ರಷ್ಯಾ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಟರ್ಕಿ, ಬ್ರಿಟನ್, ಅಮೆರಿಕ ಮತ್ತು ಐರೋಪ್ಯ ಒಕ್ಕೂಟಗಳು. ಕಾಯಂ ಅತಿಥಿಯಾಗಿ ಸ್ಪೇನ್ ದೇಶವನ್ನೂ ಈ ವೇದಿಕೆಗೆ ಆಹ್ವಾನಿಸಲಾಗಿದೆ.
- ಜಿ–20ಯ ಅಧ್ಯಕ್ಷ ಸ್ಥಾನ ಹೊಂದಿದ ದೇಶವು ಪ್ರತಿ ವರ್ಷ ನಡೆಯುವ ಶೃಂಗಸಭೆಗೆ ಅತಿಥೇಯ ರಾಷ್ಟ್ರಗಳನ್ನು ಆಹ್ವಾನಿಸುತ್ತದೆ. ಈ ವೇದಿಕೆಯ ಎಲ್ಲ ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತದೆ. ಹಲವು ಅಂತರರಾಷ್ಟ್ರೀಯ ಮತ್ತು ಪ್ರಾದೇಶಿಕ ಸಂಸ್ಥೆಗಳೂ ಈ ಸಭೆಯಲ್ಲಿ ಭಾಗವಹಿಸಲು ಅವಕಾಶವಿದೆ. ಇದು ಜಿ–20 ವೇದಿಕೆಗೆ ಇನ್ನೂ ವಿಶಾಲವಾದ ಪ್ರಾತಿನಿಧ್ಯವನ್ನು ನೀಡುತ್ತದೆ. ❖

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ
₹16000-20000

ಷೇರುಪೇಟೆ ವಹಿವಾಟು ▲ 214



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,345
ಇಂದಿನ ಅಂತ್ಯ	17,388
▲	43
ದಿನದ ಗರಿಷ್ಠ	17,407

ವಿನಿಮಯ ದರ

$ ಡಾಲರ್	79.15
£ ಪೌಂಡ್	96.32
€ ಯುರೊ	80.61
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹405
12 ಮೊಟ್ಟೆಗೆ ₹57
ಮೈಸೂರು
100 ಮೊಟ್ಟೆಗೆ ₹405

ಖಾದ್ಯ ತೈಲ ಮುಂಬೈ (10 ಕೆಜಿಗೆ)


ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1252 (1270)
ಸೂರ್ಯಕಾಂತಿ (ರಿಫೈನ್ಡ್)	₹1570 (1570)
ಪಾಮೋಲಿನ್	₹1240 (1240)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕ.ಜಿ) ₹181-670
ದ್ವಿತಳಿ (ಕ.ಜಿ) ₹477-809

ಎಸ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹165
ಆರ್‌ಎಸ್‌ಎಸ್-5 ₹156
ಗುಡ್ ಲಾಟ್ ₹149
(ಪ್ರತಿ ಕೆ.ಜಿ)



ಕಂಪನಿಗಳ ಮಧ್ಯೆ ಹೆಚ್ಚಿದ ಪೈಪೋಟಿ, ತಗ್ಗಿದ ಬೇಡಿಕೆ: ಎಸ್ ಆ್ಯಂಡ್ ಪಿ ಗ್ಲೋಬಲ್ ವರದಿ

4 ತಿಂಗಳ ಕನಿಷ್ಠ ಮಟ್ಟಕ್ಕೆ ಸೇವಾ ಚಟುವಟಿಕೆ

ನವದೆಹಲಿ (ಪಿಟಿಐ): ಬೇಡಿಕೆ ಇಳಿಕೆ, ಹಣದುಬ್ಬರ ಮತ್ತು ಪ್ರತಿಕೂಲ ವಾತಾವರಣದ ಕಾರಣಗಳಿಂದಾಗಿ ದೇಶದ ಸೇವಾ ವಲಯದ ಚಟುವಟಿಕೆಯು ಜುಲೈನಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯು ಬುಧವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಇದೆ. ಸೇವಾ ವಲಯದ ಬೆಳವಣಿಗೆಯನ್ನು ತಿಳಿಸುವ ಸೂಚ್ಯಂಕವು ಜೂನ್‌ನಲ್ಲಿ 59.2ರಷ್ಟು ಇದ್ದಿದ್ದು ಜುಲೈನಲ್ಲಿ 55.5ಕ್ಕೆ ಇಳಿಕೆ ಆಗಿದೆ. ಹೀಗಿದ್ದರೂ ಸೂಚ್ಯಂಕವು 50ಕ್ಕಿಂತಲೂ ಮೇಲ್ಮಟ್ಟದಲ್ಲಿಯೇ ಇರುವುದರಿಂದ ಸತತ 12ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ ಕಂಡಂತಾಗಿದೆ.

ಕಂಪನಿಗಳ ಜುಲೈ ತಿಂಗಳ ಮಾರಾಟ ಮತ್ತು ಗರಿಷ್ಠ ಮಟ್ಟದಲ್ಲಿ ಇದ್ದು, ಬೇಡಿಕೆಯೂ ಅನುಕೂಲಕರವಾಗಿತ್ತು. ಆದರೆ, ತೀವ್ರ ಪೈಪೋಟಿ ಮತ್ತು ಪ್ರತಿಕೂಲ ಹವಾಮಾನದಿಂದಾಗಿ ಬೆಳವಣಿಗೆಗೆ ಹಿನ್ನಡೆಯಾಯಿತು ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದವರು ಹೇಳಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ.

'ತೀವ್ರ ಪೈಪೋಟಿಯಿಂದ ಸೇವಾ ವಲಯದ ಬೇಡಿಕೆಯು ತಗ್ಗಿದೆ. ಇದರ ಜೊತೆಗೆ ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಪ್ರತಿಕೂಲ ಹವಾಮಾನದಿಂದಾಗಿ ವಲಯವು ತನ್ನ ಏರುಮುಖ ಚಲನೆಯಿಂದ ಜಾರುವಂತಾಯಿತು' ಎಂದು ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಯು ಹೆಚ್ಚಿನ ಕುಸಿತ ಕಂಡಿದೆ ಎಂದೂ ಅವರು ತಿಳಿಸಿದ್ದಾರೆ.

ಕಂಪನಿಗಳ ಸರಾಸರಿ ವೆಚ್ಚವು ಜುಲೈನಲ್ಲಿ ಇನ್ನಷ್ಟು ಏರಿಕೆ ಆಗಿದೆ. ಆಹಾರ, ಇಂಧನ, ಸಿಬ್ಬಂದಿ ಹಾಗೂ ರಿಟೇಲ್ ಮತ್ತು ಸಾರಿಗೆ ವೆಚ್ಚಗಳು ಕಂಪನಿಯ ವೆಚ್ಚದಲ್ಲಿ ಏರಿಕೆಗೆ ಕಾರಣವಾಗಿವೆ.

ವಲಯದಲ್ಲಿ ಉದ್ಯೋಗ ಸೃಷ್ಟಿಯು ಜುಲೈನಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಏರಿಕೆ ಕಂಡಿದ್ದು, ಬಹುತೇಕ ಜೂನ್ ತಿಂಗಳಿನ ಮಟ್ಟದಲ್ಲಿಯೇ ಇದೆ.

ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟಾರೆ ಬೆಳವಣಿಗೆಯನ್ನು ಸೂಚಿಸುವ ಕಾಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಜೂನ್‌ನಲ್ಲಿ 58.2ರಷ್ಟು ಇದ್ದದ್ದು ಜುಲೈನಲ್ಲಿ 56.6ಕ್ಕೆ ಇಳಿಕೆ ಆಗಿದೆ. ಮಾರ್ಚ್ ನಂತರದ ನಿಧಾನಗತಿಯ ಬೆಳವಣಿಗೆ ಇದಾಗಿದೆ.

ತಯಾರಿಕಾ ವಲಯದಲ್ಲಿ ಹೊಸ ಯೋಜನೆಗಳಿಗೆ ಬೇಡಿಕೆ ಹೆಚ್ಚಾಗಿದ್ದರೆ ಸೇವಾ ವಲಯದಲ್ಲಿ ಇಳಿಕೆ ಕಂಡಿದೆ. ಒಟ್ಟಾರೆಯಾಗಿ ಮಾರಾಟ ಹೆಚ್ಚಾಗಿದ್ದರೂ ಮಾರಾಟದಲ್ಲಿನ ಬೆಳವಣಿಗೆ ಮಟ್ಟವು ನಾಲ್ಕು ತಿಂಗಳ ಕನಿಷ್ಠ ಮಟ್ಟದಲ್ಲಿದೆ ಎಂದು ಸಮೀಕ್ಷೆಯು ತಿಳಿಸಿದೆ.



ಮುಖ್ಯಾಂಶಗಳು
- ಸತತ 12ನೇ ತಿಂಗಳಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- ಗರಿಷ್ಠ ಮಟ್ಟದಲ್ಲಿ ಹಣದುಬ್ಬರ

ಸುದ್ದಿ 2 ನಿಮಿಷ

ಫಾರ್ಚೂನ್ 500 ಪಟ್ಟಿ: 98ನೇ ಸ್ಥಾನ ಪಡೆದ ಎಲ್‌ಐಸಿ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಫಾರ್ಚೂನ್ ನಿಯತಕಾಲಿಕೆ ಪ್ರಕಟಿಸಿರುವ ಜಗತ್ತಿನ ಪ್ರಮುಖ 500 ಕಂಪನಿಗಳ ಪಟ್ಟಿಯಲ್ಲಿ 98ನೇ ಸ್ಥಾನ ಪಡೆದುಕೊಂಡಿದೆ.

ದೇಶದ ಅತಿದೊಡ್ಡ ವಿಮಾ ಕಂಪನಿಯ ವರಮಾನ ₹ 7.68 ಲಕ್ಷ ಕೋಟಿ ಇದ್ದು, ಲಾಭವು ₹ 4,375 ಕೋಟಿ ಆಗಿದೆ.

ಈಚೆಗಷ್ಟೇ ಐಪಿಒ ಮೂಲಕ ಷೇರುಪೇಟೆಗೆ ಬಂದಿರುವ ಎಲ್‌ಐಸಿಯು ಫಾರ್ಚೂನ್ ಪಟ್ಟಿಯಲ್ಲಿ ಭಾರತದ ಇತರೆ ಕಂಪನಿಗಳಿಗಿಂತಲೂ ಉನ್ನತ ಸ್ಥಾನ ಪಡೆದುಕೊಂಡಿದೆ.

2022ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಕಂಪನಿಗಳ ಒಟ್ಟಾರೆ ವರಮಾನದ ಆಧಾರದ ಮೇಲೆ ಫಾರ್ಚೂನ್ ನಿಯತಕಾಲಿಕವು 500 ಕಂಪನಿಗಳ ಸ್ಥಾನಮಾನದ ವರದಿ ಸಿದ್ಧಪಡಿಸಿದೆ. ಇದರಲ್ಲಿ ವಾಲ್‌ಮಾರ್ಟ್ ಮೊದಲ ಸ್ಥಾನದಲ್ಲಿದೆ. ಅಮೆಜಾನ್ ಎರಡನೇ ಸ್ಥಾನ ಪಡೆದುಕೊಂಡಿದೆ.

ಭಾರತದ ಒಂಬತ್ತು ಕಂಪನಿಗಳು ಸ್ಥಾನ ಪಡೆದುಕೊಂಡಿವೆ. ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು 51 ಸ್ಥಾನ ಮೇಲಕ್ಕೇರಿದ್ದು, 104ನೇ ಸ್ಥಾನಕ್ಕೆ ತಲುಪಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ (142), ಒಎನ್‌ಜಿಸಿ (190), ಟಾಟಾ ಸಮೂಹದ ಟಾಟಾ ಮೋಟರ್ಸ್ (370) ಮತ್ತು ಟಾಟಾ ಸ್ಟೀಲ್ (435) ಹಾಗೂ ರಾಜೇಶ್ ಎಕ್ಸ್‌ಪೋರ್ಟ್ಸ್ (437) ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ. ಎಸ್‌ಬಿಐ 236 ಮತ್ತು ಬಿಪಿಸಿಎಲ್ 295ನೇ ಸ್ಥಾನದಲ್ಲಿವೆ.



ಆಕಸ್ಮಿಕ ಲಾಭ ತೆರಿಗೆ ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ವಿಮಾನ ಇಂಧನ (ಎಟಿಎಫ್) ರಫ್ತು ಮೇಲಿನ ತೆರಿಗೆ ಕೈಬಿಟ್ಟಿದ್ದು, ಡೀಸೆಲ್ ರಫ್ತು ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದೆ. ಆದರೆ, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ಪ್ರಮಾಣ ಹೆಚ್ಚಿಸಿದೆ.

ಡೀಸೆಲ್ ರಫ್ತು ಮೇಲಿನ ತೆರಿಗೆ ಪ್ರತಿ ಲೀಟರಿಗೆ ₹ 11 ರಷ್ಟು ಇದ್ದಿದ್ದು ₹ 5ಕ್ಕೆ ಇಳಿಕೆ ಮಾಡಲಾಗಿದೆ. ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಪ್ರತಿ ಟನ್‌ಗೆ ₹ 17 ಸಾವಿರದಿಂದ ₹ 17,750ಕ್ಕೆ ಏರಿಕೆ ಮಾಡಲಾಗಿದೆ.

ದೇಶದ ವ್ಯಾಪಾರ ಕೊರತೆ ಅಂತರವು ಭಾರಿ ಹೆಚ್ಚಳ ಕಂಡಿರುವುದರಿಂದ ಸರ್ಕಾರವು ಈ ನಿರ್ಧಾರ ತೆಗೆದುಕೊಂಡಿದೆ.

ಸರ್ಕಾರವು ರಫ್ತು ತೆರಿಗೆ ಮತ್ತು ಆಕಸ್ಮಿಕ ಲಾಭ ತೆರಿಗೆಯನ್ನು ಜುಲೈ 1 ರಿಂದ ಜಾರಿಗೊಳಿಸಿದೆ. ಜುಲೈ 20ರಂದು ಪೆಟ್ರೋಲ್ ಮೇಲಿನ ರಫ್ತು ತೆರಿಗೆಯನ್ನು ಕೈಬಿಡಲಾಯಿತು. ಡೀಸೆಲ್ ಮತ್ತು ಎಟಿಎಫ್ ರಫ್ತು ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹ 6ರಷ್ಟು ಕಡಿಮೆ ಮಾಡಲಾಯಿತು. ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಪ್ರತಿ ಟನ್‌ಗೆ ವಿಧಿಸಿದ್ದ ₹ 23,250ರಷ್ಟು ಆಕಸ್ಮಿಕ ಲಾಭ ತೆರಿಗೆಯನ್ನು ₹ 17,750ಕ್ಕೆ ಇಳಿಕೆ ಮಾಡಲಾಗಿತ್ತು. ಇದೀಗ ಎರಡನೇ ಬಾರಿಗೆ ತೆರಿಗೆ ದರಗಳಲ್ಲಿ ಮತ್ತೆ ಬದಲಾವಣೆ ಮಾಡಲಾಗಿದೆ.

ಆರನೇ ದಿನವೂ ಗೂಳಿ ಓಟ

ಹೂಡಿಕೆದಾರರ ಸಂಪತ್ತು ₹ 13.53 ಲಕ್ಷ ಕೋಟಿ ವೃದ್ಧಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಆರನೇ ದಿನವೂ ಗೂಳಿ ಓಟ ಮುಂದುವರಿಯಿತು. ಆರು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 13.53 ಲಕ್ಷ ಕೋಟಿಗಳಷ್ಟು ಹೆಚ್ಚಾಯಿತು.

ಮುಂಬೈ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ಬುಧವಾರದ ಅಂತ್ಯಕ್ಕೆ ₹ 271.08 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ.

ವ್ಯಾಪಾರ ಕೊರತೆ ಅಂತರ ಹೆಚ್ಚಳ, ಸೇವಾ ವಲಯದ ಚಟುವಟಿಕೆ ಇಳಿಕೆ ಮತ್ತು ರೂಪಾಯಿ ಮೌಲ್ಯ ಕುಸಿತದ ಕಾರಣಗಳಿಂದಾಗಿ ಸೂಚ್ಯಂಕಗಳ ಓಟಕ್ಕೆ ತಡೆ ಬಿದ್ದಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 214 ಅಂಶ ಹೆಚ್ಚಾಗಿ 58,350 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 43 ಅಂಶ ಏರಿಕೆ ಕಂಡು 17,388 ಅಂಶಗಳಿಗೆ ತಲುಪಿತು.

'ವಿದೇಶಿ ಬಂಡವಾಳ ಒಳಹರಿವಿನಿಂದ ಷೇರುಪೇಟೆ ಗಳಿಕೆ ಕಾಣುತ್ತಿದೆ. ನಾಲ್ಕು ದಿನಗಳಲ್ಲಿ ₹ 7,900 ಕೋಟಿ ವಿದೇಶಿ ಬಂಡವಾಳ ಹರಿದುಬಂದಿದೆ. ಅಮೆರಿಕದ ಫೆಡರಲ್ ರಿಸರ್ವ್ ತ್ವರಿತವಾಗಿ ಬಡ್ಡಿದರ ಹೆಚ್ಚಳ ಮಾಡದೇ ಇರಲು ನಿರ್ಧರಿಸಿರುವುದು ಹಾಗೂ ಕಚ್ಚಾ ತೈಲ ದರ ಇಳಿಕೆಯು ಭಾರತಕ್ಕೆ ಅನುಕೂಲಕರವಾಗಿ ಪರಿಣಮಿಸಿದೆ' ಎಂದು ಎಮ್‌ಕೆ ಗ್ಲೋಬಲ್ ಫೈನಾನ್ಶಿಯಲ್ ಸರ್ವೀಸಸ್‌ನ ಮಾರಾಟ ವಿಭಾಗದ ಮುಖ್ಯಸ್ಥ ಎಸ್. ಹರಿಹರನ್ ಹೇಳಿದ್ದಾರೆ.



ರೂಪಾಯಿ 62 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರ 62 ಪೈಸೆ ಕುಸಿತ ಕಂಡು ಒಂದು ಡಾಲರ್‌ಗೆ ₹ 79.15ರಂತೆ ವಿನಿಮಯಗೊಂಡಿತು.

ಪ್ರಸಕ್ತ ಹಣಕಾಸು ವರ್ಷದಲ್ಲಿ ದಿನವೊಂದರ ಗರಿಷ್ಠ ಕುಸಿತ ಇದಾಗಿದೆ.

ಕಾವೇರಿ ಟೆಲಿಕಾಂನ ₹ 40.14 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ದೇನಾ ಬ್ಯಾಂಕ್‌ನಿಂದ ₹ 45 ಕೋಟಿ ಸಾಲ ಪಡೆದು ವಂಚಿಸಿರುವ ಆರೋಪ ಎದುರಿಸುತ್ತಿರುವ ಕಾವೇರಿ ಟೆಲಿಕಾಂ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಯ ನಿರ್ದೇಶಕರು ಮತ್ತು ಪ್ರವರ್ತಕರಿಗೆ ಸೇರಿದ ₹ 40.14 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ದೇನಾ ಬ್ಯಾಂಕ್‌ಗೆ ₹ 45 ಕೋಟಿ ವಂಚಿಸಿದ್ದ ಆರೋಪದ ಮೇಲೆ 2017ರ ಜುಲೈ 27ರಂದು ಕಾವೇರಿ ಟೆಲಿಕಾಂ ನಿರ್ದೇಶಕರು ಮತ್ತು ಪ್ರವರ್ತಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಸಿಬಿಐ, ತನಿಖೆ ನಡೆಸಿತ್ತು. ನಕಲಿ ದಾಖಲೆಗಳನ್ನು ಸಲ್ಲಿಸಿ ಬ್ಯಾಂಕ್‌ನಿಂದ ಸಾಲ ಪಡೆದಿದ್ದು, ಸೋದರ ಸಂಸ್ಥೆಗಳನ್ನು ಬಳಸಿಕೊಂಡು ₹ 27.14 ಕೋಟಿಯನ್ನು ಅಕ್ರಮವಾಗಿ ವಿದೇಶಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಸಿಬಿಐ ಆರೋಪಪಟ್ಟಿಯಲ್ಲಿ ತಿಳಿಸಿತ್ತು.

ಸಿಬಿಐ ತನಿಖಾ ವರದಿಯನ್ನು ಆಧರಿಸಿ ಕಾವೇರಿ ಟೆಲಿಕಾಂ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಇ.ಡಿ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು.

ಕಂಪನಿ ಹೆಸರಿನಲ್ಲಿ ಬ್ಯಾಂಕ್‌ನಿಂದ ಸಾಲ ಪಡೆದು, ಆ ಹಣವನ್ನು ಬಳಸಿಕೊಂಡು ಸಂಸ್ಥೆಯ ನಿರ್ದೇಶಕರು ಮತ್ತು ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿಸಿರುವುದನ್ನು ತನಿಖಾ ಸಂಸ್ಥೆ ಪತ್ತೆ ಮಾಡಿದೆ. ಕಾವೇರಿ ಟೆಲಿಕಾಂ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ ನಿರ್ದೇಶಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ಸೇರಿರುವ ₹ 40.14 ಕೋಟಿ ಮೌಲ್ಯದ ಅಪಾರ್ಟ್‌ಮೆಂಟ್‌ಗಳು, ವಸತಿ ನಿವೇಶನಗಳು, ಕೃಷಿ ಜಮೀನು ಮತ್ತು ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ತಿಳಿಸಿದೆ.

'ಆದಾಯ ತೆರಿಗೆ ದರ ತಗ್ಗಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈಯಕ್ತಿಕ ಆದಾಯ ತೆರಿಗೆ ದರಗಳನ್ನು ತಗ್ಗಿಸುವ ಮೂಲಕ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡುವಂತೆ' ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಅಧ್ಯಕ್ಷ ಸಂಜೀವ್ ಬಜಾಜ್ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಸಿಐಐ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. 'ಬೇಡಿಕೆ ಹೆಚ್ಚಾಗಲು ಜನರ ಕೈಯಲ್ಲಿ ಹೆಚ್ಚು ಹಣ ಇರುವುದು ಅಗತ್ಯ. ಹೀಗಾಗಿ ಸರ್ಕಾರವು ಆದಾಯ ತೆರಿಗೆ ದರಗಳನ್ನು ಇಳಿಕೆ ಮಾಡುವ ಬಗ್ಗೆ ಆಲೋಚಿಸಬೇಕು' ಎಂದರು.

ಭಾರತದ ಆರ್ಥಿಕ ತಳಹದಿಯು ಬಲಿಷ್ಠವಾಗಿದ್ದು, 2022-23ನೇ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆ ದರವು ಶೇ 7.4 ರಿಂದ ಶೇ 8.2ರ ಮಟ್ಟದಲ್ಲಿ ಇರಲಿದೆ ಎಂದರು.

ಜಾಗತಿಕ ಆರ್ಥಿಕತೆಯಲ್ಲಿ ಉಂಟಾಗಿರುವ ಅನಿಶ್ಚಿತ ಸ್ಥಿತಿ ಹಾಗೂ ವಿದೇಶಿ ಬಂಡವಾಳ ಹಿಂದಕ್ಕೆ ಪಡೆಯುತ್ತಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಿದ ಅವರು, 'ಆರ್ಥಿಕತೆಯ ಚೇತರಿಕೆಗಾಗಿ ಭಾರತವು ತನ್ನ ವಿದೇಶಿ ವಿನಿಮಯ ಮೀಸಲು ಹೆಚ್ಚಿಸಿಕೊಳ್ಳುವ ಅಗತ್ಯ ಇದೆ' ಎಂದು ಅಭಿಪ್ರಾಯಪಟ್ಟರು.

ಯಂಗ್ ಇಂಡಿಯನ್ ಕಚೇರಿ ಆವರಣಕ್ಕೆ ಬೀಗ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ) ಹಣ ಅಕ್ರಮ ವರ್ಗಾವಣೆ ಸಂಬಂಧ ಯಂಗ್ ಇಂಡಿಯನ್ (ವೈಐ) ಕಚೇರಿ ಆವರಣಕ್ಕೆ ಬುಧವಾರ ತಾತ್ಕಾಲಿಕವಾಗಿ ಬೀಗ ಹಾಕಿದೆ.

'ಮಂಗಳವಾರ ನಡೆದ ಶೋಧ ಕಾರ್ಯದ ವೇಳೆ ಯಂಗ್ ಇಂಡಿಯನ್ ಕಚೇರಿಗೆ ಸೇರಿದ ಯಾರೂ ಸ್ಥಳದಲ್ಲಿರಲಿಲ್ಲ. ಹೀಗಾಗಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಸಾಧ್ಯವಾಗಿಲ್ಲ. ಪುರಾವೆಗಳನ್ನು ಸಂರಕ್ಷಿಸುವ ಉದ್ದೇಶದಿಂದ ಕಚೇರಿಯ ಆವರಣದಲ್ಲಿ ತಾತ್ಕಾಲಿಕವಾಗಿ ಬೀಗ ಹಾಕಲಾಗಿದೆ' ಎಂದು ಇ.ಡಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಾಂಗ್ರೆಸ್ ಒಡೆತನದ 'ಹೆರಾಲ್ಡ್ ಹೌಸ್'ನಲ್ಲಿ ಕಚೇರಿ ಇದ್ದು, 'ಪೂರ್ವಾನುಮತಿ ಇಲ್ಲದೆ ಯಾರೂ ಬೀಗ ತೆರೆಯುವಂತಿಲ್ಲ' ಎಂದು ಸೂಚಿಸಲಾಗಿದೆ. ಈ ಸಂಬಂಧ ಭಿತ್ತಿಪತ್ರವೊಂದನ್ನು ಅಂಟಿಸಲಾಗಿದೆ.

'ಕಟ್ಟಡದಲ್ಲಿರುವ ಇತರ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಲು ಯಾವುದೇ ಅಭ್ಯಂತರವಿಲ್ಲ' ಎಂದು ಅಧಿಕಾರಿ ತಿಳಿಸಿದ್ದಾರೆ.

'ಯಂಗ್ ಇಂಡಿಯನ್ ಕಚೇರಿಯ ಬಾಗಿಲು ತೆರೆದು ಶೋಧ ಕಾರ್ಯಕ್ಕೆ ಅನುವು ಮಾಡಿಕೊಡುವಂತೆ ಕಚೇರಿಯ ಅಧಿಕಾರಿಯೊಬ್ಬರಿಗೆ ಇ-ಮೇಲ್ ಮೂಲಕ ಸಂದೇಶ ಕಳುಹಿಸಲಾಗಿದೆ. ಅದಕ್ಕೆ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ' ಎಂದು ಇ.ಡಿ ಹೇಳಿದೆ.

'ಕಚೇರಿಯ ಅಧಿಕಾರಿಗಳು ಹಾಜರಾದಲ್ಲಿ ಇ.ಡಿ ಅಧಿಕಾರಿಗಳು ಶೋಧ ಕಾರ್ಯ ಪೂರ್ಣಗೊಳಿಸಲಿದ್ದಾರೆ. ಬಳಿಕ ಬೀಗವನ್ನೂ ತೆರವುಗೊಳಿಸಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ. ಇ.ಡಿ ಅಧಿಕಾರಿಗಳು ಹೆರಾಲ್ಡ್ ಹೌಸ್ ಹಾಗೂ ಇತರ 11 ಸ್ಥಳಗಳಲ್ಲಿ ಮಂಗಳವಾರ ಶೋಧ ಕಾರ್ಯ ನಡೆಸಿದ್ದರು.

ಯಂಗ್ ಇಂಡಿಯನ್ ಕಚೇರಿ ಆವರಣಕ್ಕೆ ಬೀಗ ಹಾಕಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಎಐಸಿಸಿ ಕಚೇರಿಯ ಹೊರಗೆ ಬುಧವಾರ ಪ್ರತಿಭಟನೆ ನಡೆಸಿದ್ದಾರೆ.

ಎಐಸಿಸಿ ಕಚೇರಿ ಮಾರ್ಗ ಬಂದ್

ಯಂಗ್ ಇಂಡಿಯನ್ ಕಚೇರಿಗೆ ಇ.ಡಿ ಬೀಗ ಮುದ್ರೆ ಹಾಕಿದ ಬೆನ್ನಲ್ಲೇ ದೆಹಲಿ ಪೊಲೀಸರು ಎಐಸಿಸಿ ಕೇಂದ್ರ ಕಚೇರಿಗೆ ಸಂಪರ್ಕ ಬೆಸೆಯುವ ರಸ್ತೆಯನ್ನು ಬ್ಯಾರಿಕೇಡ್ ಹಾಕಿ ಬಂದ್ ಮಾಡಿದ್ದಾರೆ.

ಎಐಸಿಸಿ ಕಚೇರಿ ಎದುರು ಪೊಲೀಸರನ್ನು ನಿಯೋಜಿಸಿರುವ ಹಾಗೂ ರಸ್ತೆ ಬಂದ್ ಮಾಡಿರುವ ದೃಶ್ಯವುಳ್ಳ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಪೊಲೀಸರು ಏಕೆ ಹೀಗೆ ಮಾಡಿದ್ದಾರೆ ಎಂಬುದೇ ನಿಗೂಢ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಪ್ರತಿಭಟನಕಾರರು ಎಐಸಿಸಿ ಕಚೇರಿ ಮುಂದೆ ಸೇರುವ ಬಗ್ಗೆ ಮಾಹಿತಿ ಲಭಿಸಿದೆ. ಹೀಗಾಗಿ ಮುಂಜಾಗ್ರತಾ ದೃಷ್ಟಿಯಿಂದ ಕಚೇರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬಂದ್ ಮಾಡಲಾಗಿದೆ' ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹೊಸತು	40000-45000
ಪುತ್ತೂರು	
ಕೋಕ	11000-26000
ಹೊಸತು	32000-45000
ಸಾಗರ	
ಬಿಳಿಗೋಟು	28599-29619
ಚಾಲಿ	37899-38199
ಕೋಕ	32989-34499
ಕೆಂಪುಗೋಟು	37199-37199
ರಾಶಿ	48649-50159
ಸಿಪ್ಪೆಗೋಟು	21303-21899
ಸಿದ್ದಾಪುರ	
ಬಿಳಿಗೋಟು	23889-32101
ಚಾಲಿ	37509-40100
ಕೋಕ	29669-33909
ಕೆಂಪುಗೋಟು	30089-30089
ರಾಶಿ	48599-49809
ತಟ್ಟಿಬೆಟ್ಟೆ	37889-49299
ಶಿರಸಿ	
ಬೆಟ್ಟೆ	38999-44499
ಬಿಳಿಗೋಟು	25009-33481
ಚಾಲಿ	37269-40817
ರಾಶಿ	48500-51189

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15500	15850	209.90 ಸೆಂಟ್ಸ್
ಎಸಿ	8820	8400	8800	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4700	4500	4550	2027 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
3-8-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1195 (1210)
ಪಾಮ್ ವಾರದ ಡೆಲಿವರಿ	1238 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (1490)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,350 (51,250)
ಬೆಳ್ಳಿ ಕೆ.ಜಿ 57,250 (57,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜೊಮಾಟೊದಲ್ಲಿನ ಷೇರು ಮಾರಿದ ಉಬರ್

ನವದೆಹಲಿ (ಪಿಟಿಐ): ಉಬರ್ ಟೆಕ್ನಾಲಜೀಸ್ ಕಂಪನಿಯು ಆಹಾರ ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಜೊಮಾಟೊ ಕಂಪನಿಯಲ್ಲಿ ಹೊಂದಿದ್ದ 61.2 ಕೋಟಿ ಷೇರುಗಳನ್ನು ₹ 3,088 ಕೋಟಿಗೆ ಬುಧವಾರ ಮಾರಾಟ ಮಾಡಿದೆ.

ಷೇರು ಮಾರಾಟದ ಬಗ್ಗೆ ಬಿಎಸ್‌ಇನಲ್ಲಿ ಮಾಹಿತಿ ಇದೆ. ಪ್ರತಿ ಷೇರಿಗೆ ₹ 50.44ರಂತೆ ಮಾರಾಟ ಮಾಡಲಾಗಿದೆ. ಫೆಡಿಲಿಟಿ ಸಿರೀಸ್ ಎಮರ್ಜಿಂಗ್ ಮಾರ್ಕೆಟ್ಸ್ ಫಂಡ್ 5.44 ಕೋಟಿ ಮತ್ತು ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶುರೆನ್ಸ್ ಕಂಪನಿ 4.50 ಕೋಟಿ ಷೇರುಗಳನ್ನು ಖರೀದಿಸಿವೆ.



ರೇಸ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ಮತ್ತು ಶುಕ್ರವಾರ ನಡೆಯಬೇಕಿದ್ದ ಬೆಂಗಳೂರು ಬೇಸಿಗೆ ರೇಸ್‌ಗಳನ್ನು ರದ್ದುಗೊಳಿಸಲಾಗಿದೆ. ಭಾರಿ ಮಳೆಯಿಂದಾಗಿ ರೇಸ್ ಟ್ರ್ಯಾಕ್ ರೇಸ್‌ಗೆ ಯೋಗ್ಯವಿಲ್ಲದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬೆಂಗಳೂರು ಸಮ್ಮರ್ ಮಿಲಿಯನ್ ಮತ್ತು ಗವರ್ನರ್ಸ್ ಕಪ್ ರೇಸ್‌ಗಳನ್ನು ಕ್ರಮವಾಗಿ ಆ.11 (ಗುರುವಾರ) ಮತ್ತು ಆ. 12 (ಶುಕ್ರವಾರ) ರಂದು ನಡೆಸಲಾಗುವುದು.

ಒಂದು ಹೆಚ್ಚುವರಿ ರೇಸ್ ದಿನವನ್ನು ಆ. 19 ರಂದು ನಡೆಸಲು ನಿರ್ಧರಿಸಲಾಗಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಪ್ರಕಟಣೆ ತಿಳಿಸಿದೆ.

ಮೈಸೂರು ರೇಸ್ ಮುಂದೂಡಿಕೆ: ಬುಧವಾರದ ಮೈಸೂರು ಬೇಸಿಗೆ ರೇಸ್‌ಗಳನ್ನು ಮಳೆಯ ಕಾರಣ ಮುಂದೂಡಲಾಗಿದ್ದು, ಗುರುವಾರ (ಆ.4) ನಡೆಸಲಾಗುವುದು. ಈಗಾಗಲೇ ಪ್ರಕಟವಾಗಿರುವ ಬುಧವಾರದ ರೇಸ್‌ಕಾರ್ಡ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಮೈಸೂರು ಟರ್ಫ್ ಕ್ಲಬ್ ಲಿಮಿಟೆಡ್ ಪ್ರಕಟಣೆ ತಿಳಿಸಿದೆ.

ಎಸ್‌ಯುಎಫ್‌ಸಿ: ಅಂಜು ನೇಮಕ

ಬೆಂಗಳೂರು: ಇಲ್ಲಿಯ ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್‌ನ (ಎಸ್‌ಯುಎಫ್‌ಸಿ) ತಾಂತ್ರಿಕ ನಿರ್ದೇಶಕರಾಗಿ ಅಂಜು ತುರಂಬೇಕರ್ ನೇಮಕವಾಗಿದ್ದಾರೆ. ಮಹಾರಾಷ್ಟ್ರದ ಕೊಲ್ಹಾಪುರದ ಅಂಜು ಎಎಫ್‌ಸಿ 'ಎ' ಪರವಾನಿಗೆ ಹೊಂದಿರುವ ಅಧಿಕಾರಿಯಾಗಿದ್ದಾರೆ. ಎಎಫ್‌ಸಿ ಗ್ರಾಸ್‌ರೂಟ್ಸ್ ಸಮಿತಿಯಲ್ಲೂ ಅವರಿದ್ದಾರೆ ಎಂದು ಕ್ಲಬ್‌ನ ಪ್ರಕಟಣೆ ತಿಳಿಸಿದೆ.

ಮಹಿಳಾ ತಂಡ ಜಯಭೇರಿ

ಚೆಸ್ ಒಲಿಂಪಿಯಾಡ್; ಹಂಪಿ, ವೈಶಾಲಿ ಚಾಣಾಕ್ಷ ಆಟ



ಕೊನೇರು ಹಂಪಿ

ಮಹಾಬಲಿಪುರಂ (ಪಿಟಿಐ): ಕೋನೇರು ಹಂಪಿ ಮತ್ತು ಆರ್.ವೈಶಾಲಿ ಅವರ ಚುರುಕಿನ ಆಟದ ನೆರವಿನಿಂದ ಭಾರತ ಮಹಿಳಾ 'ಎ' ತಂಡದವರು ಚೆಸ್ ಒಲಿಂಪಿಯಾಡ್‌ನಲ್ಲಿ ಜಯ ಸಾಧಿಸಿದರು.

ಬುಧವಾರ ನಡೆದ ಆರನೇ ಸುತ್ತಿನಲ್ಲಿ ಭಾರತ 3-1 ರಲ್ಲಿ ಜಾರ್ಜಿಯ ಎದುರು ಗೆದ್ದಿತು. ಹಂಪಿ ಅವರು 42 ನಡೆಗಳಲ್ಲಿ ನನಾ ಡಿಜಾಗ್ನಿಜೆ ಅವರನ್ನು ಮಣಿಸಿದರೆ, ವೈಶಾಲಿ ಅವರು ಲೇಲಾ ಜವಾಕ್‌ಶ್ವಿಲಿ ಎದುರು ಗೆದ್ದರು. ತಾನಿಯಾ ಸಚ್‌ದೇವ್-ಸಲೋಮ್ ಮೆಲಿಯಾ ಮತ್ತು ಡಿ.ಹರಿಕಾ- ನಿನೊ ಬಾಟ್‌ಸಿಯಾಶ್ವಿಲಿ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಮಹಿಳೆಯರ ವಿಭಾಗದಲ್ಲಿ ಭಾರತ 'ಬಿ' ತಂಡ 2-2 ರಲ್ಲಿ ಜೆಕ್ ಗಣರಾಜ್ಯದ ಜತೆ ಡ್ರಾ ಮಾಡಿಕೊಂಡಿತು. ವಂತಿಕಾ ಅಗರವಾಲ್, ಪದ್ಮಿನಿ ರಾವತ್, ಮೇರಿ ಆ್ಯನ್‌ಗೋಮ್ಸ್ ಮತ್ತು ದಿವ್ಯಾ ದೇಶಮುಖ್ ಅವರು ಎದುರಾಳಿಗಳ ಜತೆ ಪಾಯಿಂಟ್ ಹಂಚಿಕೊಂಡರು. ಭಾರತ 'ಸಿ' ತಂಡ 3-1 ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಗೆದ್ದಿತು.

ಮುಕ್ತ ವಿಭಾಗದಲ್ಲಿ ಭಾರತ 'ಎ' ತಂಡ ಉಜ್ಬೆಕಿಸ್ತಾನ ಜತೆ 2-2 ರಲ್ಲಿ ಡ್ರಾ ಮಾಡಿಕೊಂಡಿತು. ಪಿ.ಹರಿಕೃಷ್ಣ ಅವರು ಅಬ್ದುಸತ್ತಾರೊವ್ ನಾದಿರ್ಬೆಕ್ ಎದುರು ಗೆದ್ದರೆ, ಕೆ.ಶಶಿಕಿರಣ್ ಅವರು ವಖಿದೊವ್ ಶಂಸಿದ್ದೀನ್ ಕೈಯಲ್ಲಿ ಪರಾಭವಗೊಂಡರು. ವಿದಿತ್ ಸಂತೋಷ್ ಗುಜರಾತಿ- ಯಾಕುಬೊವ್ ನಾದಿರ್ಬೆಕ್, ಅರ್ಜುನ್ ಎರಿಗೈಸಿ-ಸಿಂದರೊವ್ ಜವೊಖಿರ್ ನಡುವಿನ ಪಂದ್ಯ ಡ್ರಾದಲ್ಲಿ ಕೊನೆಗೊಂಡವು.

ಪ್ರಭಾವಿ ಆಟವಾಡಿದ 'ಸಿ' ತಂಡದವರು 3.5-0.5 ರಿಂದ ಲಿಥುವೇನಿಯ ವಿರುದ್ಧ ಗೆದ್ದು ಅಚ್ಚರಿಯ ಫಲಿತಾಂಶ ನೀಡಿದರು.

ಎಸ್.ಪಿ.ಸೇತುರಾಮನ್, ಅಭಿಜಿತ್ ಗುಪ್ತಾ ಮತ್ತು ಅಭಿಮನ್ಯು ಪುರಾಣಿಕ್ ಅವರು ತಮ್ಮ ಎದುರಾಳಿಗಳನ್ನು ಮಣಿಸಿದರೆ, ಸೂರ್ಯಶೇಖರ್ ಗಂಗೂಲಿ- ಟೈಟಸ್ ಸ್ಟ್ರೆಮವಿಸಿಯಸ್ ಡ್ರಾ ಮಾಡಿಕೊಂಡರು.

ಮುಕ್ತ ವಿಭಾಗದಲ್ಲಿ ಅಗ್ರ ಶ್ರೇಯಾಂಕ ಹೊಂದಿರುವ ಅಮೆರಿಕ 2.5-1.5 ಪಾಯಿಂಟ್‌ಗಳಿಂದ ಇರಾನ್ ವಿರುದ್ಧ ಜಯಿಸಿತು. ಫ್ಯಾಬಿಯಾನೊ ಕರುವಾನಾ ಅವರು ಪರ್ಹಾಮ್ ಮಗ್ಸೂದ್‌ಲು ಎದುರು ಗೆದ್ದರು. ಇತರ ಮೂರು ಪಂದ್ಯಗಳ ಡ್ರಾದಲ್ಲಿ ಕೊನೆಗೊಂಡವು.

ನಾಲ್ಕನೇ ಶ್ರೇಯಾಂಕ ಹೊಂದಿರುವ ಸ್ಪೇನ್ ತಂಡ ಕ್ಯೂಬಾ ಜತೆ 2-2 ರಲ್ಲಿ ಡ್ರಾ ಸಾಧಿಸಿತು. ಆಸ್ಟ್ರೇಲಿಯಾ ತಂಡವು ಮ್ಯಾಗ್ನಸ್ ಕಾರ್ಲ್‌ಸನ್ ನೇತೃತ್ವದ ನಾರ್ವೆ ಎದುರು 2.5-1.5 ಪಾಯಿಂಟ್‌ಗಳಿಂದ ಗೆದ್ದಿತು.

'ಬಿ' ತಂಡಕ್ಕೆ ಮೊದಲ ಸೋಲು

ಯುವ ಆಟಗಾರರನ್ನು ಒಳಗೊಂಡ ಭಾರತ 'ಬಿ' ತಂಡದ ಸತತ ಐದು ಪಂದ್ಯಗಳ ಗೆಲುವಿನ ಓಟಕ್ಕೆ ತೆರೆಬಿದ್ದಿದೆ. ಬುಧವಾರ ನಡೆದ ಮುಕ್ತ ವಿಭಾಗದ ಆರನೇ ಸುತ್ತಿನಲ್ಲಿ ಅರ್ಮೇನಿಯ 2.5-1.5 ಪಾಯಿಂಟ್‌ಗಳಿಂದ ಭಾರತ ತಂಡವನ್ನು ಮಣಿಸಿತು.

ಡಿ.ಗುಕೇಶ್ ಅವರು ಗ್ಯಾಬ್ರಿಯೆಲ್ ಸರ್ಗಿಸಿಯಾನ್ ವಿರುದ್ಧ ಗೆದ್ದು ಪೂರ್ಣ ಪಾಯಿಂಟ್ ತಂದುಕೊಟ್ಟರು. ಇದು ಟೂರ್ನಿಯಲ್ಲಿ ಅವರಿಗೆ ದೊರೆತ ಸತತ ಆರನೇ ಗೆಲುವು. ಆದರೆ ಬಿ.ಅಧಿಬನ್ ಮತ್ತು ರೌನಕ್ ಸಾಧ್ವಾನಿ ಕ್ರಮವಾಗಿ ಸ್ಯಾಮ್ವೆಲ್ ಸಹಕ್ಯಾನ್ ಹಾಗೂ ರಾಬರ್ಟ್ ಹೊವ್‌ನಿಸಿನ್ ಎದುರು ಪರಾಭವಗೊಂಡರು. ನಿಹಾಲ್ ಸರಿನ್- ಹ್ರಾಂಟ್ ಮೆಕುಮ್ಯಾನ್ ನಡುವಿನ ಪಂದ್ಯ ಡ್ರಾ ಆಯಿತು.

ಡೋಪಿಂಗ್ ತಡೆ ಮಸೂದೆಗೆ ರಾಜ್ಯಸಭೆ ಅಸ್ತು

ನವದೆಹಲಿ (ಪಿಟಿಐ): ರಾಷ್ಟ್ರೀಯ ಉದ್ದೀಪನ ತಡೆ ಘಟಕ ಮತ್ತು ರಾಷ್ಟ್ರೀಯ ಉದ್ದೀಪನ ಮದ್ದು ಪರೀಕ್ಷಾ ಪ್ರಯೋಗಾಲಯ ಕಾರ್ಯವೈಖರಿಯ ರೂಪುರೇಷೆ ಸಿದ್ಧತೆಗೆ ಒತ್ತು ನೀಡುವ ಮಸೂದೆಯನ್ನು ಬುಧವಾರ ಸಂಸತ್‌ನಲ್ಲಿ ಅಂಗೀಕರಿಸಲಾಯಿತು.

ರಾಜ್ಯಸಭೆಯಲ್ಲಿ ಧ್ವನಿಮತದ ಮೂಲಕ ಈ ಮಸೂದೆಗೆ ಅನುಮೋದನೆ ನೀಡಲಾಯಿತು. ಹೋದ ವಾರ ಲೋಕಸಭೆಯಲ್ಲಿಯೂ ಅಂಗೀಕರಿಸಲಾಗಿತ್ತು.

'ಸದ್ಯ ನಮ್ಮ ದೇಶದ ಪ್ರಯೋಗಾಲಯದಲ್ಲಿ ವರ್ಷಕ್ಕೆ ಆರು ಸಾವಿರ ಮಾದರಿಗಳನ್ನು ಪರೀಕ್ಷಿಸುವ ಅವಕಾಶ ಮಾತ್ರ ಇದೆ. ಈ ಮಸೂದೆಯಿಂದಾಗಿ ನಾಡಾ ಪ್ರಯೋಗಾಲಯವನ್ನು ಉನ್ನತೀಕರಿಸಲು ಅನುಕೂಲವಾಗಲಿದೆ. ದೇಶದಲ್ಲಿ ದೊಡ್ಡ ಮಟ್ಟದ ಅಂತರರಾಷ್ಟ್ರೀಯ ಕ್ರೀಡಾಕೂಟಗಳನ್ನು ಆಯೋಜಿಸಿದಾಗ ಮಾಸಿಕ 10 ಸಾವಿರ ಮಾದರಿಗಳ ಪರೀಕ್ಷಾ ಸಾಮರ್ಥ್ಯ ಅಭಿವೃದ್ಧಿಸಬಹುದಾಗಿದೆ' ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮಸೂದೆಗೆ ಸಂಬಂಧಿಸಿದ ಚರ್ಚೆಯಲ್ಲಿ ಹೇಳಿದ್ದಾರೆ.

'ಉದ್ದೀಪನ ಮದ್ದು ಪ್ರಕರಣ ತನಿಖೆ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವುದು ಮತ್ತು ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಈ ಮಸೂದೆಯಿಂದ ಸಾಧ್ಯವಾಗಲಿದೆ. ನಾಡಾ ಬಲವರ್ಧನೆಯಾಗಲಿದೆ' ಎಂದೂ ಸಚಿವರು ಹೇಳಿದ್ದಾರೆ.

'ಈ ಮಸೂದೆ ಅನುಮೋದನೆಯಿಂದಾಗಿ ಭಾರತವೂ ಈಗ ಅಮೆರಿಕ, ಚೀನಾ, ಜಪಾನ್ ಮತ್ತು ಫ್ರಾನ್ಸ್ ದೇಶಗಳ ಸಾಲಿಗೆ ಸೇರಿದೆ' ಎಂದೂ ಹೇಳಿದ್ದಾರೆ.



ಭರತ್ ಶ್ರೀಧರ್, ಪ್ರಿಯಾ ಮೋಹನ್, ಕಪಿಲ್ ಮತ್ತು ರೂಪಲ್– ಎಎಫ್‌ಐ ಟ್ವಿಟರ್ ಚಿತ್ರ

20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್: ಏಷ್ಯನ್ ದಾಖಲೆ

ಭಾರತ ರಿಲೇ ತಂಡಕ್ಕೆ ಬೆಳ್ಳಿ

ಕ್ಯಾಲಿ, ಕೊಲಂಬಿಯಾ (ಪಿಟಿಐ) : ಕರ್ನಾಟಕದ ಪ್ರಿಯಾ ಮೋಹನ್ ಅವರನ್ನೊಳಗೊಂಡ ಭಾರತ 4X400 ಮೀಟರ್ಸ್ ಮಿಶ್ರ ರಿಲೇ ತಂಡವು 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕಕ್ಕೆ ಮುತ್ತಿಟ್ಟಿದೆ. ಇಲ್ಲಿ ಪದಕ ಜಯಿಸುವುದರೊಂದಿಗೆ ತಾನೇ ಸ್ಥಾಪಿಸಿದ್ದ ಏಷ್ಯನ್ ಜೂನಿಯರ್ ದಾಖಲೆಯನ್ನು ತಂಡ ಉತ್ತಮಪಡಿಸಿಕೊಂಡಿತು.

ಪ್ರಿಯಾ, ಭರತ್ ಶ್ರೀಧರ್, ರೂಪಾಲ್ ಚೌಧರಿ ಮತ್ತು ಕಪಿಲ್ ಅವರಿದ್ದ ತಂಡವು ಬುಧವಾರ ನಡೆದ ಫೈನಲ್‌ನಲ್ಲಿ 3 ನಿಮಿಷ 17.76 ಸೆಕೆಂಡುಗಳಲ್ಲಿ ಗುರಿ ತಲುಪಿತು. ಅಮೆರಿಕ (3 ನಿ. 17.69 ಸೆಕೆಂಡು) ತಂಡವು ಚಿನ್ನ ಗೆದ್ದರೆ, ಜಮೈಕಾ (3 ನಿ.19.98 ಸೆ.) ತಂಡಕ್ಕೆ ಕಂಚು ಒಲಿಯಿತು.

ಭಾರತ ತಂಡವು ಸೋಮವಾರ ಹೀಟ್ಸ್‌ನಲ್ಲಿ 3 ನಿಮಿಷ 19.62 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಏಷ್ಯನ್ ಜೂನಿಯರ್ ವಿಭಾಗದಲ್ಲಿ ದಾಖಲೆ ಬರೆದಿತ್ತು.

ಭಾರತ ಸತತ ಎರಡನೇ ಆವೃತ್ತಿಯಲ್ಲಿ ಈ ವಿಭಾಗದಲ್ಲಿ ಪದಕ ಗೆದ್ದುಕೊಂಡಿದೆ. ಕಳೆದ ವರ್ಷ ನೈರೋಬಿಯಲ್ಲಿ ನಡೆದ ಕಳೆದ ಆವೃತ್ತಿಯಲ್ಲಿ ಕಂಚು ಜಯಿಸಿತ್ತು. 2021ರಲ್ಲೇ ಈ ವಿಭಾಗವನ್ನು ಮೊದಲ ಬಾರಿಗೆ ನಡೆಸಲಾಗಿತ್ತು.

ವೀಸಾ ಸಮಸ್ಯೆಯಿಂದಾಗಿ ಭಾರತ ತಂಡವು ಸ್ಪರ್ಧೆಗಿಂತ ಕೇವಲ ಒಂದು ದಿನ ಮೊದಲು ಇಲ್ಲಿ ತಲುಪಿತ್ತು. ಹೀಗಾಗಿ ತಂಡದ ಬೆಳ್ಳಿ ಪದಕದ ಸಾಧನೆ ವಿಶೇಷ ಎನಿಸಿದೆ.

ಮಂಗಳವಾರ ಪ್ರಿಯಾ ಹಾಗೂ ರೂಪಲ್ 400 ಮೀಟರ್ಸ್ ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು. ಮಹಿಳೆಯರ 800 ಮೀ. ವಿಭಾಗದಲ್ಲಿ ಆಶಾಕಿರಣ ಬಾರ್ಲಾ ಫೈನಲ್ಸ್ ತಲುಪುವಲ್ಲಿ ವಿಫಲರಾದರು.

ಪ್ರಿಯಾ, ಪೂಜಾರಿಗೆ ಬಹುಮಾನ

ಬೆಂಗಳೂರು: ಪ್ರಿಯಾ ಮೋಹನ್ ಅವರಿಗೆ ರಾಜ್ಯ ಸರ್ಕಾರವು ಬುಧವಾರ ₹ 5 ಲಕ್ಷ ಬಹುಮಾನ ಘೋಷಿಸಿದೆ.

ಕಾಮನ್‌ವೆಲ್ತ್ ಗೇಮ್ಸ್ ವೇಟ್‌ಲಿಫ್ಟಿಂಗ್‌ನಲ್ಲಿ ಕಂಚು ಗೆದ್ದ ಕುಂದಾಪುರದ ಗುರುರಾಜ್ ಪೂಜಾರಿ ಅವರಿಗೆ ಇತ್ತೀಚೆಗೆ ಸರ್ಕಾರವು ₹ 8 ಲಕ್ಷ ಘೋಷಿಸಿತ್ತು.

ಟೆನಿಸ್: ಸೆಮಿಗೆ ವೇದಾಂತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಲುವಿನ ಓಟ ಮುಂದುವರಿಸಿದ ಅಗ್ರಶ್ರೇಯಾಂಕದ ವೇದಾಂತ್ ಗುಂಡು ಮತ್ತು ಶೈವಿ ದಲಾಲ್ ಅವರು ಕೆಎಸ್‌ಎಲ್‌ಟಿಎ ಟ್ರಾನ್ಸ್‌ಫಾರ್ಮ್ ಸೂಪರ್ ಸಿರೀಸ್ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಬುಧವಾರ ಸೆಮಿಫೈನಲ್ ತಲುಪಿದರು.

ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ತೆಲಂಗಾಣದ ವೇದಾಂತ್ 6-1, 6-2ರಿಂದ ಕರ್ನಾಟಕದ ಕೌಶಿಕ್ ರಾಜೇಶ್ ಅವರನ್ನು ಸೋಲಿಸಿದರು. ಗುಜರಾತ್‌ನ ಶೈವಿ ಅವರು ಬಾಲಕಿಯರ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ 6-1, 6-3ರಿಂದ ಆತಿಥೇಯ ರಾಜ್ಯದ ಸಾನ್ವಿ ಮಿಶ್ರಾ ಅವರಿಗೆ ಸೋಲುಣಿಸಿದರು.

ಬಾಲಕರ ವಿಭಾಗದ ಎಂಟರಘಟ್ಟದ ಇನ್ನುಳಿದ ಪಂದ್ಯಗಳಲ್ಲಿ ಶ್ರೀಕರ್ ದೋಣಿ 7-5, 6-1ರಿಂದ ರೋಹಿತ್ ಗೋಪಿನಾಥ್ ಎದುರು, ಬಾಲಗಣೇಶ್ ಪಟೇಲ್ 4-6, 7-5, 6-4ರಿಂದ ಎಂ. ಶ್ರೇಯಾಂತ್ ವಿರುದ್ಧ, ಎಂ. ದಿಗಂತ್ 6-3, 6-4ರಿಂದ ಕ್ರಿಸ್ಟೊ ಬಾಬು ವಿರುದ್ಧ ಜಯ ಸಾಧಿಸಿದರು.

ಬಾಲಕಿಯರ ವಿಭಾಗದ ಕ್ವಾರ್ಟರ್‌ಫೈನಲ್ ಇನ್ನುಳಿದ ಸೆಣಸಾಟಗಳಲ್ಲಿ ಸವಿತಾ ಭುವನೇಶ್ವರನ್ 6-2, 6-4ರಿಂದ ಕಾಶ್ವಿ ಸುನಿಲ್ ಎದುರು, ಸ್ನಿಗ್ಧಾ ಕಾಂತ 6-3, 2-6, 6-4ರಿಂದ ಅನ್ವಿ ಪುನಗಂಟಿ ವಿರುದ್ಧ, ಮೇಘನಾ ಜಿ.ಡಿ. 6-1, 6-1ರಿಂದ ಶ್ರೀನಿತಿ ಚೌಧರಿ ಎದುರು ಗೆಲುವಿನ ಸಂಭ್ರಮ ಆಚರಿಸಿದರು.



ಸೂರ್ಯಕುಮಾರ್ ಯಾದವ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಟಿ20: ಸೂರ್ಯ ಪ್ರತಾಪಕ್ಕೆ ಒಲಿದ ಜಯ

ಬೆಸೆಟೆರ್, ಸೆಂಟ್ ಕಿಟ್ಸ್ (ಪಿಟಿಐ): ಸೂರ್ಯಕುಮಾರ್ ಯಾದವ್ ಬ್ಯಾಟಿಂಗ್ ಪರಾಕ್ರಮದ ಮುಂದೆ ವೆಸ್ಟ್ ಇಂಡೀಸ್ ಬೌಲರ್‌ಗಳ ಆಟ ನಡೆಯಲಿಲ್ಲ.

ಇದರಿಂದಾಗಿ ಭಾರತ ತಂಡವು ಮಂಗಳವಾರ ತಡರಾತ್ರಿ ಮುಗಿದ ಟಿ20 ಪಂದ್ಯದಲ್ಲಿ ವಿಂಡೀಸ್ ಎದುರು 7 ವಿಕೆಟ್‌ಗಳಿಂದ ಜಯಿಸಿತು. ಐದು ಪಂದ್ಯಗಳ ಸರಣಿಯಲ್ಲಿ 2-1ರ ಮುನ್ನಡೆ ಗಳಿಸಿತು.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೈಲ್ ಮೇಯರ್ಸ್ (73; 50ಎಸೆತ) ಅರ್ಧಶತಕದ ಬಲದಿಂದ ವಿಂಡೀಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಭಾರತದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಎರಡು, ಹಾರ್ದಿಕ್ ಪಾಂಡ್ಯ ಹಾಗೂ ಅರ್ಷದೀಪ್ ಸಿಂಗ್ ತಲಾ ಒಂದು ವಿಕೆಟ್ ಗಳಿಸಿ, ವಿಂಡೀಸ್ ದೊಡ್ಡ ಮೊತ್ತ ಗಳಿಸದಂತೆ ನೋಡಿಕೊಂಡರು.

ಗುರಿ ಬೆನ್ನಟ್ಟಿದ ಭಾರತ ತಂಡವು 19 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಭಾರತಕ್ಕೆ ಇನಿಂಗ್ಸ್‌ನ ಆರಂಭದಲ್ಲಿಯೇ ಆಘಾತ ಎದುರಾಯಿತು. 11 ರನ್ ಗಳಿಸಿದ್ದ ರೋಹಿತ್ ಗಾಯಗೊಂಡು ಪೆವಿಲಿಯನ್‌ಗೆ ಮರಳಿದರು.

ಆದರೆ ಇದರಿಂದ ತಂಡಕ್ಕೆ ದೊಡ್ಡ ಹಾನಿಯಾಗುವುದನ್ನು ತಡೆಯುವಲ್ಲಿ 'ಮುಂಬೈ ಜೋಡಿ' ಸೂರ್ಯಕುಮಾರ್ ಯಾದವ್ (76; 44ಎಸೆತ, 4X8, 6X4) ಮತ್ತು ಶ್ರೇಯಸ್ ಅಯ್ಯರ್ (24; 27ಎ) ಯಶಸ್ವಿಯಾದರು. ಇವರ ಜೊತೆಯಾಟದಲ್ಲಿ 105 ರನ್ ಸೇರಿದವು. 12ನೇ ಓವರ್‌ನಲ್ಲಿ ಶ್ರೇಯಸ್ ವಿಕೆಟ್ ಗಳಿಸಿದ ಡಾಮ್ನಿಕ್ ಡ್ರೇಕ್ಸ್ ಜೊತೆ ಯಾಟವನ್ನು ಮುರಿದರು.15ನೇ ಓವರ್‌ನಲ್ಲಿ ಸೂರ್ಯ ಕೂಡ ನಿರ್ಗಮಿಸಿದರು. ಈ ಹೊತ್ತಿನಲ್ಲಿ ತಂಡಕ್ಕೆ ಆಸರೆಯಾದ ರಿಷಭ್ (ಔಟಾಗದೆ 33; 26ಎ) ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 5ಕ್ಕೆ164, ಭಾರತ: 19 ಓವರ್‌ಗಳಲ್ಲಿ 3ಕ್ಕೆ165 (ಸೂರ್ಯಕುಮಾರ್ ಯಾದವ್ 76, ಶ್ರೇಯಸ್ ಅಯ್ಯರ್ 24, ರಿಷಭ್ ಪಂತ್ ಔಟಾಗದೆ 33, ದೀಪಕ್ ಹೂಡಾ ಔಟಾಗದೆ 10, ಡಾಮ್ನಿಕ್ ಡ್ರೇಕ್ಸ್ 33ಕ್ಕೆ1) ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಜಯ. ಸರಣಿಯಲ್ಲಿ 2-1 ಮುನ್ನಡೆ. ಮುಂದಿನ ಪಂದ್ಯ: ಆ.6.

ರ‍್ಯಾಂಕಿಂಗ್: 2ನೇ ಸ್ಥಾನಕ್ಕೆ ಸೂರ್ಯ

ದುಬೈ (ಪಿಟಿಐ): ಭಾರತ ತಂಡದ ಸೂರ್ಯಕುಮಾರ್ ಯಾದವ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟಿ20 ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದರು. ಈ ಮೊದಲು 5ನೇ ಸ್ಥಾನದಲ್ಲಿದ್ದ ಅವರು ಮೂರು ಸ್ಥಾನಗಳ ಬಡ್ತಿ ಪಡೆದರು.

ಬ್ರಿಟನ್ ಪ್ರಧಾನಿ ರೇಸ್‌ನಲ್ಲಿ ಲಿಜ್ ಟ್ರಸ್‌ಗೆ ಮುನ್ನಡೆ: ಸಮೀಕ್ಷೆ



ಲಂಡನ್ (ಪಿಟಿಐ): ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಹಾಗೂ ಬ್ರಿಟನ್ ಪ್ರಧಾನಿ ಹುದ್ದೆಯ ರೇಸ್‌ನಲ್ಲಿ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಮುಂಚೂಣಿಯಲ್ಲಿದ್ದಾರೆ ಎಂದು ಸಮೀಕ್ಷೆಯೊಂದು ಬುಧವಾರ ಹೇಳಿದೆ.

'ಯುಗವ್' ಎಂಬ ಸಂಸ್ಥೆ ಸಮೀಕ್ಷೆ ನಡೆಸಿದ್ದು, ಟ್ರಸ್ ಅವರು ಭಾರತೀಯ ಸಂಜಾತ ರಿಷಿ ಸುನಕ್ ಅವರಿಗಿಂತಲೂ 38 ಪಾಯಿಂಟ್ಸ್ ಮುನ್ನಡೆ ಹೊಂದಿರುವುದಾಗಿ ತಿಳಿಸಲಾಗಿದೆ. ಟ್ರಸ್‌ಗೆ ಶೇ 69ರಷ್ಟು ಮತ ಲಭಿಸಿದರೆ, ರಿಷಿ ಅವರು ಶೇ 31ರಷ್ಟು ಮತ ಪಡೆಯಲಿದ್ದಾರೆ ಎಂದೂ ಸಮೀಕ್ಷೆ ಹೇಳಿದೆ.

ಮತ ಹ್ಯಾಕ್ ಸಾಧ್ಯತೆ: ಪ್ರಧಾನಿ ಆಯ್ಕೆಗಾಗಿ ನಡೆಯುವ ಆನ್‌ಲೈನ್ ಮತದಾನದ ವೇಳೆ ಮತಗಳನ್ನು ಹ್ಯಾಕ್ ಮಾಡುವ ಸಾಧ್ಯತೆ ಇದೆ ಎಂದು ಗುಪ್ತಚರ ಇಲಾಖೆ ಮಾಹಿತಿ ನೀಡಿದೆ. ಹೀಗಾಗಿ ಆನ್‌ಲೈನ್ ಮತದಾನವನ್ನು ಕೆಲದಿನಗಳ ಮಟ್ಟಿಗೆ ಮುಂದೂಡಲಾಗಿದೆ.

'ಇಸ್ಲಾಮಿಕ್ ಉಗ್ರವಾದ ನಿರ್ಮೂಲನೆ': ಪ್ರಧಾನಿಯಾಗಿ ಆಯ್ಕೆ ಯಾದರೆ ಇಸ್ಲಾಮಿಕ್ ಉಗ್ರವಾದವನ್ನು ಸದೆಬಡಿಯುವುದಾಗಿ ಅಭ್ಯರ್ಥಿ ರಿಷಿ ಸುನಕ್ ಬುಧವಾರ ಶಪಥ ಮಾಡಿದ್ದಾರೆ.

'ಒಬ್ಬ ಪ್ರಧಾನಿಗೆ ದೇಶವನ್ನು ಹಾಗೂ ದೇಶದ ಪ್ರಜೆಗಳನ್ನು ಸುರಕ್ಷಿತವಾಗಿ ಇಡುವುದಕ್ಕಿಂತ ಮಹತ್ವದ ಕೆಲಸ ಬೇರೆ ಇಲ್ಲ. ಹೀಗಾಗಿ ಇಸ್ಲಾಮಿಕ್ ಉಗ್ರವಾದವನ್ನು ಬೇರು ಸಮೇತ ಕಿತ್ತೊಗೆಯಲು ನಮ್ಮ ಪ್ರಯತ್ನಗಳನ್ನು ದ್ವಿಗುಣಗೊಳಿಸಲಾಗುವುದು' ಎಂದಿದ್ದಾರೆ.

ಮಹೇಶ್ ಜೋಶಿಗೆ ಸಚಿವ ದರ್ಜೆ ಸ್ಥಾನ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿಗೆ ರಾಜ್ಯ ಸಚಿವ ದರ್ಜೆ ಸ್ಥಾನಮಾನವನ್ನು ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ಸಚಿವರು, ನಿಗಮ-ಮಂಡಳಿ ಅಧ್ಯಕ್ಷರಿಗೆ ನೀಡಲಾಗುತ್ತಿದ್ದ ಸಚಿವ ಸ್ಥಾನಮಾನದ ಗೌರವವನ್ನು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಈಗ ವಿಸ್ತರಿಸುತ್ತಿದೆ. ಸಾವಿರಾರು ಗಿಡನೆಟ್ಟು ಪೋಷಿಸಿದ ಸಾಲುಮರದ ತಿಮ್ಮಕ್ಕ ಅವರಿಗೆ ರಾಜ್ಯ ಸಚಿವ ದರ್ಜೆಯ ಸ್ಥಾನಮಾನವನ್ನು ಇತ್ತೀಚೆಗೆ ನೀಡಲಾಗಿತ್ತು.

'ಕನ್ನಡ, ಕರ್ನಾಟಕದ ರಕ್ಷಣೆ ಮಾಡುತ್ತಿರುವ ಪರಿಷತ್ತಿಗೆ ತನ್ನದೆ ಆದ ಘನತೆ ಇದೆ. ಕನ್ನಡ ಪರ ಎಲ್ಲ ಹೋರಾಟಗಳಲ್ಲಿ ಪರಿಷತ್ತು ಮುಂಚೂಣಿಯಲ್ಲಿದೆ. ಸಚಿವ ದರ್ಜೆ ಸ್ಥಾನ ನೀಡಿರುವುದರಿಂದ ಜವಾಬ್ದಾರಿ ಹೆಚ್ಚಾಗಿದೆ' ಎಂದು ಜೋಶಿ ತಿಳಿಸಿದ್ದಾರೆ.

ರಾಮ್‌ಸರ್ ಪಟ್ಟಿಗೆ ರಂಗನತಿಟ್ಟು ಪಕ್ಷಿಧಾಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ರಂಗನತಿಟ್ಟು ಪಕ್ಷಿಧಾಮ ಸೇರಿದಂತೆ 10 ಜೌಗು ಪ್ರದೇಶಗಳು ರಾಮ್‌ಸರ್ ಪಟ್ಟಿಗೆ ಸೇರ್ಪಡೆಯಾಗಿವೆ. ಈ ಮೂಲಕ ಇದಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯ ಬುಧವಾರ ಪ್ರಕಟಿಸಿದೆ.

ಈ ಮೂಲಕ ಅಂತರರಾಷ್ಟ್ರೀಯ ಮಾನ್ಯತೆ ಹೊಂದಿರುವ ಅತೀ ಹೆಚ್ಚು ಜೌಗು ಪ್ರದೇಶಗಳನ್ನು ಹೊಂದಿರುವ ಹೆಗ್ಗಳಿಕೆಗೆ ಭಾರತ ಹಾಗೂ ಚೀನಾ ದೇಶಗಳು ಪಾತ್ರವಾಗಿವೆ. ಭಾರತ ಹಾಗೂ ಚೀನಾದ 64 ಜೌಗು ಪ್ರದೇಶ ಗಳು ಈವರೆಗೆ ಈ ಪಟ್ಟಿಗೆ ಸೇರಿವೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಸಮೀಪದ ರಂಗನತಿಟ್ಟು ಪಕ್ಷಿಧಾಮ ದಲ್ಲಿ 188 ಪ್ರಭೇದದ ಮರಗಳು, 225 ಪ್ರಭೇದದ ಪಕ್ಷಿಗಳು, 69 ಜಾತಿಯ ಮೀನುಗಳು, 13 ಪ್ರಭೇ ದದ ಕಪ್ಪೆಗಳು ಹಾಗೂ 30 ಪ್ರಭೇದದ ಚಿಟ್ಟೆಗಳು ಇವೆ. ಇದು ಭಾರತದ ಪ್ರಮುಖ ಪಕ್ಷಿಧಾಮ ಎಂದು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಈ ಹಿಂದೆ ಗುರುತಿಸಿತ್ತು. ರಂಗನತಿಟ್ಟು ಪಕ್ಷಿಧಾಮ, ಬಳ್ಳಾರಿಯ ಅಂಕಸಮುದ್ರ, ಗದಗ ಜಿಲ್ಲೆಯ ಮಾಗಡಿ ಕೆರೆ ಹಾಗೂ ಉತ್ತರ ಕನ್ನಡದ ಅಘನಾಶಿನಿ ಜೌಗು ಪ್ರದೇಶಗಳನ್ನು ರಾಮ್‌ಸಾರ್ ಪಟ್ಟಿಗೆ ಸೇರಿಸಬೇಕು ಎಂದು ಕರ್ನಾಟಕ ಅರಣ್ಯ ಹಾಗೂ ಪರಿಸರ ಇಲಾಖೆಯು ಕೇಂದ್ರ ಅರಣ್ಯ ಇಲಾಖೆಗೆ ಕಳೆದ ವರ್ಷ ಪ್ರಸ್ತಾವನೆ ಸಲ್ಲಿಸಿತ್ತು. ಪ್ರಕರಣ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಗೆ ಕಳೆದ ವಾರ ಪ್ರಮಾಣಪತ್ರ ಸಲ್ಲಿಸಿದ್ದ ಅರಣ್ಯ ಇಲಾಖೆ, ಈ ಜೌಗು ಪ್ರದೇಶಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಶೀಘ್ರದಲ್ಲಿ ರಾಮ್‌ಸಾರ್ ಮಾನ್ಯತೆ ಸಿಗುವ ವಿಶ್ವಾಸ ಇದೆ' ಎಂದಿತ್ತು.

ಅಮೆರಿಕ-ತೈವಾನ್ ಮೇಲೆ ಕಠಿಣ ಪ್ರತೀಕಾರ: ಗುಡುಗಿದ ಚೀನಾ

ಬೀಜಿಂಗ್ (ಪಿಟಿಐ/ಎಎಫ್‌ಪಿ): ಕಠಿಣ ಎಚ್ಚರಿಕೆ ಲೆಕ್ಕಿಸದೇ ತೈವಾನ್‌ಗೆ ಅಮೆರಿಕದ ಸ್ಪೀಕರ್ ನ್ಯಾನ್ಸಿ ಪೆಲೋಸಿ ಭೇಟಿ ನೀಡಿದ್ದಕ್ಕೆ ಕುಪಿತಗೊಂಡಿರುವ ಚೀನಾ, 'ಒಂದೇ ಚೀನಾ ನೀತಿ' ಉಲ್ಲಂಘಿಸಿರುವ ಅಮೆರಿಕ ಮತ್ತು ತೈವಾನ್ ವಿರುದ್ಧ 'ಕಠಿಣ ಮತ್ತು ಪರಿಣಾಮಕಾರಿ' ಪ್ರತೀಕಾರದ ಕ್ರಮ ತೆಗೆದುಕೊಳ್ಳುವುದಾಗಿ ಬುಧವಾರ ಗುಡುಗಿದೆ.

'ಅಮೆರಿಕ ಪ್ರಚೋದಿಸುವ ರಾಷ್ಟ್ರವಾಗಿದೆ. ಇದಕ್ಕೆ ಚೀನಾ ಬಲಿಪಶು' ಎಂದು ಚೀನಾ ವಿದೇಶಾಂಗ ಸಚಿವಾಲಯ ಕಿಡಿಕಾರಿದೆ. ತೈವಾನ್ ದ್ವೀಪದ ಸುತ್ತ ಸೇನಾ ತಾಲೀಮು ಘೋಷಣೆ, ಆಮದು- ರಫ್ತು ನಿಷೇಧ, ಅಮೆರಿಕದ ವಿರುದ್ಧ ರಾಜತಾಂತ್ರಿಕ ಪ್ರತಿಭಟನೆ ದಾಖಲಿಸಿದ ಜತೆಗೆ ಏನೆಲ್ಲಾ ಹೆಚ್ಚುವರಿ ಕ್ರಮ ತೆಗೆದುಕೊಳ್ಳಲಾಗುವುದೆಂಬ ಪ್ರಶ್ನೆಗಳಿಗೆ ಮಾಧ್ಯಮಗೋಷ್ಠಿಯಲ್ಲಿ ವಿದೇಶಾಂಗ ಸಚಿವಾಲಯದ ವಕ್ತಾರ ಹುವಾ ಚುನ್ಯಿಂಗ್ ಪ್ರತಿಕ್ರಿಯಿಸಿದರು.

ಪೆಲೋಸಿ ಮತ್ತು ತೈವಾನ್ ಅಧ್ಯಕ್ಷೆ ಸಾಯ್ ಇಂಗ್-ವೆನ್ ಅವರಿಗೆ ನಿರ್ಬಂಧ ಹೇರಲಾಗುವುದೇ ಎಂಬ ಮತ್ತೊಂದು ಪ್ರಶ್ನೆಗೆ 'ಸ್ವಲ್ಪ ತಾಳ್ಮೆ ವಹಿಸಿ. ನಾವು ಹೇಳಿದ್ದನ್ನು ಮಾಡುತ್ತೇವೆ. ನಮ್ಮ ಪ್ರತ್ಯುತ್ತರ ಪರಿಣಾಮಕಾರಿಯಾಗಿರಲಿದೆ' ಎಂದು ಹುವಾ ಗುಡುಗಿದರು.

ತೈವಾನ್ ಭೇಟಿ ಯಶಸ್ವಿಯಾದ ನಂತರ ದಕ್ಷಿಣ ಕೊರಿಯಾಕ್ಕೆ ತೆರಳುವ ಮೊದಲು ಪೆಲೋಸಿ ಅವರು, ಜಾಗತಿಕ ಒಗ್ಗಟ್ಟು ಮತ್ತು ಪ್ರಜಾಪ್ರಭುತ್ವ ರಕ್ಷಣೆಯ ಪ್ರತಿಜ್ಞೆ ಮಾಡಿದರು. ಪ್ರಜಾಪ್ರಭುತ್ವದಡಿ ಸ್ವತಂತ್ರ ಆಡಳಿತ ನಡೆಸುತ್ತಿರುವ ತೈವಾನ್ ಒಬ್ಬಂಟಿಯಲ್ಲ. ತೈವಾನ್‌ಗೆ ವಿಶ್ವ ನಾಯಕರ ಭೇಟಿಯನ್ನು ಚೀನಾದಿಂದ ತಡೆಯಲಾಗದು ಎಂದರು.

ಚೀನಾ, ತೈವಾನ್ ಸುತ್ತ ಸೇನಾ ತಾಲೀಮು, ಕ್ಷಿಪಣಿ ಪರೀಕ್ಷೆಯ ಘೋಷಿಸಿದ್ದು, ಬುಧವಾರ ಕೂಡ ತೈವಾನ್ ವಾಯು ರಕ್ಷಣಾ ಪ್ರದೇಶದಲ್ಲಿ ಚೀನಾದ 27 ಯುದ್ಧವಿಮಾನಗಳು ಹಾರಾಟ ನಡೆಸಿವೆ.

ಪೆಲೋಸಿ ಬಂದು ಹೋದ ಮೇಲೆ...

- ನ್ಯಾನ್ಸಿ ಪೆಲೋಸಿ ಅವರ ತೈವಾನ್ ಭೇಟಿ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲು ತೈವಾನ್‌ಗೆ ಬೆದರಿಕೆಯೊಡ್ಡುವಂತೆ ಚೀನಾ ಅಪಾಯಕಾರಿ ರೀತಿಯಲ್ಲಿ ಸೇನಾ ತಾಲೀಮು ನಡೆಸುತ್ತಿದೆ
- ಪೆಲೋಸಿ ಭೇಟಿಯಿಂದ ಆಕ್ರೋಶಗೊಂಡಿರುವ ಚೀನಾ ಮುಂಬರುವ ವಾರಗಳಲ್ಲಿ ದೈನಂದಿನ ತಾಲೀಮಾಗಿ ತೈವಾನ್ ಮೇಲೆ ಡ್ರೋನ್‌ಗಳ ಹಾರಾಟ ನಡೆಸಬಹುದು– ಸೇನಾ ತಜ್ಞರ ವಿಶ್ಲೇಷಣೆ
- ಬೃಹತ್ ಸೇನಾ ತಾಲೀಮಿನಿಂದ ತೈವಾನ್ ದ್ವೀಪ ದಿಗ್ಬಂಧನಕ್ಕೆ ಸಿಲುಕಲಿದೆ. ದ್ವೀಪದ ವಿರುದ್ಧ ಬೀಜಿಂಗ್‌ನ ಸೇನಾ ಕಾರ್ಯಾಚರಣೆ ಗಳಲ್ಲಿ ಪ್ರಗತಿಯಾಗಿದೆ– ವಾಯುಪಡೆಯ ನಿವೃತ್ತ ಅಧಿಕಾರಿ ಫು ಕಿನ್‌ಸಾಹೊ
- ಅಮೆರಿಕ, ತೈವಾನ್ ವಾಯುಪಡೆಗಳ ಪ್ರತಿಕ್ರಿಯೆಗೆ ಚೀನಾ ವಾಯುಪಡೆಯೂ ಪ್ರತ್ಯುತ್ತರಕ್ಕೆ ಸಜ್ಜು. ಗುರುವಾರದ ಸೇನಾ ತಾಲೀಮು ಗಮನಿಸಿದರೆ, ತೈವಾನಿನ ಜಲಗಡಿಗೆ ಚೀನಾದ ಮಾನ್ಯತೆ ಇಲ್ಲ – ಕಿನ್‌ಸಾಹೊ
- ತೈವಾನ್‌ಗೆ ಚೀನಾದಿಂದ ನೈಸರ್ಗಿಕ ಮರಳು ರಫ್ತು ರದ್ದಾಗಿದೆ
- ತೈವಾನ್‌ನ ಹಣ್ಣುಗಳು, ಮೀನು ಉತ್ಪನ್ನಗಳ ಆಮದಿಗೆ ನಿರ್ಬಂಧ
- ಬಿಸ್ಕೆಟ್, ಪೇಸ್ಟ್ರೀಸ್ ಸೇರಿ ತೈವಾನ್‌ನ 35 ರಫ್ತುದಾರರಿಗೆ ಚೀನಾ ಕೊಕ್ಕೆ
- ಅಮೆರಿಕದ ನಡೆಯ ವಿರುದ್ಧ ಕೆಂಡಾಮಂಡಲವಾಗಿರುವ ಚೀನಾ, 'ಒಂದೇ ಚೀನಾ ನೀತಿ'ಗೆ ಮನ್ನಣೆ ನೀಡಿದ ಮೊದಲ ರಾಷ್ಟ್ರ ಭಾರತ. ಇದಕ್ಕೆ ಬದ್ಧವಾಗಿರಬೇಕೆಂದು ತಾಕೀತು ಮಾಡಿ, ಸಂದೇಶ ರವಾನಿಸಿದೆ
- ತೈವಾನ್‌ಗೆ ಸಂಸದೀಯ ನಿಯೋಗ ಕಳಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳಲಿ. ಪೆಲೋಸಿ ಅವರ ರೀತಿಯೇ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಸಂಸದೀಯ ನಿಯೋಗವನ್ನು ತೈವಾನ್‌ಗೆ ಕೊಂಡೊಯ್ಯಲಿ –ಕಾಂಗ್ರೆಸ್ ಸದಸ್ಯ ಮನೀಶ್ ತಿವಾರಿ
- ತಾಕೀತು ಮಾಡಿದ ಹೊರತಾಗಿಯೂ ಮಾಡಿರುವ ತನ್ನ ತಪ್ಪಿಗೆ ಅಮೆರಿಕ ತಕ್ಕ ಬೆಲೆ ತೆರಲಿದೆ– ಚೀನಾ ಎಚ್ಚರಿಕೆ
- ಪೆಲೋಸಿ ಭೇಟಿ ಉದ್ವಿಗ್ನತೆ ಹೆಚ್ಚಿಸಿದೆ. ಇದನ್ನು ಲಘುವಾಗಿ ಪರಿಗಣಿಸಲಾಗದು– ರಷ್ಯಾ ಅಧ್ಯಕ್ಷ ಪುಟಿನ್ ಅವರ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿಕೆ
- ಪೆಲೋಸಿ ಭೇಟಿ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದೆ ಎಂದು ಚೀನಾದ ಮಿತ್ರರಾಷ್ಟ್ರ ಪಾಕಿಸ್ತಾನ ಹೇಳಿದೆ

ಸಂಕ್ಷಿಪ್ತ ಸುದ್ದಿ

ರುಚಿರಾ ಅಧಿಕಾರ ಸ್ವೀಕಾರ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭಾರತದ ಮೊದಲ ಮಹಿಳಾ ಕಾಯಂ ಪ್ರತಿನಿಧಿಯಾಗಿ ರಾಯಭಾರಿ ರುಚಿರಾ ಕಂಬೋಜ (58) ಅವರು ಬುಧವಾರ ಅಧಿಕಾರ ಸ್ವೀಕರಿಸಿದರು. ಟಿ. ಎಸ್. ತಿರುಮೂರ್ತಿ ಅವರಿಂದ ತೆರವಾದ ಸ್ಥಾನಕ್ಕೆ ರುಚಿರಾ ಆಯ್ಕೆಯಾಗಿದ್ದಾರೆ.

1987ನೇ ಬ್ಯಾಚಿನ ಐಎಫ್‌ಎಸ್ ಅಧಿಕಾರಿ ರುಚಿರಾ ಇದಕ್ಕೂ ಮುನ್ನ ಭೂತಾನ್‌ನ ಭಾರತದ ರಾಯಭಾರಿಯಾಗಿದ್ದರು. ಜೂನ್‌ನಲ್ಲಿ ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರನಿಧಿಯಾಗಿ ನೇಮಕಗೊಂಡಿದ್ದರು.

ಜವಾಹಿರಿ ಎಲ್ಲಿದ್ದ ಎಂಬ ಮಾಹಿತಿ ಇರಲಿಲ್ಲ: ವಿಶ್ವಸಂಸ್ಥೆ

ವಿಶ್ವಸಂಸ್ಥೆ: 'ಅಲ್‌ಕೈದಾ ಮುಖ್ಯಸ್ಥ ಅಯ್ಮನ್ ಅಲ್ ಜವಾಹಿರಿ ಎಲ್ಲಿದ್ದ ಎಂಬ ಬಗ್ಗೆ ವಿಶ್ವಸಂಸ್ಥೆಗೆ ಮಾಹಿತಿಯೇ ಇರಲಿಲ್ಲ' ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರ ವಕ್ತಾರ ಸ್ಟೀಫನ್ ದುಜಾರಿಕ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಭಯೋತ್ಪಾದನೆ ವಿರುದ್ಧ ಹೋರಾಟ ನಡೆಸಲು ವಿಶ್ವಸಂಸ್ಥೆ ಬದ್ಧವಾಗಿದೆ. ಈ ನಿಟ್ಟನಲ್ಲಿ ಜಾಗ ತಿಕ ಸಹಕಾರವನ್ನು ಬಲಪಡಿಸಲು ಶ್ರಮಿಸಲಿದೆ' ಎಂದು ಹೇಳಿದರು.

'ನೋಟಿಸ್ ನೀಡದೇ ಮನೆಯಿಂದ ಹೊರ ಹಾಕುವಂತಿಲ್ಲ'

ನವದೆಹಲಿ (ಪಿಟಿಐ): 'ದೆಹಲಿ ಅಭಿವೃದ್ಧಿ ಪ್ರಾಧಿಕಾರವು (ಡಿಡಿಎ) ನೋಟಿಸ್ ನೀಡದೆಯೇ ಅತಿಕ್ರಮಣದಾರರನ್ನು ಮನೆಗಳಿಂದ ಹೊರಹಾಕುವಂತಿಲ್ಲ' ಎಂದು ದೆಹಲಿ ಹೈಕೋರ್ಟ್ ಬುಧವಾರ ಹೇಳಿದೆ.

ಡಿಡಿಎ ಅಧಿಕಾರಿಗಳು ಶಾಕರ್‌ಪುರ ಪ್ರದೇಶದಲ್ಲಿನ ಹಲವು ಮನೆಗಳನ್ನು ನೆಲಸಮ ಮಾಡಿದ್ದರು. ಇದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ ವಿಚಾ ರಣೆ ನಡೆಸಿದ ನ್ಯಾ.ಸುಬ್ರಮಣಿಯಂ ಪ್ರಸಾದ್, 'ಡಿಡಿಎ ಅಧಿಕಾರಿಗಳು ಬುಲ್ಡೋಜರ್ ಗಳನ್ನು ತೆಗೆದುಕೊಂಡು ಹೋಗಿ ಏಕಾಏಕಿ ಮನೆಗಳನ್ನು ಕೆಡವುವಂತಿಲ್ಲ. ಮನೆ ತೆರವುಗೊಳಿಸಲು ನಿವಾಸಿಗಳಿಗೆ ನಿರ್ದಿಷ್ಟ ಕಾಲಾವಕಾಶ ನೀಡಬೇಕು' ಎಂದು ತಿಳಿಸಿದ್ದಾರೆ.

ಮಮತಾ ಸಂಪುಟಕ್ಕೆ 9 ಹೊಸ ಸಚಿವರು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಸಚಿವ ಸಂಪುಟ ಪುನರ್‌ರಚನೆ ಮಾಡಿದ್ದು, ಕೇಂದ್ರದ ಮಾಜಿ ಸಚಿವ ಬಾಬುಲ್ ಸುಪ್ರಿಯೊ ಸೇರಿದಂತೆ ಒಂಬತ್ತು ಮಂದಿ ಪ್ರಮಾಣವಚನ ಸ್ವೀಕರಿಸಿದರು.

ನೂತನ ಸಚಿವರ ಪೈಕಿ ಬಾಬುಲ್ ಸುಪ್ರಿಯೊ ಸೇರಿದಂತೆ ಐದು ಮಂದಿ ಸಂಪುಟ ದರ್ಜೆ, ಇಬ್ಬರು ರಾಜ್ಯ ಸಚಿವರು (ಸ್ವತಂತ್ರ) ಹಾಗೂ ಇಬ್ಬರು ರಾಜ್ಯ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸಿವಿಸಿ ಮುಖ್ಯಸ್ಥರಾಗಿ ಸುರೇಶ್ ಎನ್. ಪಟೇಲ್ ನೇಮಕ

ನವದೆಹಲಿ (ಪಿಟಿಐ): ಕೇಂದ್ರ ಜಾಗೃತ ಆಯೋಗದ (ಸಿವಿಸಿ) ಮುಖ್ಯಸ್ಥರಾಗಿ ಸುರೇಶ್ ಎನ್. ಪಟೇಲ್ ಅವರನ್ನು ಕೇಂದ್ರ ಸರ್ಕಾರ ಬುಧವಾರ ನೇಮಕ ಮಾಡಿದೆ.

ರಾಷ್ಟ್ರಪತಿ ಭವನದಲ್ಲಿ ಅಧಿಕಾರ ಸ್ವೀಕರಿಸಿದ ಪಟೇಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಬೋಧಿಸಿದರು.

ಖಾಲಿ ಇದ್ದ ಸಿವಿಸಿ ಮುಖ್ಯಸ್ಥರ ಹುದ್ದೆಯಲ್ಲಿ ಕಳೆದ ಜೂನ್‌ನಿಂದ ಪಟೇಲ್ ಅವರು ಪ್ರಭಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಇದೇ ವೇಳೆ ಸಿವಿಸಿ ಇನ್ನಿಬ್ಬರು ಆಯುಕ್ತರಾಗಿ ಅಸ್ಸಾಂ- ಮೇಘಾಲಯ ಕೇಡರ್‌ನ ನಿವೃತ್ತ ಐಪಿಎಸ್ ಅಧಿಕಾರಿ ಅರವಿಂದ್ ಕುಮಾರ್ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಪ್ರವೀಣ್ ಕುಮಾರ್ ಶ್ರೀವಾಸ್ತವ ಅವರು ಅಧಿಕಾರ ವಹಿಸಿಕೊಂಡರು.



ಭಾರತದ ಕೆ.ಶ್ರೀಕಾಂತ್, ಸಾತ್ವಿಕ್ ಸಾಯಿರಾಜ್, ಸುಮೀತ್ ರೆಡ್ಡಿ, ಲಕ್ಷ್ಯ ಸೇನ್, ಚಿರಾಗ್ ಶೆಟ್ಟಿ, ತ್ರಿಶಾ ಜೋಲಿ, ಆಕರ್ಷಿ ಕಶ್ಯಪ್, ಅಶ್ವಿನಿ ಪೊನ್ನಪ್ಪ, ಗಾಯತ್ರಿ ಗೋಪಿಚಂದ್ ಮತ್ತು ಪಿ.ವಿ.ಸಿಂಧು ಸಂಭ್ರಮ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಫೈನಲ್‌ನಲ್ಲಿ ಜಯಿಸಿದ ಮಲೇಷ್ಯಾ ತಂಡ

ಭಾರತದ ಕೈತಪ್ಪಿದ ಚಿನ್ನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಮಲೇಷ್ಯಾದ ಸವಾಲನ್ನು ಮೆಟ್ಟಿನಿಲ್ಲುವಲ್ಲಿ ವಿಫಲವಾದ ಭಾರತ ತಂಡ, ಕಾಮನ್‌ವೆಲ್ತ್ ಕೂಟದ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಪದಕ ಕೊರಳಿಗೇರಿಸಿಕೊಂಡಿತು.

ಮಂಗಳವಾರ ರಾತ್ರಿ ನಡೆದ ಫೈನಲ್‌ನಲ್ಲಿ 3–1 ರಲ್ಲಿ ಗೆಲುವು ಪಡೆದ ಮಲೇಷ್ಯಾ ಚಿನ್ನದ ಪದಕ ತನ್ನದಾಗಿಸಿಕೊಂಡಿತು. ಈ ಮೂಲಕ ನಾಲ್ಕು ವರ್ಷಗಳ ಹಿಂದೆ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕೂಟದಲ್ಲಿ ತನಗೆ ಎದುರಾಗಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡಿದೆ. ಅಂದು ಮಲೇಷ್ಯಾ ತಂಡವನ್ನು ಮಣಿಸಿದ್ದ ಭಾರತ, ಚಿನ್ನ ಗೆದ್ದಿತ್ತು.

ಕೆ.ಶ್ರೀಕಾಂತ್ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ತನಗಿಂತ ಕೆಳಗಿನ ಸ್ಥಾನದಲ್ಲಿರುವ ತ್ಸೆ ಯೊಂಗ್ ಎಂಗ್ ಎದುರು ಸೋತದ್ದು ಭಾರತಕ್ಕೆ ಮುಳುವಾಗಿ ಪರಿಣಮಿಸಿತು. ಪಿ.ವಿ.ಸಿಂಧು ಮಾತ್ರ ಗೆಲುವು ಪಡೆದರು.

ಮಹಿಳೆಯರ ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಮಲೇಷ್ಯಾ ಪ್ರಬಲವಾಗಿರುವ ಕಾರಣ ಪುರುಷರ ಡಬಲ್ಸ್ ಮತ್ತು ಎರಡೂ ಸಿಂಗಲ್ಸ್‌ಗಳಲ್ಲಿ ಗೆಲ್ಲುವುದು ಭಾರತಕ್ಕೆ ಅನಿವಾರ್ಯವಾಗಿತ್ತು. ಆದರೆ ಪುರುಷರ ಡಬಲ್ಸ್ ಮತ್ತು ಪುರುಷರ ಸಿಂಗಲ್ಸ್‌ನಲ್ಲಿ ಸೋಲು ಎದುರಾಯಿತು.

ಮೊದಲು ನಡೆದ ಪುರುಷರ ಡಬಲ್ಸ್ ಪಂದ್ಯದಲ್ಲಿ ತೆಂಗ್ ಫಾಂಗ್ ಆ್ಯರನ್ ಚಿಯಾ– ವೂ ಯಿಕ್ ಸೊ 21–18, 21–15 ರಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರನ್ನು ಮಣಿಸಿ ಮಲೇಷ್ಯಾಕ್ಕೆ 1–0 ಮುನ್ನಡೆ ತಂದಿತ್ತರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು 22–20, 21–17 ರಲ್ಲಿ ಗೊ ಜಿನ್ ವೀ ಅವರನ್ನು ಮಣಿಸಿ 1–1 ರಲ್ಲಿ ಸಮಬಲಕ್ಕೆ ಕಾರಣರಾದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು, ಮೊದಲ ಗೇಮ್‌ನಲ್ಲಿ ಪ್ರಯಾಸದ ಗೆಲುವು ಪಡೆದರು. ಎರಡನೇ ಗೇಮ್‌ನಲ್ಲಿ ಆರಂಭದಿಂದಲೇ ಮೇಲುಗೈ ಸಾಧಿಸಿ ಪಂದ್ಯ ತಮ್ಮದಾಗಿಸಿಕೊಂಡರು.

ಬಳಿಕ ನಡೆದ ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 14ನೇ ಸ್ಥಾನದಲ್ಲಿರುವ ಶ್ರೀಕಾಂತ್ ಅವರು 42ನೇ ರ‍್ಯಾಂಕ್‌ನ ಆಟಗಾರ ತ್ಸೆ ಯೊಂಗ್ ಎಂಗ್ ಎದುರು 21-19, 6-21, 21-16 ರಲ್ಲಿ ಆಘಾತ ಅನುಭವಿಸಿದರು.

ಮೊದಲ ಗೇಮ್ ಸೋತ ಶ್ರೀಕಾಂತ್, ಎರಡನೇ ಗೇಮ್ ನಿರಾಯಾಸವಾಗಿ ಗೆದ್ದರು. ಆದರೆ3 ನೇ ಗೇಮ್‌ನಲ್ಲಿ ಅಮೋಘ ಆಟವಾಡಿದ ಎಂಗ್ ಪಂದ್ಯ ಜಯಿಸಿ ಮಲೇಷ್ಯಾಕ್ಕೆ 2–1ರಲ್ಲಿ ಮಹತ್ವದ ಮುನ್ನಡೆ ಒದಗಿಸಿದರು. ಎಂಗ್ ಅವರಿಗೆ ಶ್ರೀಕಾಂತ್ ಎದುರು ದೊರೆತ ಮೊದಲ ಗೆಲುವು ಇದು.

ಕೊನೆಯ ಎರಡೂ ಡಬಲ್ಸ್ ಪಂದ್ಯಗಳನ್ನು ಗೆಲ್ಲಲೇಬೇಕಾದ ಒತ್ತಡಕ್ಕೆ ಭಾರತ ಒಳಗಾಯಿತು. ಮಹಿಳೆಯರ ಡಬಲ್ಸ್‌ನಲ್ಲಿ ಆಡಿದ ಗಾಯತ್ರಿ ಗೋಪಿಚಂದ್– ತ್ರಿಶಾ ಜೋಲಿ ಅವರು 18–21, 17–21 ರಲ್ಲಿ ತಿನಾ ಮುರಳೀಧರನ್– ಕೂಂಗ್ ಲಿ ಪರ್ಲಿ ತಾನ್ ಕೈಯಲ್ಲಿ ಸೋತರು.

ಜೂಡೊ: ತೂಲಿಕಾ ಮಾನ್‌ಗೆ ಬೆಳ್ಳಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ತೂಲಿಕಾ ಮಾನ್ ಅವರು ಮಹಿಳಾ ಜೂಡೊ ಸ್ಪರ್ಧೆಯ 78 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದರು.

ಬುಧವಾರ ರಾತ್ರಿ ನಡೆದ ಫೈನಲ್‌ನಲ್ಲಿ ತೂಲಿಕಾ ಅವರು ಸ್ಕಾಟ್ಲೆಂಡ್‌ನ ಸಾರಾ ಅಡ್ಲಿಂಗ್ಟನ್ ಎದುರು 1–10 ರಲ್ಲಿ ಸೋತರು.

ಎದುರಾಳಿಯನ್ನು ಕೆಳಕ್ಕೆ ಬೀಳಿಸಿ ಒಂದು ಪಾಯಿಂಟ್ ಗಿಟ್ಟಿಸಿಕೊಂಡಿದ್ದ ತೂಲಿಕಾ ಅವರು ಚಿನ್ನ ಗೆಲ್ಲುವ ಭರವಸೆ ಮೂಡಿಸಿದ್ದರು. ಆದರೆ ಪಂದ್ಯ ಕೊನೆಗೊಳ್ಳಲೇ ಸೆಕೆಂಡುಗಳು ಇರುವಾಗ ಸಾರಾ ಅವರು, ತೂಲಿಕಾ ಅವರನ್ನು ನೆಲಕ್ಕುರುಳಿಸಿ ‘ಇಪ್ಪೊ’ ಪಾಯಿಂಟ್ ಗಿಟ್ಟಿಸಿಕೊಂಡು ಜಯ ಸಾಧಿಸಿದರು.

ಕೊನೆಯ ಕೆಲವು ಸೆಕೆಂಡುಗಳಲ್ಲಿ ರಕ್ಷಣಾತ್ಮಕವಾಗಿ ಆಡಿದ್ದರೆ ಚಿನ್ನದ ಪದಕ ಭಾರತದ ಸ್ಪರ್ಧಿಯ ಕೊರಳಿಗೇರುತ್ತಿತ್ತು. ಆದರೆ ಅದೃಷ್ಟ ಅವರ ಪರವಾಗಿರಲಿಲ್ಲ.

ನಾಲ್ಕು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿರುವ 22 ವರ್ಷದ ತೂಲಿಕಾ, ಇದನ್ನೂ ಮುನ್ನ ನಡೆದ ಸೆಮಿಫೈನಲ್ ಹಣಾಹಣಿಯಲ್ಲಿ ನ್ಯೂಜಿಲೆಂಡ್‌ನ ಸಿಡ್ನಿ ಆ್ಯಂಡ್ರೂಸ್ ಅವರನ್ನು ಮಣಿಸಿದ್ದರು. ಕೇವಲ ಮೂರು ನಿಮಿಷಗಳಲ್ಲಿ ಎದುರಾಳಿಗೆ ಸೋಲಿನ ರುಚಿ ತೋರಿಸಿದ್ದರು.

ಪುರುಷರ 100 ಕೆಜಿ ರಿಪೇಚ್ ಸುತ್ತಿನಲ್ಲಿ ಸ್ಪರ್ಧಿಸಿದ್ದ ದೀಪಕ್ ದೇಸ್ವಾಲ್ ಅವರು ಫಿಜಿಯ ತೆವಿಟಾ ತಕವಾಯಾ ಎದುರು ಸೋಲು ಅನುಭವಿಸಿದರು.

ಜೂಡೊದಲ್ಲಿ ಭಾರತಕ್ಕೆ ದೊರೆತ ಮೂರನೇ ಪದಕ ಇದು. ಎಲ್.ಸುಶೀಲಾ ದೇವಿ ಮತ್ತು ವಿಜಯ್ ಕುಮಾರ್ ಅವರು ಕ್ರಮವಾಗಿ ಮಹಿಳೆಯರ 48 ಕೆ.ಜಿ ಮತ್ತು ಪುರುಷರ 60 ಕೆ.ಜಿ. ವಿಭಾಗದಲ್ಲಿ ಕಂಚು ಜಯಿಸಿದ್ದರು.



ಜೂಡೊದಲ್ಲಿ ಬೆಳ್ಳಿ ಗೆದ್ದ ತೂಲಿಕಾ ಮಾನ್

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	42	34	35	111
2	ಇಂಗ್ಲೆಂಡ್	35	34	24	93
3	ನ್ಯೂಜಿಲೆಂಡ್	14	8	8	30
4	ಕೆನಡಾ	12	17	19	48
5	ದಕ್ಷಿಣ ಆಫ್ರಿಕಾ	6	5	7	18
7	ಭಾರತ	5	6	5	16



ಪಂದ್ಯ ಗೆದ್ದ ಬಳಿಕ ಭಾವುಕರಾದ ಸೌರವ್ ಘೋಷಾಲ್– ಎಎಫ್‌ಪಿ ಚಿತ್ರ

ಸ್ಕ್ವಾಷ್: ಸೌರವ್‌ಗೆ ಐತಿಹಾಸಿಕ ಕಂಚು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಸೌರವ್ ಘೋಷಾಲ್ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದ ಸ್ಕ್ವಾಷ್ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಕೂಟದ ಇತಿಹಾಸದಲ್ಲಿ ಈ ವಿಭಾಗದಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ ಇದು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 15ನೇ ಸ್ಥಾನ ದಲ್ಲಿರುವ ಸೌರವ್, ಬುಧವಾರ ನಡೆದ ಕಂಚಿನ ಪದಕದ ಸುತ್ತಿನ ಪ್ಲೇ ಆಫ್‌ನಲ್ಲಿ 11-6, 11-1, 11-4ರಿಂದ ಇಂಗ್ಲೆಂಡ್‌ನ ಜೇಮ್ಸ್ ವಿಲ್‌ಸ್ಟ್ರಾಪ್ ಅವರನ್ನು ಸೋಲಿಸಿದರು.

ಸೌರವ್ ಅವರಿಗೆ ಕಾಮನ್‌ವೆಲ್ತ್ ಕೂಟದಲ್ಲಿ ಇದು ಎರಡನೇ ಪದಕ. 2018ರ ಗೋಲ್ಡ್‌ಕೋಸ್ಟ್ ಆವೃತ್ತಿಯಲ್ಲಿ ದೀಪಿಕಾ ಪಳ್ಳಿಕಲ್ ಜೊತೆಗೂಡಿ ಮಿಶ್ರ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಈ ಪಂದ್ಯದಲ್ಲಿ ಸೌರವ್ ಸಂಪೂರ್ಣ ಪ್ರಾಬಲ್ಯ ಮೆರೆದರು.

ಪ್ರೀಕ್ವಾರ್ಟರ್‌ಗೆ ಜೋಷ್ನಾ–ಹರಿಂದರ್: ಜೋಷ್ನಾ ಚಿಣ್ಣಪ್ಪ ಹಾಗೂ ಹರಿಂದರ್ ಪಾಲ್ ಸಿಂಗ್ ಸಂಧು ಅವರು ಮಿಶ್ರ ಡಬಲ್ಸ್‌ನಲ್ಲಿ ಪ್ರೀಕ್ವಾರ್ಟರ್ ಫೈನಲ್ ತಲುಪಿದ್ದಾರೆ.

ಭಾರತದ ಜೋಡಿಯು, 8-11 11-4 11-3ರಿಂದ ಶ್ರೀಲಂಕಾದ ಯೆಹೆನಿ ಕುರುಪ್ಪು ಮತ್ತು ರವಿಂದು ಲಾಕ್ಸಿರಿ ಅವರನ್ನು ಮಣಿಸುವಲ್ಲಿ ಯಶಸ್ವಿಯಾಯಿತು.

ಸುನೈನಾಗೆ ಜಯ: ಮಹಿಳಾ ಸ್ಕ್ವಾಷ್‌ನ ಸಿಂಗಲ್ಸ್ ಪ್ಲೇಟ್ ಫೈನಲ್‌ನಲ್ಲಿ ಜಯ ಸಾಧಿಸಿದರು. ಅವರು 11-7, 13-11, 11-2ರಿಂದ ಗಯಾನಾದ ಫಂಗ್ ಎ ಫಾಟ್ ಅವರನ್ನು ಪರಾಭವಗೊಳಿಸಿದರು.

ಡಿಸ್ಕಸ್ ಥ್ರೋ: ಸೀಮಾಗೆ ಐದನೇ ಸ್ಥಾನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಡಿಸ್ಕಸ್‌ಥ್ರೋ ಸ್ಪರ್ಧಿಗಳಾದ ಸೀಮಾ ಪೂನಿಯಾ ಮತ್ತು ನವಜೀತ್ ಕೌರ್ ಧಿಲ್ಲೋನ್ ಅವರು ನಿರೀಕ್ಷಿತ ಪ್ರದರ್ಶನ ನೀಡದೆ ನಿರಾಸೆ ಉಂಟುಮಾಡಿದರು.

ಮಂಗಳವಾರ ರಾತ್ರಿ ನಡೆದ ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಇವರಿಬ್ಬರು ಕ್ರಮವಾಗಿ ಐದು ಹಾಗೂ ಎಂಟನೇ ಸ್ಥಾನ ಪಡೆದರು. ತಮ್ಮ ಕೊನೆಯ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಂಡಿರುವ 39 ವರ್ಷದ ಸೀಮಾ, 55.92 ಮೀ. ಎಸೆದರು. ಎರಡನೇ ಪ್ರಯತ್ನದಲ್ಲಿ ಅವರು ಈ ದೂರ ಕಂಡುಕೊಂಡರು. ಆದರೆ ಪದಕ ಗಿಟ್ಟಿಸಲು ಅಷ್ಟು ದೂರ ಸಾಲದಾಯಿತು.

ಸೀಮಾ ಅವರು ಕಾಮನ್‌ವೆಲ್ತ್ ಕೂಟ ದಿಂದ ಬರಿಗೈಯಲ್ಲಿ ಮರಳಿರುವುದು ಇದೇ ಮೊದಲು. 2006, 2014 ಮತ್ತು 2018 ರ ಕೂಟಗಳಲ್ಲಿ ಬೆಳ್ಳಿ ಗೆದ್ದಿದ್ದ ಅವರು 2010ರ ನವದೆಹಲಿ ಕೂಟದಲ್ಲಿ ಕಂಚು ಪಡೆದಿದ್ದರು. ಅವರ ಈ ಋತುವಿನ ಅತ್ಯುತ್ತಮ ಪ್ರದರ್ಶನ 57.09 ಮೀ. ಆಗಿದೆ. ನವಜೀತ್ 53.51 ಮೀ. ದೂರ ಎಸೆದರು. ಈ ಋತುವಿನ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (58.03 ಮೀ.) ತುಂಬಾ ಹಿಂದೆ ಉಳಿದುಕೊಂಡರು.ನೈಜೀರಿಯದ ಚಿಯೊಮ ಒನ್ಯೆವೆರ್ (61.70 ಮೀ.)ಚಿನ್ನ ಗೆದ್ದರು. ಇಂಗ್ಲೆಂಡ್‌ನ ಜೇಡ್ ಲಲಿ (58.42 ಮೀ.) ಬೆಳ್ಳಿ ಹಾಗೂ ನೈಜೀರಿಯದ ಒಬಿಯಗೆರಿ ಅಮೆಚಿ (56.99 ಮೀ.) ಕಂಚು ಜಯಿಸಿದರು.

ಸೆಮಿಫೈನಲ್‌ಗೆ ಹುಸಾಮುದ್ದೀನ್, ನೀತು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಬಾಕ್ಸರ್‌ಗಳಾದ ಮೊಹಮ್ಮದ್ ಹುಸಾಮುದ್ದೀನ್ ಮತ್ತು ನೀತು ಗಂಗಾಸ್ ಅವರು ಸೆಮಿಫೈನಲ್ ಪ್ರವೇಶಿಸಿದ್ದು, ಎರಡು ಪದಕ ಖಚಿತಪಡಿಸಿಕೊಂಡಿದ್ದಾರೆ.

ಬುಧವಾರ ನಡೆದ ಪುರುಷರ 57 ಕೆ.ಜಿ. ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಹುಸಾಮುದ್ದೀನ್ 4–1 ರಲ್ಲಿ ನಮೀಬಿಯದ ಟ್ರಯಾಗೈನ್ ಮಾರ್ನಿಂಗ್ ಅವರನ್ನು ಮಣಿಸಿದರು.

28 ವರ್ಷದ ಹುಸಾಮುದ್ದೀನ್ ಪ್ರಬಲ ಪಂಚ್‌ಗಳ ಮೂಲಕ ಎದುರಾಳಿಯ ಮೇಲೆ ಸವಾರಿ ಮಾಡಿದರು. ಟ್ರಯಾಗೈನ್ ಕೂಡಾ ಪಟ್ಟುಬಿಡದೆ ಹೋರಾಟ ನಡೆಸಿದರು. ತೀರ್ಪುಗಾರರು ಅಂತಿಮವಾಗಿ ಹುಸಾಮುದ್ದೀನ್ ಅವರನ್ನು ವಿಜೇತ ಎಂದು ಘೋಷಿಸಿದರು. ಭಾರತದ ಬಾಕ್ಸರ್ ಕಳೆದ ಕಾಮನ್‌ವೆಲ್ತ್ ಕೂಟದಲ್ಲಿ ಕಂಚು ಜಯಿಸಿದ್ದರು.

ನೀತು ಅವರು ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ನಾರ್ತರ್ನ್ ಐರ್ಲೆಂಡ್‌ನ ನಿಕೋಲ್ ಕ್ಲೈಡ್ ಎದುರು ಗೆದ್ದರು. ಮೊದಲ ಎರಡು ಸುತ್ತುಗಳಲ್ಲಿ ನೀತು, ಎದುರಾಳಿಯ ಮೇಲೆ ಸ್ಪಷ್ಟ ಮೇಲುಗೈ ಪಡೆದರು. ಈ ಹಣಾಹಣಿ ಏಕಪಕ್ಷೀಯವಾಗಿ ಸಾಗಿದ ಕಾರಣ ರೆಫರಿ, ಮೂರನೇ ಸುತ್ತಿನಲ್ಲಿ ಹೋರಾಟ ನಿಲ್ಲಿಸಿದರು.

ವೇಟ್‌ಲಿಫ್ಟಿಂಗ್: 109 ಕೆ.ಜಿ. ವಿಭಾಗದಲ್ಲಿ ಸಾಧನೆ

ಕಂಚು ಗೆದ್ದ ಲವಪ್ರೀತ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕೂಟದ ವೇಟ್‌ಲಿಫ್ಟಿಂಗ್‌ನಲ್ಲಿ ಭಾರತದ ಪದಕದ ಬೇಟೆ ಮುಂದುವರಿದಿದ್ದು, ಲವಪ್ರೀತ್ ಸಿಂಗ್ ಅವರು ಪುರುಷರ 109 ಕೆ.ಜಿ ವಿಭಾಗದಲ್ಲಿ ಕಂಚು ಗೆದ್ದರು.


ಬುಧವಾರ ನಡೆದ ಸ್ಪರ್ಧೆಯಲ್ಲಿ ಅವರು ಒಟ್ಟು 355 ಕೆ.ಜಿ. ಭಾರ ಎತ್ತಿದರು. ಸ್ನ್ಯಾಚ್‌ನಲ್ಲಿ 163 ಕೆ.ಜಿ ಹಾಗೂ ಕ್ಲೀನ್–ಜರ್ಕ್‌ನಲ್ಲಿ 192 ಕೆ.ಜಿ ಸಾಧನೆ ಮಾಡಿದರು.

ಸ್ನ್ಯಾಚ್‌ನಲ್ಲಿ 157 ಕೆ.ಜಿ.ಯೊಂದಿಗೆ ಸ್ಪರ್ಧೆ ಆರಂಭಿಸಿದ ಅವರು ಕೊನೆಯ ಪ್ರಯತ್ನದಲ್ಲಿ 163 ಕೆ.ಜಿ. ಭಾರ ಎತ್ತಿದರು. ಕ್ಲೀನ್ ಮತ್ತು ಜರ್ಕ್‌ನಲ್ಲಿ ಮೂರು ಅವಕಾಶಗಳಲ್ಲಿ ಕ್ರಮವಾಗಿ 185 ಕೆ.ಜಿ, 189 ಕೆ.ಜಿ ಮತ್ತು 192 ಕೆ.ಜಿ. ಭಾರ ಎತ್ತಿದರು.

ಕ್ಯಾಮರೂನ್‌ನ ಜೂನಿಯರ್ ಎನ್ಯಬೆಯು 361 ಕೆ.ಜಿ.ಯೊಂದಿಗೆ ಚಿನ್ನ ಗೆದ್ದರು. ಸ್ನ್ಯಾಚ್ ಮತ್ತು ಕ್ಲೀನ್– ಜರ್ಕ್‌ನಲ್ಲಿ ಅವರು ಕ್ರಮವಾಗಿ 160 ಕೆ.ಜಿ ಹಾಗೂ 201 ಕೆ.ಜಿ ಸಾಧನೆ ಮಾಡಿದರು. ಸಮೋವದ ಜಾಕ್ ಒಪೆಲೊಗ್ (358 ಕೆ.ಜಿ) ಬೆಳ್ಳಿ ಪಡೆದರು.

‘ಅಂತರರಾಷ್ಟ್ರೀಯ ಮಟ್ಟದಲ್ಲಿ ನಾನು ಪಾಲ್ಗೊಂಡ ಅತಿದೊಡ್ಡ ಕ್ರೀಡಾಕೂಟ ಇದು. ಶ್ರೇಷ್ಠ ಸಾಧನೆ ತೋರಿ, ಪದಕ ಗೆಲ್ಲುವಲ್ಲಿ ಯಶಸ್ವಿಯಾಗಿದ್ದೇನೆ’ ಎಂದು 24 ವರ್ಷದ ಲವಪ್ರೀತ್ ಸಂತಸ ವ್ಯಕ್ತಪಡಿಸಿದರು.

ಪೂರ್ಣಿಮಾಗೆ 6ನೇ ಸ್ಥಾನ: ಪೂರ್ಣಿಮಾ ಪಾಂಡೆ, ಮಹಿಳೆಯರ 87 ಕೆ.ಜಿ. ವಿಭಾಗದಲ್ಲಿ ಆರನೇ ಸ್ಥಾನ ಪಡೆದರು. ಅವರು ಒಟ್ಟು 228 ಕೆ.ಜಿ. (103 + 125) ಭಾರ ಎತ್ತಿದರು. 286 ಕೆ.ಜಿ ಎತ್ತಿದ ಇಂಗ್ಲೆಂಡ್‌ನ ಎಮಿಲಿ ಕ್ಯಾಂಪ್‌ಬೆಲ್ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.



ಕಂಚು ಗೆದ್ದ ಲವಪ್ರೀತ್ ಸಿಂಗ್– ಪಿಟಿಐ ಚಿತ್ರ

ವೇಟ್‌ಲಿಫ್ಟಿಂಗ್‌ನಲ್ಲಿ ಭಾರತ ಇದುವರೆಗೆ ಮೂರು ಚಿನ್ನ ಸೇರಿದಂತೆ ಒಟ್ಟು 9 ಪದಕಗಳನ್ನು ಗೆದ್ದುಕೊಂಡಿದೆ.

ಹಾಕಿ: ಸೆಮಿಗೆ ಸವಿತಾ ಪಡೆ

ಎಂಟರಘಟ್ಟದ ಹಣಾಹಣಿಯಲ್ಲಿ ಕೆನಡಾ ವಿರುದ್ಧ ಜಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕೆಲವು ಆತಂಕದ ಕ್ಷಣಗಳನ್ನು ಎದುರಿಸಿದರೂ ಭಾರತ ಮಹಿಳಾ ಹಾಕಿ ತಂಡವು ಕೆನಡಾಗೆ ಸೋಲುಣಿಸಿ ಕಾಮನ್‌ವೆಲ್ತ್ ಕ್ರೀಡಾಕೂಟದ ಸೆಮಿಫೈನಲ್ ತಲುಪುವಲ್ಲಿ ಯಶಸ್ವಿಯಾಯಿತು.

ಬುಧವಾರ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಸವಿತಾ ಪೂನಿಯಾ ನಾಯಕತ್ವದ ಭಾರತ ತಂಡವು 3–2ರಿಂದ ಗೆಲುವು ಸಾಧಿಸಿತು.

ಸಲೀಮಾ ಟೆಟೆ (3ನೇ ನಿಮಿಷ) ಹಾಗೂ ನವನೀತ್ ಕೌರ್ (22ನೇ ನಿ.) ಗಳಿಸಿದ ಗೋಲುಗಳ ನೆರವಿನಿಂದ ಭಾರತವು ಪಂದ್ಯದ ಮೇಲೆ ನಿಯಂತ್ರಣ ಸಾಧಿಸಿತ್ತು. ಆದರೆ ಮಿಂಚಿನ ಆಟವಾಡಿದ ಎದುರಾಳಿ ತಂಡವು ಬ್ರಿಯೆನ್ನಾ ಸ್ಟೇರ್ಸ್ (23ನೇ ನಿ.) ಮತ್ತು ಹನ್ನಾ ಹಾನ್ (39ನೇ ನಿ.) ಅವರ ಮೂಲಕ ಗೋಲು ಗಳಿಸಿ ಸಮಬಲ ಸಾಧಿಸಿತು.

51ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದ ಲಾಲ್‌ರೆಮ್ಸಿಯಾಮಿ ಭಾರತ ತಂಡವನ್ನು ಆತಂಕದಿಂದ ಪಾರು ಮಾಡಿದರು.

‘ಎ’ ಗುಂಪಿನಲ್ಲಿ ಇಂಗ್ಲೆಂಡ್ ತಂಡವು ಈಗಾಗಲೇ ಸೆಮಿಫೈನಲ್ ಸ್ಥಾನ ಖಚಿಪಡಿಸಿಕೊಂಡಿರುವುದರಿಂದ ಭಾರತ ಈ ಪಂದ್ಯವನ್ನು ಗೆಲ್ಲಲೇಬೇಕಿತ್ತು. ಕೆನಡಾ ಡ್ರಾ ಮಾಡಿಕೊಂಡಿದ್ದರೂ ಗೋಲು ಅಂತರದ ಆಧಾರದಲ್ಲಿ ನಾಲ್ಕರ ಘಟ್ಟ ತಲುಪುತ್ತಿತ್ತು.



ಭಾರತದ ಆಟಗಾರ್ತಿಯರ ಗೆಲುವಿನ ಸಂಭ್ರಮ– ಎಪಿ ಚಿತ್ರ

ನಾಲ್ಕರ ಘಟ್ಟಕ್ಕೆ ಪುರುಷರ ತಂಡ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಹಾಕಿ ತಂಡದ ಹರ್ಮನ್‌ಪ್ರೀತ್ ಸಿಂಗ್ ಮತ್ತು ಆಕಾಶದೀಪ್ ಸಿಂಗ್ ಅವರು ಮೂಡಿಸಿದ ಮಿಂಚಿನ ಸಂಚಲನದ ಮುಂದೆ ಕೆನಡಾ ಮಂಕಾಯಿತು.

ಕಾಮನ್‌ವೆಲ್ತ್ ಕ್ರೀಡಾಕೂಟದದಲ್ಲಿ ಬುಧವಾರ ನಡೆದ ಪುರುಷರ ಬಿ ಗುಂಪಿನ ಹಾಕಿ ಪಂದ್ಯದಲ್ಲಿ ಭಾರತ ತಂಡವು 8–0ಯಿಂದ ಕೆನಡಾ ವಿರುದ್ಧ ಅಧಿಕಾರಯುತ ಜಯ ಸಾಧಿಸಿ ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟಿತು. ಹರ್ಮನ್‌ಪ್ರೀತ್ (7ನಿ, 54ನೆ, ನಿಮಿಷ) ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳನ್ನಾಗಿ ಪರಿವರ್ತಿಸಿದರು. ಆಕಾಶ್ ದೀಪ್ (38ನಿ, 60ನೇ ನಿ) ಎರಡು ಫೀಲ್ಡ್ ಗೋಲುಗಳನ್ನು ದಾಖಲಿಸಿದರು. ಅಮಿತ್ ರೋಹಿದಾಸ್ (10ನಿ), ಲಲಿತ್ ಉಪಾಧ್ಯಾಯ (20ನಿ), ಗುರ್ಜಂತ್ ಸಿಂಗ್ (27ನಿ) ಮತ್ತು ಮನದೀಪ್ ಸಿಂಗ್ (58ನಿ) ತಂಡದ ಗೆಲುವಿಗೆ ಬಲ ತುಂಬಿದರು. ಈ ಗೆಲುವಿನಿಂದಾಗಿ ಗುಂಪಿನ ಅಂಕಪಟ್ಟಿಯಲ್ಲಿ ಭಾರತವು ಅಗ್ರಸ್ಥಾನಕ್ಕೇರಿತು. ಗುರುವಾರ ನಡೆಯಲಿರುವ ಗುಂಪಿನ ಕೊನೆಯ ಪಂದ್ಯದಲ್ಲಿ ಭಾರತ ತಂಡವು ವೇಲ್ಸ್ ಎದುರು ಸೆಣಸಲಿದೆ.

ಲಾನ್ ಬಾಲ್ಸ್: ಲವ್ಲಿ–ಸೈಕಿಯಾ, ಮೃದುಲ್‌ಗೆ ಗೆಲುವು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಲಾನ್ ಬಾಲ್ಸ್ ಕ್ರೀಡೆಯಲ್ಲಿ ಭಾರತದ ಸ್ಪರ್ಧಿಗಳ ಉತ್ತಮ ಪ್ರದರ್ಶನ ಮುಂದುವರಿದಿದ್ದು, ಮಹಿಳೆಯರ ಡಬಲ್ಸ್‌ನಲ್ಲಿ ಲವ್ಲಿ ಚೌಬೆ ಮತ್ತು ನಯನ್ಮಣಿ ಸೈಕಿಯಾ ಅವರು ಗೆಲುವು ಪಡೆದರು.

ಬುಧವಾರ ನಡೆದ ಪಂದ್ಯದಲ್ಲಿ ಭಾರತದ ಜೋಡಿ 23–6 ರಲ್ಲಿ ನಿಯು ದ್ವೀಪದ ಹಿನಾ ರೆರಿಟ– ಒಲಿವಿಯಾ ಬಕಿಂಗ್‌ಹ್ಯಾಮ್ ಜೋಡಿಯನ್ನು ಮಣಿಸಿತು. ಭಾರತದ ಜೋಡಿ ಮುಂದಿನ ಸುತ್ತಿನಲ್ಲಿ ದಕ್ಷಿಣ ಆಫ್ರಿಕಾ ತಂಡದ ಜತೆ ಪೈಪೋಟಿ ನಡೆಸಲಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಮೃದುಲ್ ಬೋರ್ಗೋಹೈನ್ ಆಡಿದ ಎರಡೂ ಪಂದ್ಯಗಳಲ್ಲಿ ಗೆಲುವು ಸಾಧಿಸಿದರು. ಎರಡನೇ ಸುತ್ತಿನಲ್ಲಿ ಅವರು 21–5 ರಲ್ಲಿ ಫಾಲ್ಕನ್ ದ್ವೀಪದ ಕ್ರಿಸ್ ಲಾಕಿ ಅವರನ್ನು ಮಣಿಸಿದರೆ, ಮೂರನೇ ಸುತ್ತಿನಲ್ಲಿ 21–19 ರಲ್ಲಿ ಸ್ಕಾಟ್ಲೆಂಡ್‌ನ ಇಯಾನ್ ಮೆಕ್‌ಲೀನ್ ಎದುರು ಗೆದ್ದರು.

ಶ್ರೀಲಂಕಾ ಅಥ್ಲೀಟ್‌ಗಳು ಕಾಣೆ: ತನಿಖೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ಆಗಮಿಸಿದ್ದ ಶ್ರೀಲಂಕಾದ ಇಬ್ಬರು ಅಥ್ಲೀಟ್‌ಗಳು ಮತ್ತು ಒಬ್ಬ ಅಧಿಕಾರಿ ಕಾಣೆಯಾಗಿದ್ದಾರೆ. ಈ ಪ್ರಕರಣದ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ. ರಾಜಕೀಯ ಬಿಕ್ಕಟ್ಟು ಭುಗಿಲೆದ್ದಿರುವ ಶ್ರೀಲಂಕಾ ದೇಶವು 161 ಸದಸ್ಯರ ತಂಡವನ್ನು ಕೂಟಕ್ಕೆ ಕಳುಹಿಸಿದೆ. ಈ ತಂಡದಲ್ಲಿ 51 ಅಧಿಕಾರಿಗಳು ಇದ್ದಾರೆ. ಈ ತಂಡದ ಒಬ್ಬ ಜುಡೊ ಪಟು, ಮ್ಯಾನೇಜರ್ ಮತ್ತು ಒಬ್ಬ ಕುಸ್ತಿಪಟು ಕಾಣೆಯಾಗಿದ್ದಾರೆಂದು ಮೂಲಗಳು ಖಚಿತಪಡಿಸಿವೆ.

ಕ್ರಿಕೆಟ್: ಜೆಮಿಮಾ ಅರ್ಧಶತಕ

ಬರ್ಮಿಂಗ್‌ಹ್ಯಾಮ್: ಜೆಮಿಮಾ ರಾಡ್ರಿಗಸ್ ಅವರ ಅರ್ಧಶತಕದ (ಔಟಾಗದೆ 56, 46 ಎ.) ನೆರವಿನಿಂದ ಭಾರತ ಮಹಿಳಾ ತಂಡದವರು ಕಾಮನ್‌ವೆಲ್ತ್ ಕೂಟದ ಟಿ20 ಪಂದ್ಯದಲ್ಲಿ ಬಾರ್ಬಡೀಸ್ ತಂಡದ ಗೆಲುವಿಗೆ 163 ರನ್‌ಗಳ ಗುರಿ ನೀಡಿದೆ.

ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 162 ರನ್ ಗಳಿಸಿತು. ಶಫಾಲಿ ವರ್ಮಾ (43 ರನ್, 26 ಎ.) ಮತ್ತು ದೀಪ್ತಿ ಶರ್ಮಾ (ಔಟಾಗದೆ 34, 28 ಎ.) ಅವರೂ ತಂಡಕ್ಕೆ ಆಸರೆಯಾದರು.



ಜೆಮಿಮಾ

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 162 (ಶಫಾಲಿ ವರ್ಮಾ 43, ಜೆಮಿಮಾ ರಾಡ್ರಿಗಸ್ ಔಟಾಗದೆ 56, ದೀಪ್ತಿ ಶರ್ಮಾ ಔಟಾಗದೆ 34, ಶಾನಿಕ ಬ್ರೂಸ್ 17ಕ್ಕೆ 1, ಹೇಯ್ಲಿ ಮ್ಯಾಥ್ಯೂಸ್ 29ಕ್ಕೆ 1) ವಿವರ ಅಪೂರ್ಣ